ಪಾರ್ವತಿಗೆ ಮನೆಯಲ್ಲಿ ದುರ್ಜನರ ಕಾಟವು ಬಹಳ ವಿರುತ್ತದೆ. ಸವತಿಯಾದ ಗಂಗೆಯು ಇದ್ದಾಳೆ. ಆಕೆ ಯಂತೂ ಸ್ವಭಾವದಿಂದಲೇ ವಕ್ರಳು ಮತ್ತು " ಸಂಧ್ಯಾ ರಾಗವತೀ " ಇರುವಳು ಹೊತ್ತು ಮುಳುಗುತ್ತಲೇ ಆಕೆಗೆ ಎರಡನೆಯ ರಂಗು ಬರುತ್ತದೆ ಸರ್ವದಂಡಾ " ದ್ವಿಜಜ್ಞಾ" (ವರಡು ನಾಲಿಗೆ)ಯುಳ್ಳದು. ಇದಂತೂ ಪ್ರಸಿದ್ಧವೇ ಆದೆ. ಚಂದ್ರನು ಕಲಂಕೆಯು ಇದ್ದಾನೆ ಮತ್ತು ಅವನು ಅಕ್ಕಂತ ವಕ್ರವೂ ಇದ್ದಾನೆ ನಂದಿಯು ಕಪಿಯ ಮುಖವನ್ನಿದ್ದಾನೆ ವಾಹನವ ಎತ್ತಂತೂ ಪಶುವೇ ಆಗಿದೆ ದುರ್ಜನರಿಂದ ಕೂಡಿದ ಇಂಥ ಮನೆ ಯಲ್ಲಿ ಈಗ ಪಾರ್ವತಿಯು ಹೇಗಾಗಬೇಕು ಹೀಗೆ ಜೆಂತೆ ಯನ್ನು ಮಾಡುವ ಹಾಗೂ ಕೈಯಲ್ಲಿ ಭಿಕ್ಷೆಗಾಗಿ ನರಪ ಪಾಲನ್ನು ಹಿಡಿದ ಗೌರಿಯು ನಮ್ಮೆಲ್ಲರ ರಕ್ಷಣೆಯನ್ನು ಮಾಡಲಿ

ಸಂಧ್ಯಾರಾಗವತೀ ಸ್ವಭಾವಕುಟಿಲಾ ಗಂಗಾ ದ್ವಿಜಿಹ್ವಃ ಫಣೀ । ಪಕ್ಕೈಂಗೈಕಮೃಗಾಧಿಪಃ ಶಠ ಕಪಿಮುಖೋ ನಂದೀಚ ಮುಖೋ ವೃಷಃ । ಇತ್ಯಂ ಯಜ್ಞನಿ ಸಂಗಳೇ ಪತಿಗೃಹೇ ಪತ್ನ್ಯಸ್ಯಚಿತ್ತಸ್ಥಿರಂ । ಗೌರೀಶ್ವಂ ನೃಪಸಾಲಪಾನಕೆಮಲಾ ಪಾಂತಾಸ್ವಾ ಪಾತುವಃ ॥

ಸರ್ವವು ಗಣಪತಿಯ ವಾಹನವಾದ ಇಲಿಯನ್ನು ಹಸುವೆಯಂದು ಅಲಿ ತಿನ್ನಲೇಸ್ಪಿಸುತ್ತದೆ. ಅದು ಇಲಿಯಮೇಲೆ ಜಿಗಿದಕೂಡಲೇ ಹಣ್ಮುಖನ ವಾಹನ ವಾದ ನವಿಲು ಆ ಸರ್ಪದ ಮೇಲೆ ಜಿಗಿಯುತ್ತದೆ ಇತ್ತ ಪಾರ್ವತಿಯ ವಾಹನವಾದ ಸಿಂಹವು ಗಜಾನನ ಮೇಲೆ ದೃಷ್ಟಿಯಿಟ್ಟು ಇಟ್ಟುಕೊಂಡೇ ಕೂತಿರುತ್ತದೆ. ಇವುಗಳ ಮೇಲೆ ಲಕ್ಷ್ಯವಿಟ್ಟುಕೊಂಡು ಶಂಕರರೆ ಅತ್ತ ಸವತಿಯಾದ ಗಂಗಾ, ಗೌರಿಯರ ಜಗಳವು ನಡದೇ ಇರುತ್ತದೆ ಮತ್ತು ಅಗ್ನಿತೇಜವು ಮತ್ತಷ್ಟಧಿಕವಾಗಿ ಜಂದ್ರನ ಕಡೆಗೆ ಹಲ್ಲುಕಡಿಯುತ್ತಿರುವದು. ಹೀಗೆ ಹಗಲೂ ರಾತ್ರಿಯೂ ಜಗಳ ಪಡೆಯುವದರಿಂದ ತಿವನು ಪೇಸತ್ತು ವಿಷಣಾವಮಾಡಿದಪ್ಪ.

ಅಮ್ಮಂ ಮಾಂಭಃ ಪಾಪಸಂ ಗಣಪತೇರಾಮಂ ಶ್ಲುಥಾಕ್ಷಃ ಫಣೀ । ತಂ ಚ ಕ್ರೌಂಚಪತೇಃ ಶಿಪೀಣ ಗಿರಿಜಾನಿಂಹೋಽಪಿ ನಾಗಾನನಂ । ಗೌರೀಚಿತ್ತಸುಖಾಸುಖಾಯಿತ ಕಲಾನಾಥಂ ಶಿವಾಲಾನಮೋ । ನಿರಿಣ್ಣಾಚಿಪಲೌ ಋಜುಂಬಳಪಾದೀ ಪೋಷಿ ಪಾಲಾಪಲಂ ॥

ಪಾರ್ವತಿಯು ಪರ್ವತಪುತ್ರಿಯಿ ಹುಟ್ಟಿದಳು. 'ಅಪರ್ಣಾ' ಯಾವತರಲ್ಲಿ ಎರೆಯೂ ಕೂಡ ಇರುವದಿಲ್ಲವೋ ಅದಕ್ಕೆ ಜಾವು ಸುಸುಚಿಧವಜ್ಞಾಗಿ ತಿಳಿಯುತ್ತೀವೆ ಯಾಕಂ ದರೇ, ಅವಣೇಯು ಯಾವ ಪ್ರಭಾವದಿಂದಲೋ ಜಪ್ಪ ದಿಂದ ತೂಲರೋಗಿಯಾದ ತಿವನು ಬಲಾಪಲವನ್ನು ಪಾಪತಾಪಿಯೂ ಮೃತ್ಯುಂಜಯಾಗಿದ್ದಾನೆ.

ಪಾರ್ವತೀ ಜಾಸಿಧೀಯೋಜಾಸುಪರ್ಣಾ ಮೃಗಯಾಜಾಪೀ । ತೂಲೀ ಬಲಾಪಲಂ ಪಿಣ್ಣಾ ಯಯಾ ಮೃತ್ಯುಂಜಯೋಜಾ ಭವಃ ॥

"ಅಪರ್ಣಾ" ಅರ್ಥಾತ್ ಎಲೆ ಇಲ್ಲದೇ ಇರತಕ್ಕ ಬಳ್ಳಿಯಷ್ಟು ತಿಳಿದ ಜಪರು ಯಾವಾಗಲೂ ಅಶ್ಯಯ ಮಾಡಿಕೊಂಡಿರಬೇಳು. 'ಯಾಕಂದರೆ ಅದು ಅಶ್ಯಾದಿ ನಿಜ ಕೂಡಲೇ ' ಶ್ಯಾಣಾ ' (ತಿವ, ಒಣಗದ ಬಳ್ಳಿಯು) ಕೂಡ ಅಮ್ಯತಫಲವನ್ನು ಹುಟ್ಟಿಸುತ್ತದೆ.

ಅಪರ್ಣೈವ ಲತಾ ಸೇವ್ಯಾ ಪಲಿದ್ದಿರಿತಾ ಮೇಖಲಾ । ಯಯಾ ವೃತಃ ಫಲಾಹೋಽಪಿ ಸ್ಯಾದಾಃ ಸ್ಯುತೆಲಕ್ಯುತಂಫಲಂ

ಬಾಲಳಾಗಿರಬಾದ ಗಜಾನನ ಮತ್ತು ಹಣ್ಮುಖರು ಇವರಿ ಬ್ಬರೂ ಹಸಿದು ತಿನ್ನತಕ್ಕ ಪದಾರ್ಥಗಳನ್ನು ಹುಡುಕು ವದರ ವಿಕೆಯಿಂದ ಆಕ್ಷ, ಇತ್ತ ನೋಡುತ್ತಲಿದ್ದಾರೆ. ಅವರ ದೃಷ್ಟಿಗಳ ತಂದೆಯ ಜಟೆಯಲ್ಲಿರತಕ್ಕ ಗಂಗೆಯಲ್ಲಿ ತೇಲಾಡುವ ಚಂದ್ರನು ಬೀಳುವನು ಹಣ್ಮುಖನು ಮಿಥಾವಿಸ್ಪಾಗಿ ತಿಳಿದುಕೊಂಡು ಒಳ್ಳೇ ಉಷ್ಟಸಕತೆ ಯಿಂದ ನೋಡುತ್ತಲಿದ್ದಾನೆ. ಮತ್ತು ಗಣೇಶನು ಫೀರಿ ನಿಂದ ಹೊರಡತಕ್ಕ ಬೆಳ್ಳಕ್ಕ ಕಮಲದ ಗೆಡ್ಡೆಯಷ್ಟಾಗಿ ತಿಳಿದು ಸೊಂಡಿಲಿಯನ್ನು ಚಾಚುವದಕ್ಕೆ ಇಚ್ಛೈಸುತ್ತಾನೆ. ಆ ಯಾವ ಪರಮಾತ್ಮನ ಕೇಶಬಂಧವನ್ನು ನಮ್ಮ ಕಲ್ಪ ಪಗಳನ್ನು ಹೋಗಲಾಡಿಸಲಿ.

ಉತ್ಪತ್ತಿಂ ಕೇಶಬಂಧಃ ಕುಸುಮಶರರಿಪೋಃ ಕಲ್ಪತಂ ಪಾ ಸಕುಷ್ಯಾ/ ದೃತ್ಪೈ ರಂಗಂ ವಿಕ್ಷ್ಯ ಗಂಗಾಜಲಧರ ಬುಲಿತಂ ಬಾಲಭಾವಾದಧಸ್ತಾಂ । ಶ್ಯಾಂಜಾಶಾಶ್ಚ ಫಂಟಿಸ್ಯುರಿತ ಶಫರಿಕಾ ನೋಪಲೋಲೇಕ್ಷಣಾಶ್ಚಿತ । ಸದ್ಯಃ ಪ್ರೋದ್ಭಿನ್ನ ಜಾರೀ ಗೃಹೀಯಕಲಕುಮುದ್ಯಾರ್ದ್ಧ ವಿಘ್ನಾಸ್ಯಃ ।

ಅಸ್ತು

ಏನಾಕ ಧನಿಬಾರೇಂದು ಧನ್ಯ ಮಂದಾಕಿನೀಯುತಾ । ಪರಗೌರಚಿ ಶಾಮಾಖಿರಿದಪರ್ವತಪ್ರದಾತ್ಮಜಃ ॥

ಏನಾಕ (ಧನುಸ್ಸು), ಧನೀ (ಸರ್ಪ), ಬಾಲಚಂದ್ರ, ಧನ್ಯ, ಮಂದಾಕಿನೀ, (ಗಂಗಾ), ಪ, ಧ, ಬ, ಭ, ಮ ವರ್ಗದಿಂದ ಕೂಡಿದ ತಿವನ ಮೂರ್ತಿಯು ನಮ್ಮೆಲ್ಲರಿಗೆ ಅಪವರ್ಗ (ಮೋಕ್ಷ)ವನ್ನು ಕೊಡತಕ್ಕವನಾಗಲಿ

ದುಃಖವಾರ್ತೆ

ಧಾರವಾಡ ಜಿಲ್ಲಾ ಗದಗ-ಬೆಟಗೇರಿ ಶಹರವಾಸಿ ಗಳಾದ ಶ್ರೀ ನೀಲಪ್ಪಗೌಡರು ಹಿರೇಮಿಸಿ ಪಾಟೀಲ ಇವರ ಚಿ॥ ತಿವನಗೌಡನ ಧರ್ಮಪತ್ನಿಯಾದ ರಿಂಗಪ್ಪ ಉರ್ಫ ತಾರವ್ವ ಎಂಬವರು ಬಳ್ಳಾರಿ ಜಿಲ್ಲಾ ರಾಮು ಸಾಗರದ ಶ್ರೀ ಹೆಜ್ ಗಂಗಾಧರಗೌಡರ ಮಗಳು ಇವರಿಗೆ ಹೋದವರ್ಷ ತಲೆ ಳೆಟ್ಟುಹೋಗಿ ವಾಸಿಯಾ ಯಿತು ಇಂತರ ತುಸುದಿನಗಳಲ್ಲಿ ಗರ್ಭವತಿಯಾದಳು ಅವಳಿಗಿಂದ ತಿವಪೂಜೆ ತಿವಧ್ಯಾನದಲ್ಲಿ ತತ್ಪರಳಾಗಿದ್ದು ನವಮಾಸ ತುಂಬಿ ಹೆಣ್ಣಾಕೂಸು ಹೆತ್ತಳು ಪುಣ ತಲೆಳೆಟ್ಟು ಜ್ವರ ಬಂದವ್ವ ಎಪ್ಪೇ ಉಪಚಾರ ಮಾಡಿ ದರೂ ನಾಸಿಯಾಗದೆ ಆರೇ ದಿನಗಳೊಳಗೆ ಅಂದರೆ ತಾರೀಖು ೨೯-೪-೨೨ ನೇ ದಿವಸ ರಾಮುಸಾಗರದಲ್ಲಿ ತಿವಾಧೀನಳಾದಳು ಸಾಯುವಾಗ್ಗೆ ತನ್ನ ಕೊರಳಲ್ಲಿದ್ದ ಮಂಗಳಸೂತ್ರಕ್ಕೆ ನಮಸ್ಕರಿಸಿ ಶ್ರೀ ಮಲ್ಲಿಕಾರ್ಜುನನ ಧ್ಯಾನ ಮಾಡುತ್ತ ಬಲಭುಜ ಮೇಲಿಮಾಡಿ ಪ್ರಾಣ ಬಿಟ್ಟಳು ಈ ಪ್ರಕಾರ ಮಾಡಿದುದು ಅಳಿಯ ಪೂರ್ವ ಸಂಸ್ಕೃತಿಯೆಂದೇ ಹೇಳಬಹುದು. ಇದಿಲ್ಲಾ ವಿಷಯ ವಳ್ಳ ಕಣ್ಣಾರೆ ಕಂಡ ಆಕೆಯ ಬಂಧುಬಳಗದವರಿ ಗೆಲ್ಲಾ ತುಂಬಾ ವ್ಯಸನವುಂಟಾಗಿದೆ. ಶ್ರೀ ಜಗದ್ಗುರು ಪಂಚಾಚಾರ್ಯರು ಅವರಿಗುಂಟಾಗಿದ್ದ ದುಃಖವನ್ನು ಕಮಪಮಾಡಿ ಮೃತಳ ಆತ್ಮಕ್ಕೆ ಶಾಂತಿಯನ್ನುಂಟು ಮಾಡಲೆಂದು ಹೇಳುವ,

ಓರ್ವ ದುಃಖಿಗಾ

ಶ್ರೀ ಜಗದಾಚಾರ್ಯರ ಜಯಂತಿ ಮಹೋತ್ಸವ ಶಾಸೆಬೆದೊನ್ನೂರು

ದಿನಾಂಕ ೨೫-೪-೨೨ ನೇ ಸೋಮ ದಿನಾಂಕ ೨೬-೪-೨೨ ನೇ ಇರತಕ್ಕ ವಿಕೋದಾಮಾಸಾಷ್ಯರ ಮತ್ತು ಬಸವೇಶ್ವರ ಪೂಜೋತ್ಸವಗಳಿಗೆ ಮತ್ತು ದಾರುಳ ಪೂಜೋತ್ಸವಗಳಿಗೆ ಶ್ರಮಮಾಡಿ ಅಷ್ಟೋತ್ತರ ಶಾಮಗಳಂ ದಲು ಪತ್ರಿ ಪುಷ್ಪಗಳಿಂದಲೂ ಪೂಜಿಸಿ ಜಯಂತಿ ಗಳಷ್ಟು ಶ್ರೀ ಜಗ್ಗಿ ರೇಣುಕಮಂದಿರದಲ್ಲಿ ಅತಿರಸ ಲಾಯಿತು. ತಮ್ಮೀ ವೀರಶೈವ ಮತದಲ್ಲಿ ಮತಸ್ಥಾಪಕ ಶಾಚಾರ್ಯರ ವಿಷಯವಾಗಿಯೂ ಮಹೋದ್ಯಾರೆಳರ ವಿಷಯವಾಗಿಯೂ ಇತ್ತಿತ್ತಲಾಗಿ ಸಲಳೆಲವು ವೀರಶೈವ ಪಂಡಿತರು ಹಾಗು ಸ್ವಾಮಿಗಳು ತಮ್ಮ ತಮ್ಮ ಪಂಡಿತ ಗಿರಿಯನ್ನು ತೋರಿಸಲು ಅಲ್ಲದ ಸಲ್ಲದ ಕಳಬುಬಿಲ್ಲದ ಆಧಾರಗಳಷ್ಟು ಕೊಟ್ಟು ಜಗದ್ಗುರುಗಳಾರರಿ ದೇಶಿಗಗೆ ಳಲಂಳ ಹಚ್ಚಿಕೊಡಗಿದ್ದಾರೆ. ಮತ್ತು ಕೆಲವು ಸ್ವಾಮಿ ಗಳು ಜಗದ್ಗುರುಗಳೆಂಬ ಹೊಸ ನಾಮಗಳನ್ನು ಧರಿಸ ಪತ್ರಿದ್ದಾರೆ ಇವರೆಲ್ಲರಿಗೂ ಶ್ರೀ ಜಗದಾಚಾರ್ಯರು ಸುಬುದ್ಧಿಯನ್ನು ಕೊಟ್ಟು ವಿವೇಕಸ್ಫುರಿತವಾದ ಮತಿ ಯಂತೆ ಪಡೆಯುವವರೆಗು ಕರುಣಿಸಲೆಂದು ಪ್ರಾರ್ಥಿಸಿ ಜಯಂತಿಗಳನ್ನು ಆಚರಿಸಲಾಯಿತು

ಗೋವಾ ಸತ್ಯಾಗ್ರಹಿಗಳಮೇಲೆ ಪೋಲೀಸರ ಪಾಶವೀಕೃತ್ಯ

ಕಳೆದ ೧೫ ನೆಯ ತಾರೀಖು ದಕ್ಷಿಣಿಕಮಾಡಲ್ಪಟ್ಟು ಪೋರ್ಚುಗೀಸ್ ಅಧಿಕಾರಿಗಳು ಬಿಡುಗಡೆ ಮಾಡಿರುವ ಸತ್ಯಾಗ್ರಹಿಗಳ ಪೈಕಿ ೩೦ ಮಂದಿ ಬೆಳಗಾಂವಿಗೆ ಆಗಮಿ ಸಿದರು ಅವರಲ್ಲೊಬ್ಬರಾದ ಶ್ರೀ ಪ್ರತಾಪ ಮಾಯೇಕರ್ ಎಂಬವರು ಭಾರತದ ತ್ರಿವರ್ಣ ಧ್ವಜವನ್ನು ಕೊಡಲು ನಿರಾಕರಿಸಿದ ಸತ್ಯಾಗ್ರಹಿಗಳನ್ನು ಪೋರ್ಚುಗೀಸ್ ಪೋಲೀಸರು ನಿರ್ದಯೆಯಿಂದ ಹೊಡೆದುದನ್ನು ವಿವರಿಸಿದರು.

ಒಬ್ಬ ಅಧಿಕಾರಿಯು ಶ್ರೀ ಗೋರೆಯವರನ್ನು ಜೋರಿನಿಂದ ಕೆಳಕ್ಕೆ ಕೆಡವಿ, ಹೊಡೆಯಲಾರಂಭಿಸಿ ನೆಂದೂ, ಶ್ರೀ ಗೋರೆಯವರು ರಕ್ಷಣೆಯನ್ನು ಯಾಚಿ ಮಾಡಿ ಪ್ರಯೋಜನವಿಲ್ಲದಿರೆಂದೂ, ಬಂಗಾಳದ ಶ್ರೀ ಸಂತೋಷಕುಮಾರ್, ದೇಶುವಿಷೆ ಶ್ರೀ ಧೋಂಡು ಸವ್ಯಾರಾಂ ಮತ್ತು ಮಧ್ಯಪ್ರದೇಶದ ಶ್ರೀ ಸುಧಾಕ್ ಎಂಬುವರು ಪೋಲೀಸರು ತಮ್ಮನ್ನು ನಿಕ್ಕಾಪಟ್ಟೆ ಹೊಡೆದು ಒಡೆಯುವಷ್ಟರಲ್ಲಿ ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದಿದ್ದರೆಂದೂ ಪೋಲೀಸರ ಹೊಡೆತದ ಪರಿ ಣಾಮವಾಗಿ ನೇಪಾಳದ ಬಾಬರೆಟ್ ಕಪ್ಪೆಲಿಯಂದು ಮುರಿದು, ಅವರ ಸ್ಥಿತಿಯು ತೀವ್ರವಾಗಿದೆಯೆಂದೂ ಪೋಲೀಸ್ ಮುಖ್ಯಾಧಿಕಾರಿ ಮಾಂಟೇರೋ ಎಂಬು ವರು ಶ್ರೀ ಗೋರೆಯವರನ್ನು ಬಲವಾಗಿ ದೆಕ್ಕಿಂದ ಹೊಡೆದುದರಿಂದ, ಅವರು ಮಕ್ಕೆ ರಕ್ತವನ್ನು ವಾಂತಿ ಮಾಡಿದರೆಂದೂ ವಿವರಿಸಿದರು ಇನ್ನೂ ಭಾರತದಿಂದ ಬರಬಹುದಾದವರಿಗೆ ನಿದರ್ಶನವಾಗಿರಬೇಕೆಂದೇ ಸತ್ಯಾ ಗ್ರಹಿಗಳನ್ನು ಹಿಂಸಿಸುತ್ತಿರುವುದಾಗಿಯೂ ಇನ್ನು ಮುಂದೆ ಬರುವವರನ್ನು ಗುಂಡಿಕ್ಕಿ ಕೊಲ್ಲಲಾಗುವು ದೆಂದೂ ಮಾಂಟೀರೋ ತಿಳಿಸಿದರೆಂದು ಮಾಯೇಕರ್ ಹೇಳಿದರು

ಗೋವೆಕ್ಕೆ ಮಹಾರಾಷ್ಟ್ರ ಕಮ್ಯೂನಿಸ್ಟರ ಜಾಥಾ

ಜೂನ್ ೮ ರಂದು ೫೦ ಮಂದಿ ಕಮ್ಯೂನಿಸ್ಟ್ ಸ್ವಯಂಸೇವಕರ ತಂಡವೊಂದು ಮಹಾರಾಷ್ಟ್ರದಿಂದ ಗೋವಾಕ್ಕೆ ತೆರಳುವುದೆಂದು ಮಹಾರಾಷ್ಟ್ರ ಕಮ್ಯೂ ನಿಸ್ಟ್ ಸಾಯಳ ಶ್ರೀ. ಏ ಡಿ ಚಿತಲೆ ಪ್ರಕಟಪಡಿ ಸಿರುವರು. ಮಹಾರಾಷ್ಟ್ರ ಪ್ರಾಂತೀಯ ಕಮ್ಯೂನಿಸ್ಟ್ ಪಕ್ಷದ ಸಮಿತಿ ಸದಸ್ಯ ಶ್ರೀ ರಾಜಾರಾಂ ಬಾಪೇರರು ಈ ತಂಡದ ನಾಯಕತ್ವ ವಹಿಸುವರು

* * *

ಗೋವಾದಲ್ಲಿ ಮೇ ೧೮ ರಂದು ಪೋರ್ಚುಗೀಸ್ ಪೋಲೀಸರು ಸತ್ಯಾಗ್ರಹಿಗಳ ಮೇಲೆ ಗೋಲೀಬಾರು ಮಾಡಿದ ಬಗ್ಗೆ ದೆಹಲಿಯ ಸರಕಾರಿ ವಲಯಗಳು ತೀವ್ರ ಕಳವಳವನ್ನು ವ್ಯಕ್ತಪಡಿಸಿವೆ ಗೋಲೀಬಾರ್ ಪ್ರಕರಣ ದ ಬಗ್ಗೆ ವಿವೇಚಿಸಲು ಸಚಿವ ಸಾಲಿಗೆ ತುರ್ತಿದಿಯೊಂದು ಕರೆದಿದೆ. ಇಷ್ಟಕ್ಕೆ ಹೆಚ್ಚು ವಿವರಗಳು ದೊರೆತ ಮೇಲೆ ಮುಂದಿನ ಕ್ರಮವನ್ನು ಸಚಿವ ಸಾಲಿಯು ಕೈಗೊಳ್ಳಲು ನಿರ್ಧರಿಸಿದೆ.

ಸಿದ್ಧಾಂತಶಿಖಾಮಣಿ
(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಕೈವಲ್ಯ ಶಲ್ಪತರುವಿನಿಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು. ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದ ಪ್ರಸಿದ್ಧ ಶ್ರೀ ಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದ್ದು ದೇವನಾಗರಿಭಾಷೆಯಲ್ಲಿದ್ದಿತು. ಅದಲ್ಲಿ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಗೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಕೈ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಮೂರುನೂರು ಪುಟಗಳ ಮೇಲ್ಪಟ್ಟಾಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಬೋಧಕವಾದ ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಸದರ ಗ್ರಂಥದ ಎರಡನೇ ಮುದ್ರಣವು ಪಂಡಿತರ ಸಹೋದರರಾದ ವೇ॥ ಬ್ಳ॥ ಮಹಾದೇವಯ್ಯನವರಿಂದ ಮುದ್ರಿಸಿ ಪ್ರಕಾಶಿತವಾಗಿದೆ. ಈ ಅಮೂಲ್ಯ ಗ್ರಂಥವನ್ನು ಸರ್ವರೂ ತರಿಸಿ ಓದಿ ಧನ್ಯರಾಗಬೇಕು. ಬೆಲೆ ರೂ. 2-8-0

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಮ್ಮತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪×೧೦ ಬೆಲೆ ೦—೪—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಠಕ್ಕೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೬—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ದಲೆ ೧ಕ್ಕೆ ... ೦—೩—೦
" " " ಚಿಕ್ಕ ಸೈಜು ಬೆಲೆ ... ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ... ೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬
ಶ್ರೀರೇಣುಕಾಚಾರ್ಯರು ವಿಧಿಪೂಜನ ಪ್ರಾರ್ಥನೆಯಂತೆ ೬ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) .. ೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ .... ೦—೧—೬
ಸದ್ಯಃ ಪೀಠಾರೋಹಣಮಾಡಿರುವ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ ೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧಿಷ್ಠಿತರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ ೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ ೦—೪—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .... ೦—೧—೬
ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ... ೦—೨—೦

ಮ್ಯಾನೇಜರ್— ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ) .... ೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) ..... ೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ) ..... ೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ ... ೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ) ..... ೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) ..... ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ .... ೨ ಆಣೆ
ಶಿವಶಕ್ತಿವಿಲಾಸ .... ೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ ..... ೨ ಆಣೆ
ಬಲ್ವಮಾಹಾತ್ಮ್ಯ (೨ನೆಯ ಆವೃತ್ತಿ) .... ೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ) ..... ೩ ಆಣೆ
ಭವನಾದಿಭಿಜಶತ್ವದರ್ಪಣ (೫ನೆಯ ಆವೃತ್ತಿ) ..... ೩ ಆಣೆ
ಪಂಚಾಚಾರ್ಯಪ್ರಕಾಶ .... ೩ ಆಣೆ
ಪಂಚಾಚಾರ ಪ್ರಕಾಶಿಕಾ .... ೩ ಆಣೆ
ಶ್ರೀಗುರುಶತ್ರ್ವಪದಗಳು (೩ನೆಯ ಆವೃತ್ತಿ) .... ೩ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) .... ೪ ಆಣೆ
ಲಿಂಗಧಾರಣವಿಧಿ .... ೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) .... ೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ .... ೪ ಆಣೆ
ವೀರಶೈವ ಅಂತ್ಯೇಷ್ಟಿ-ಶ್ರಾದ್ಧವಿಧಿ .... ೪ ಆಣೆ
ವೈದಿಕವಾಹ್ಯರಹಸ್ಯ .... ೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) ..... ೪ ಆಣೆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ .... ೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ) ..... ೬ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವನಿರೂಪಣ (೩ನೆಯ ಆವೃತ್ತಿ) ..... ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು) ..... ೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) .... ೮ ಆಣೆ
ವೀರಶೈವಮಹಾತ್ಮರು .... ೮ ಆಣೆ
ಭವಧ್ವಾಂತದಿವಾಕರ (೨ನೆಯ ಆವೃತ್ತಿ) .... ೮ ಆಣೆ

ಆಗಮಪರಿಜ್ಞಾನ .... ೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ .... ೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ನಕ್ಷತ್ರಮಾಲಿಕಾ ..... ೮ ಆಣೆ
ಕನ್ನಡ ನ್ಯಾಯಶತಕಮ್ .... ೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) ..... ೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ ..... ೧ ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧ ರೂ.
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ) .... ೧ ರೂ.
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾವಳಿ ..... ೧ ರೂ.
ವೈದಿಕಶಿವಪೂಜಾವಿಧಿ (ವೈದಿಕಸ್ತ್ರೀಯುಕ್ತವಾದುದು. ೩ನೆಯ ಆವೃತ್ತಿ) ೧। ರೂ.
ಶ್ರೀಕರಧಾಮ್ಯಂ (೨ ನೆಯ ಆವೃತ್ತಿ) .... ೧॥ ರೂ.
ಶಿಷ್ಯರೆ ಮನೆಗಳ ರಿಜಿಸ್ಟರ್ ಬುಕ್ .... ೧॥ ರೂ.
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮುಖಾಗಮ-ಸೂರ್ಯಾಗಮಗಳಿಂದ ಕೂಡಿರುವುದು) ೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರವಪ್ಪದಿ) ..... ೨ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು ೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೩॥ ರೂ.
A brief life-sketch of Pandit Sri Kashinatha Shastr (*English*) 4 A.
The Philosophical Aspect of Virasaivism (*English*) ... 8 As.
Speeches by Pandit Shri Kashinatha Shastriji (*English*) 12 As.
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... . ೩ ಕ.
ವೀರಶೈವರತ್ನ (ಮರಾಠಿ) ೩. ೧-೮-೦
ಸಹಸ್ರನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) .... ೧ ಕ.
ಸಂಧಿವಿಚ್ಛೇದಕಾರಿಕಾ (ಸಂಸ್ಕೃತ) .... ೨ ಚಾ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Brubanmathadhyaksha Sri Mahadevaiah at Sri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನವಂಶಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಶ್ಲೋಕವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮುರನರ್‌ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು— ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು— ನಾಗನೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ. ಪಿ. ಖರ್ಚು ಸೇರಿ ೩ ರೂ ೮ ಆ.

ಸಂಪುಟ ೨೯] ಸೋಮವಾರ ತಾ॥ ೩೦ ನೇ ಮೇ ೧೯೫೫ [ಸಂಚಿಕೆ ೫೫

ಪತ್ರವ್ಯವಹಾರ

[ಚಾಕ್ಕೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ಸಂಸ್ಕೃತಿಪ್ರಸಾರ ಸಂಘ್ಯೆ ಅನ್ನಿಮೆಭಾವಿ

ಜೆ. ಧಾರವಾಡ

ಕಳೆದ ಯುಗಾದಿಯ ಶುಭದಿನದಲ್ಲಿ ಇಲ್ಲಿಯ ಪ್ರಮುಖರು ಸಂಸ್ಕೃತಿಪ್ರಸಾರಕ ಸಂಘವೆನ್ನು ಸ್ಥಾಪಿಸಿ ಕೊಂಡಿದ್ದಾರೆ. ಈ ಸಂಘದವರು ಈ ತಿಂಗಳು ತಾ॥ ೩೧ ರಲ್ಲಿ ಮರಬದ ಶ್ರೀ ಬಾಲಬ್ರಹ್ಮಶ್ರೀ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಪ್ರವಚನ ಕ್ಕೋಸುಗ ಸಕ್ರಮವಾಗಿ ಆಮಂತ್ರಿಸಿದರು ಅದರಂತೆ ಶ್ರೀಗಳವರು ಆಗಮಿಸಿ, ಪಂಚಗೃಹ ಬೃಹನ್ಮಠದಲ್ಲಿ ಬಿಡಾರಮಾಡಿ ಶ್ರೀ ಗುರುಶಾಂತ ತಪೋನಿಧಿಗಳ ಗದ್ದಿ ಗೆಯ ದರ್ಶನಪಡೆದು ಶ್ರೀಗಳವರೊಂದಿಗೆ ವಿಚಾರ ವಿನಿಮಯ ನಡೆಸಿದರು. ಮಧ್ಯಾಹ್ನ ಳ ಗಂಟೆಗೆ ಸಂಘ ದಲ್ಲಿ ಶ್ರೀಗಳವರು 'ವಿಶ್ವಶಾಂತಿ'ಯನ್ನು ಉದ್ದೇಶಿಸಿ ಅಮೋಘವಾದ ಅಪದೇಶ ದಯಪಾಲಿಸಿದರು ಅನಂತರ ಪ್ರಸಾದವಿನಿಯೋಗವಾಗಿ ಸಭೆ ಮುಕ್ತಾಯ ವಾಯಿತು. ಮರುದಿನ ಶ್ರೀಗಳವರು ಸೋಮಾಪುರ–ಕಲಘಟಗಿ ಗ್ರಾಮದ ಶಿಷ್ಯರ ಆಮಂತ್ರಣದ ಮೇರೆಗೆ ಅಲ್ಲಿಗೆ ಚಿತ್ತೈಸಿದರು.

ಗೂಳಪ್ಪ ಫಕ್ಕೀರಪ್ಪ ಮರಬ

ಶ್ರೀ ಜಗದ್ಗುರುಗಳ ಜಯಂತೀಮಹೋತ್ಸವ

ಗರಗ

ಧಾರವಾಡ ಜಿಲ್ಲಾ ಗರಗ ಗ್ರಾಮದಲ್ಲಿರುವ ಶ್ರೀ ವೀರಪ್ಪಾ ವೀರಭದ್ರಪ್ಪಾ ಬಳಿಗಾರ ಇವರು ತಮ್ಮ ಗೃಹದಲ್ಲಿ ಇದೇ ವೈಶಾಖ ಶುದ್ಧ ೩ ಸೋಮವಾರ ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿ ಯನ್ನೂ ವೈಶಾಖ ಶು॥ ೪ ಮಂಗಳವಾರ ಶ್ರೀ ಜಗ ದ್ಗುರು ದಾರುಕಾಚಾರ್ಯರ ಜಯಂತಿಯನ್ನೂ ಅತ್ಯಂತ ವೈಭವದಿಂದ ನೆರವೇರಿಸಿದರು. ಈ ಉಭಯ ಜಗದ್ಗುರು ಗಳ ಜಯಂತಿ. ದಿವಸ ಪ್ರಾತಃಕಾಲ ಗುರುಗಳ ಭಾವ ಚಿತ್ರಗಳಿಗೆ ಶ್ರೀ ವೇ॥ ಚನ್ನಮಲ್ಲಯ್ಯಸ್ವಾಮಿ ಗುಡ್ಡದ ಹಿರೇಮಠ ಇವರ ನೇತೃತ್ವದಲ್ಲಿ ರುದ್ರಾಭಿಷೇಕ ಅಷ್ಟೋತ್ತರ ಬಿಲ್ವಾರ್ಚನೆ ಮೋಡಶೋಪಚಾರಗಳಿಂದ ಪೂಜಿಸಿ ನೈವೇದ್ಯ ಮಂಗಳಾರತಿಗಳನ್ನು ಸಮರ್ಪಿಸಿ ನಮಿಸಿ ಪ್ರಸಾದವನ್ನು ಸ್ವೀಕರಿಸಿ ಗುರುಗಳ ಅನು ಗ್ರಹಕ್ಕೆ ಪಾತ್ರರಾದರು.

ಉತ್ಸವಭಾಗಿ

ವಿವಾಹಸಮಾರಂಭ.

ಬಳ್ಳಾರಿ ಜಿಲ್ಲಾ ಹಡಗಲಿ ತಾಲೂಕು ಪೈಕಿ ಮುಸುವನಕಲ್ಲಹಳ್ಳಿ ಗ್ರಾಮದಲ್ಲಿ ಆನಿರೀಕ್ಷಿತ ಆಗಮಿಸಿದ ಶ್ರೀ ಅಂಗಡಿ ಚನ್ನಬಸಪ್ಪನವರ ಗುರುಗಳಾದ ಅಳವಂಡಿ ಶ್ರೀ ಪಟ್ಟಾಧ್ಯಕ್ಷರು ಹಿರೇಮಠ ಕಟ್ಟೀಮನಿ ಶಿದ್ದಲಿಂಗ ಸ್ವಾಮಿಗಳನ್ನು ತಾ॥ ೧೮-೫-೫೫ನೇ ರಾತ್ರಿ ಪಲ್ಲಕ್ಕಿ ಯಲ್ಲಿ ಕೂರ್ತ್ರಿಸಿಕೊಂಡು ಅತಿವೈಭವದಿಂದ ಸದ್ರಿ ಗ್ರಾಮದ ವ್ರಮುಖರಿಂದ ಸದ್ಭಕ್ತರುಗಳು ಎದುರುಗೊಂಡು ಬಿಜಯಂಗೈಸಿದರು. ಮರುದಿನ ಅಂದರೆ ವೈಶಾಖ ಬಹುಳ ದ್ವಾದಶಿ ಗುರುವಾರದಿನ ಶ್ರೀ ಎ. ಚನ್ನಬಸಪ್ಪ ನವರ ಪುತ್ರಿ ಚಿ॥ ಸೌ॥ ಗಂಗಮ್ಮನವನ್ನು ಸದ್ರಿ ಗ್ರಾಮದ ಕಾಳನ ಗೌಡರ ಪುತ್ರ ಚಿ॥ ವೀರನಗೌಡರಿಗೆ ಕೊಟ್ಟು ವಿವಾಹಮಹೋತ್ಸವವು ಶ್ರೀ ಪಟ್ಟಾಧ್ಯಕ್ಷರಾದ ಎಚ್. ಕೆ. ಶಿದ್ದಲಿಂಗಸ್ವಾಮಿಗಳ ನೇತೃತ್ವದಲ್ಲಿಯೂ ಎ. ಯಂ ಪಂಚಾಕ್ಷರಶಾಸ್ತ್ರಿ ಅಂಬಳಿಯವರ ಪುರೋಹಿತ ತ್ವದಲ್ಲಿಯೂ ಒಳ್ಳೇ ವೈಭವದಿಂದ ನೆರವೇರಿಸಲ್ಪಟ್ಟಿತು. ಈ ಮಂಗಲಕಾರ್ಯಕ್ಕೆ ಸುತ್ತುಮುತ್ತಲಿನ ಗ್ರಾಮಗಳಿಂದ ಬಂಧುಮಿತ್ರಾದಿ ಜನರು ಆಗಮಿಸಿದ್ದರು ಅಲ್ಲದೆ ಊರೊಳಗಿನ ಭಕ್ತಮಾಹೇಶ್ವರರೂ ಕೂಡಾ ಆಗಮಿಸಿ ಈ ಮಂಗಲಕಾರ್ಯವನ್ನು ಯಶಸ್ವಿಗೊಳಿಸಿದರು

ಕಾರ್ಯಭಾಗಿ

ವಿವಾಹಮಹೋತ್ಸವ

ಚಿತ್ರದುರ್ಗ ಡಿ॥ ದಾವಣಗೆರೆಯಲ್ಲಿರುವ ಶ್ರೀಮಾನ್ ಮಾಗಾನಹಳ್ಳಿ ಹೊಳೆಬಸಪ್ಪನವರು ಇದೇ ವೈಶಾಖ ಬಿ॥ ೧೩ ಗುರುವಾರ (ತಾ॥ 19-5-55) ದಿವಸ (11-56 ಗಂಟೆಗೆ) ಸಲ್ಲುವ ಕಟಕಲಗ್ನದಲ್ಲಿ ತಮ್ಮ ಪುತ್ರಿ ಚಿ॥ಸೌ॥ ನಿರ್ಮಲಾಳನ್ನು ಶ್ರೀಮಾನ್ ದಾವಣಗೆರೆಯಲ್ಲಿರುವ ರಾಣೇಬೆನ್ನೂರು ಭರಮಶೆಟ್ಟು ಜನ್ನಬಸಪ್ಪನವರ ಪುತ್ರ ಚಿ॥ ಶಿವಾನಂದ ಬಿ.ಎ., ಇವರಿಗೆ ಕೊಟ್ಟು ಮತ್ತು ತಮ್ಮ ಪುತ್ರ ಚಿ॥ ಸಚ್ಚಿದಾನಂದನಿಗೆ ಶ್ರೀಮಾನ್ ಹಲಿಗೇರಿ ಅಂದನೂರು ವೀರಭದ್ರನವರ ಸೋದರಳಿಯ ಅಂಗಡಿ ಬಸಪ್ಪನವರ ಪುತ್ರಿ ಚಿ॥ ಸೌ॥ ಕುಮಾರಿ ಶಾಂತಳನ್ನು ತಂದುಕೊಂಡು ಉಭಯ ವಿವಾಹಮಹೋತ್ಸವಗಳನ್ನು ದಾವಣಗೆರೆ ಬೃಹನ್ಮಠಾಧ್ಯಕ್ಷ ಶ್ರೀ ಸದ್ಯೋಜಾತ ಶಿವಾ ಚಾರ್ಯಸ್ವಾಮಿಗಳವರ ಸನ್ನಿಧಿಯಲ್ಲಿ ವೇ॥ ಪಂ॥ ಹೆಚ್. ಎಂ ಶಿವಾನಂದಶಾಸ್ತ್ರಿಗಳ ವೈದಿಕತ್ವದಲ್ಲಿ ಬಹಳ ವಿಜೃಂ ಭಣೆಯಿಂದ ನೆರವೇರಿಸಿದರು. ಸಕಾಲಕ್ಕೆ ಶ್ರೀಮದ್ರಂಭಾ ಪುರಿ, ಶ್ರೀಶೈಲ, ಉಜ್ಜಯಿನಿ ಮತ್ತು ಕಾಶೀ ಜಗದ್ಗುರು ಗಳವರು ಶುಭಾಶೀರ್ವಾದಪೂರ್ವಕ ಫಲಮಂತ್ರಾಕ್ಷತೆ ಗಳನ್ನು ದಯಪಾಲಿಸಿದ್ದರು. ಬಂಧುಬಾಂಧವರೆಲ್ಲರೂ ಕೂಡಿ ವಿವಾಹಕಾರ್ಯವನ್ನು ಸಾಂಗವಾಗಿ ನೆರವೇರಿ ಸಿದರು.

ಕಾರ್ಯಭಾಗಿ.

ಸ್ವೀಕಾರ

ಧಾರವಾಡ ಡಿ॥ ಗರಗಗ್ರಾಮದಲ್ಲಿರುವ ಶ್ರೀ ವೀರಪ್ಪಾ ವೀರಭದ್ರಪ್ಪಾ ಬಳಿಗಾರ ಇವರು ತಮ್ಮ ಗೃಹದಲ್ಲಿ ಇದೇ ವೈಶಾಖ ಶು॥ ೩ ಸೋಮವಾರ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಯನ್ನೂ ವೈಶಾಖ ಶು॥ ೪ ಮಂಗಳವಾರ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವನ್ನೂ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 4 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಬಳ್ಳಾರಿಜಿಲ್ಲಾ ಹಡಗಲಿ ತಾಲೂಕ ಮುಸುವನಕಲ್ಲು ಹಳ್ಳಿಯಲ್ಲಿರುವ ಶ್ರೀ ಎ. ಚನ್ನಬಸಪ್ಪನವರ ಪುತ್ರಿ ಚಿ॥ ಸೌ॥ ಗಂಗಮ್ಮನವನ್ನು ಅದೇ ಗ್ರಾಮದ ಶ್ರೀ ಕಾಳನ ಗೌಡರಪುತ್ರ ಚಿ॥ ವೀರನಗೌಡನಿಗೆ ಕೊಟ್ಟು ತಾ॥ ೧೮-೫-೫೫ ಗುರುವಾರದಿವಸ ನಡೆದ ವಿವಾಹಸಮಾರಂಭ ದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರ ಕಡೆಯಿಂದ ಸಮರ್ಪಿಸಲ್ಪಟ್ಟ 2 ರೂಗಳು ಶ್ರೀ ವೇದಾಂತಿ ಎಂ. ಸಿದ್ದಯ್ಯನವರು ನಂದಿವೇರಿಯವರು ಇವರದ್ವಾರಾ ತಲ್ಪಿರುತ್ತವೆ.

ಚಿತ್ರದುರ್ಗ ಡಿ॥ ದಾವಣಗೆರೆಯಲ್ಲಿರುವ ಶ್ರೀಮಾನ್ ಮಾಗಾನಹಳ್ಳಿ ಹೊಳೆಬಸಪ್ಪನವರು ತಾ॥ ೧೯-೫-೫೫ ದಿವಸ ತಮ್ಮ ಪುತ್ರಿ ಚಿ॥ ನಿರ್ಮಲಾ. ಮತ್ತು ತಮ್ಮ ಪುತ್ರ ಚಿ॥ ಸಚ್ಚಿದಾನಂದ ಈ ಉಭಯರ ವಿವಾಹಮಹೋತ್ಸವಗಳನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಧಾರವಾಡ ಡಿ॥ ಗದಗ ಬೆಟಗೇರಿಯಲ್ಲಿರುವ ಶ್ರೀ ಚನ್ನಯ್ಯನವರು ಕರಿಸಿದ್ದಿಮಠ ಇವರ ಪುತ್ರಿ ಚಿ॥ಸೌ॥ ಗಂಗಾಂಬೆಯನ್ನು ಶ್ರೀ ವೇ॥ ಪರಯ್ಯನವರು ಅಂಕಲಿಗಿ ಹಿರೇಮಠ ಸಾ॥ ಕಿರೋಳ ಇವರ ಪುತ್ರ ಚಿ॥ ಶಿವ ಸಂಗಯ್ಯನಿಗೆ ಕೊಟ್ಟು ಹೊಳೆಆಲೂರಿನ ಪಾರ್ವತೀ ಪರಮೇಶ್ವರ ಸನ್ನಿಧಿಯಲ್ಲಿ ನೆರವೇರಿಸಿದ ವಿವಾಹಸಮ ಯದಲ್ಲಿ ಪ್ರಭಾಪೋಷಣಕ್ಕಾಗಿ ಶ್ರೀಮಾನ್ ಚನ್ನಯ್ಯ ನವರು 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿಕೊಟ್ಟಿರುತ್ತಾರೆ.

ಬೆಳಗಾಂವಜಿಲ್ಲಾ ಕಹಪುರ ನಿವಾಸಿಗಳಾದ ಶ್ರೀಮಂತ ಸಂಗಮ್ಮ ಬೆಂಬಳಗಿ ಇವರು ತಾ॥ ೧೭-೫-೫೫ನೇ ಮಂಗಳವಾರದಿವಸ ಶಿವಾನುಸಂಧಾನರಾದ ಸಮಯದಲ್ಲಿ ಪ್ರಭಾ ಪೋಷಣೆಗೆ ಸಮರ್ಪಿಸಲ್ಪಟ್ಟ 1 ರೂಪಾಯಿಯು ಡಾ॥ ಗುರುಲಿಂಗಯ್ಯ ಗದಿಗೆಯ್ಯಾ ಹಿರೇಮಠ ಮಮದಾಪುರ ಇವರದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೆಯಲೆಂದು ಹಾರೈಸುತ್ತೇವೆ.

ಸಂಚಾಚಾರ್ಯಪ್ರಭಾ

೧೯೩೫ನೆಯ ಮೇ ತಾ॥ ೩೦ ನೇ ಸೋಮವಾರ

ಗುರುಪ್ರಭಾವ

ಯಾವ ಮಹಿಮನ ಅವತಾರದಿಂದ ಸರ್ವಜೀವಿಗಳು ಜೀವನ್ಮುಕ್ತರಾಗುವರೋ? ಯಾವ ಪರಾವತಾರಿಯ ಕೃಪಾವಿಶೇಷದಿಂದ ಇಹಪರಗಳಲ್ಲಿಯು ಸೌಖ್ಯಗಳು ಹಸ್ತಗತಳಾಗುವವು? ಯಾವ ಚಿನ್ಮೂರ್ತಿಯಿಂದ ಅಖಂಡತೇಜೋರಾಶಿಯಾದ ಪರಬ್ರಹ್ಮವು ಅರಿಯುವದೋ? ಏಳುಲೋಜಂತುರಕ್ಷಕನಿಗೂ ಯಾವ ಮಂಗಲಮಯನು ಪೂಜ್ಯನೋ? ಸಂಸಾರಿಕಸ್ಯರ ರಿದ್ರನಿಗೂ ಯಾವ ದೇವನು ಮಿಗಿಲೋ? ಯಾವ ಸಚ್ಚಿದಾನಂದ ಮೂರ್ತಿಯ ದರ್ಶನಮಾತ್ರದಿಂದಲೇ ಸರ ದುರಿತಗಳು ದೂರಾಗುವವೋ? ಯಾವ ಪರಬ್ರಹ್ಮಮೂರ್ತಿಯ ಕೃಪೆಯೇ ಮುಕ್ತಿಗೆ ಮೂಲವೋ? ಯಾವ ಆದಿದೇವನ ವಾಕ್ಯವೇ ಮಂತ್ರಸ್ವರೂಪವೋ? ಯಾವ ಕಲ್ಯಾಣ ಮೂರ್ತಿಯ ಪಾದಸ್ಪರ್ಶವೇ ಸರ್ವ ದೇವಪೂಜೆಯೋ? ಯಾವ ಶಿವಮೂರ್ತಿಯಿಂದ ಹರಿಹರ ಬ್ರಹ್ಮಾದಿಗಳಿಗೂ ಮಿಗಿಲಾದ ಕಾರ್ಯವು ಅನಾಯಾಸದಿ ದಾಗುವದೋ? ನಿಮಿತ್ತಮಾತ್ರದಿಂದ ದೇಹಧಾರಿಯಾದ ಯಾವ ಪರಮಪ್ರಿಂದಲೇ ಮುಖ್ಯನಾಗಿ ನೋಕ್ಷನಾರ್ಗವು ದೊರೆಯುವದೋ? ದೇವ ದಾನವ ಮಾನವಾದಿಗಳಿಗೆಲ್ಲ ಯಾವ ಆನಂದವ ಜೀವ ಆವಶ್ಯಕತೆಯುಂಟೋ? ಕಲ್ಪವೃಕ್ಷ, ಕಾಮಧೇನ ಚಿಂತಾಮಣಿಗಳಗಿಂತಲೂ ಯಾವ ಪೂಜ್ಯನು ಅಧಿಕರೋ? ಯಾವ ಮಹಾಮೂರ್ತಿಯು ತನ್ನನ್ನಾಶ್ರಯಿಸಿದವರನ್ನೆಲ್ಲ ತನ್ನಂತೆಯೇ ಮಾಡಿಬಿಡುವನೋ? ಯಾವ ಮಹಿಮನ ಅವತಾರವಿರದಿದ್ದರೆ ಸರ್ವವೂ ದ ದಧರನ ಪ್ರಜಾಂತವಾದ ದಂಡಪ್ರಹಾರದಿಂದ ಕುಂದದೋಳ್ಮಂಡಿಪಡೆಕಾಗುತ್ತಿತ್ತೋ? ಯಾವ ಸದಾಶಿವನ ಸರ್ತಿಯ ದಲೇ ಸರ್ವಸ್ವವೂ ಇಾಗವದೋ ಅಂಥಾ ದಿವ್ಯಮೂರ್ತಿಯೆಂದರೆ ಸದ್ಗುರುನಾಥನೆ.

ಈ ಗುರುಮೂರ್ತಿಯು ಉಗ್ರಾಂತರಿಸ್ತಾನೆ ಬಗ್ಗಿಯಿಂದ ಕೆಲವರು ಜಾತನನ್ನು ನೂಡಿ ಜೀವಿಸುವರು ಕೆಲವರು ದೀಪವನ್ನು ಹಚ್ಚಿ ಆನಂದಿಸುವರು ಕೆಲವರು ಪಾರಮಾರ್ಥಿಕ ಅನ್ನವನ್ನು ಬೇಯಿಸಿ ಸುವಿಸುವರು ಕೆಲವರು ಐಹಿಕ ಸೌಖ್ಯಗಳನ್ನು ಹೊಂದುವರು 'ಗುರೋರಾಜ್ಞಾ ಗರೀಯಸೀ' ಎಂಬಂತೆ ಗುರುವಿನ ಆಜ್ಞೆಯು ಅಕ್ಷಿಂತ ಶ್ರೇಷ್ಠವಾದದ್ದಿರುತ್ತದೆ ಪ್ರಾಣಹೋದರೂ ಅಡ್ಡಿಯಿಲ್ಲ ಗುರುವಿನ ಆಜ್ಞೆಯನ್ನು ಉಲ್ಲಂಘಿಸಕೂಡದು ಮಾನವರಿಗೆ ಗುರುವಿನ ಆಜ್ಞೆಯಾಗುವದೆಂದರೆ ದುರ್ಲಭವು ಒಂದು ಪಕ್ಷದಲ್ಲಿ ಗುರುಆಜ್ಞೆಯಾದರೆ ಇವನ ಜನ್ಮಕ್ಕೆ ಅಡೆಯಿಲ್ಲವೆಂದು ಸ್ಪಷ್ಟವಾಗಿ ಹೇಳುವದು ಗರ್ವಾಜ್ಞೆಯೇ ವೇದವಾಕ್ಯವು ಗುರುವಿನ ಆಜ್ಞೆಯೇ ಶಾಸ್ತ್ರಾಜ್ಞೆಯು ರಾಜಾಜ್ಞೆಗಿಂತಲೂ ಗುರ್ವಾಜ್ಞೆಯು ಮಿಗಿಲಾದದ್ದು ಗುರ್ವಾಜ್ಞೆ ವಾಲಿಸು ವದಕ್ಕಿಂತಲೂ ಇನ್ನೊಂದು ಸದಾಚಾರರೂಪನೋಕ್ಷವುಂಟೇ? ಗುರುವಾಜ್ಞೋಲ್ಲಂಘನೆತ್ಕೆಂತಲೂ ಇನ್ನೊಂದು ಅನಾಚಾರರೂಪದ ನರಕವುಂಟೇ? ಎಂದು ಶಾಸ್ತ್ರವು ಸಾರುತ್ತಿದೆ.

ಶಿವ ಸಭೆಯಲ್ಲಿ ತನಗೆ ಅಪಮಾನವಾಯಿತೆಂಬುವ ಗರ್ವದಿಂದ ಉಬ್ಬಿದ ದಕ್ಷನ ಪರಿತಿನ ವಿರುದ್ಧವಾಗಿ ಯಜ್ಞವನ್ನು ಮಾಡುವ ಪ್ರಯತ್ನ ದಲ್ಲಿರಲು, ಗುರುವಾದ ಬೃಹಸ್ಪತಿಯು ಅನೇಕ ಪ್ರಕಾರ ಬೋಧಿಸಿದರೂ, ಕೇಳದೆ ಗುರುವಾದ ಬೃಹಸ್ಪತಿಯನ್ನು ಬಿಟ್ಟು ಯಜ್ಞವನ್ನು ಮಾಡಿ, ವೀರಭದ್ರನಿಂದ ಸರ್ವಸ್ವವನ್ನೂ ಹಾಳುಮಾಡಿಕೊಂಡವಲ್ಲದೆ ಕಡೆಗೆ ತನ್ನ ಶಿರಸ್ಸನ್ನೂ ಕಳೆದುಕೊಂಡು, ಅಜ್ಞವಾದ ಉರಿದಲೆಯನ್ನು ಪಡೆಯಲಿಲ್ಲವೇ? ಗುರು ವಿನ ಆಜ್ಞೋಲ್ಲಂಘನೆಯದ ಫಲವನ್ನು ನೋಡಿದಿರಾ?

ಗುರುವಾದ ವಶಿಷ್ಠನಿಗಂತಲೂ ತಾನೇ ಅಧಿಕನೆನಿಸಿಕೊಳ್ಳುವ ಅಹಂಕಾರದಿಂದ ಭಯಂಕರವಾದ ತಪಸ್ಸನ್ನಾಚರಿಸಿ, ಬ್ರಹ್ಮರ್ಷಿ ಎನಿಸಿಕೊಂಡರೂ ಗುರುವಿಗಿಂತಲೂ ಅಧಿಕರಾಗಬೆ ವಿಶ್ವಾಮಿತ್ರನು ಮೇನಕೆಯ ಪಕರಾಗಲಿಲ್ಲವೇ?

ಶಿವ ಸಭೆಯಲ್ಲಿ ಗುರುವಾದ ವಶಿಷ್ಠನ ಅಜ್ಞೆಯನ್ನುಲ್ಲಂಘಿಸಿ ಹರಿಶ್ಚಂದ್ರನ ಸರಿತ್ಸೆಗಾಗಿ ಬಂದ ವಿಶ್ವಾಮಿತ್ರನು ತನ್ನ ತಪಃಪ್ರಭಾವವನ್ನೆಲ್ಲ ಕಳೆದುಕೊಳ್ಳಲಿಲ್ಲವೇ?

ನಾನು ಎಂಥಾ ಘೋರವಾದ ತಪಸ್ಸನ್ನು ಮಾಡಿದರೂ, ಜನರು ನನಗೆ ವಶಿಷ್ಠನಿಗಿಂತಲೂ ಶ್ರೇಷ್ಠವಾದ ಪದವನ್ನು ಕೊಡಲಿಲ್ಲವಲ್ಲಾ ಎಂಬುವ ಆಸೂಯಾಂಧನಾದ ವಿಶ್ವಾಮಿತ್ರನು ಗುರುವನ್ನು ಕೊಂದರೆ ತಾನೇ ವಶಿಷ್ಠನಾಗುತ್ತೇನೆಂಬ ದುರ್ಭಾವನೆಯಿಂದ ಒಮ್ಮೆ ಪೌರ್ಣಮಿಯ ಸಮಯದಲ್ಲಿ ಒಂದು ದೊಡ್ಡ ದಾದ ಕಲ್ಲುಬಂಡೆಯನ್ನು ಎತ್ತಿಕೊಂಡು, ಒಂದು ವೃಕ್ಷದ ಮೇಲೆ ಕುಳಿತಿದ್ದನು ಆಗ್ಗೆ ವಶಿಷ್ಠ ಮತ್ತು ಆತನ ಪತ್ನಿಯಾದ ಅರುಂಧತಿ ಇವರೀರ್ವರು ಕೆಳಗಡೆ ಮಾತಾಡುತ್ತಿದ್ದರು. ಅರುಂಧತಿ–ಪತಿರಾಜಾ! ಈ ದಿವಸ ಹುಣ್ಣಿಮೆ ಚಿಲ್ಲಪಲಂತೆ ಬೆಳದಿಂಗಳು ಬಿದ್ದಿದೆ ಇದು ಯಾರ ಪ್ರಭಾವದಿಂದ? ವಶಿಷ್ಠ ಪ್ರಿಯೇ ಇದು ಘೋರವಾದ ತಪಸ್ಸನ್ನಾಚರಿಸಿದ ವಿಶ್ವಾಮಿತ್ರನ ಪ್ರಭಾವದ ಬೆಳಕು, ಅರುಂಧತಿ ಸ್ವಾಮೀ! ಅವನು ತಮಗೆ ಸರಿಮಾಲೈರಿಯಲ್ಲು, ತಾವು ಅವನನ್ನು ವಾರೆಸುವಿರಲ್ಲಾ, ವಶಿಷ್ಠ ಪ್ರಿಯೇ ನನಗೆ ಯಾರೂ ವೈರಿಯಿಲ್ಲ ಕಡಾ ಚಿತ್ ಅವರು ನನ್ನನ್ನು ಹಳಿದರೂ, ನಾವು ಅವರನ್ನು ಹಳಯುವದು ನ್ಯಾಯವಲ್ಲ ರಾಜರಾದ ವಿಶ್ವಾಮಿತ್ರನು ರಾಜರ್ಷಿಯಾದನಲ್ಲವೇ? ಅತನ ತಪಸ್ಸಭೆಯ ಮುಂದೆ ಈ ಚಂದ್ರನ ಪ್ರಭೆಯು ಎಷ್ಟರದು? ಇದಲ್ಲ ವನ್ನು ವ ವ್ಯವಲ್ಲಿ ಅಡಗಿ ಕುಳಿತ ವಿಶ್ವಾಮಿತ್ರನು ಕೇಳಿ ಕೆನ್ನ ಅಜ್ಞಾನವನ್ನು ಧಿಕ್ಕರಿಸಿ, ಮುಂದೆ ಬಂದು ನಾಪ್ತಾಂಗನಮಸ್ಕಾರವನ್ನು ಮಾಡಿ ಗುರುನಾಥನೇ? ಗುರುಮಹಿಮೆಯನ್ನರಿಯದ ಮಾಡಿದ ಅಪರಾಧವನ್ನು ನನ್ನಿಸಬೇಕೆಂದು ಪ್ರಾರ್ಥಿಸಿ ಪುನೀತನಾಗಲಿಲ್ಲವೇ? ಗುರುಮಹಿಮೆಯು ಅಗಾಧವಾದದ್ದು ಅ ಎಾ ಸಮ್ಯರುನಾಥನನ್ನು ಕಿರಿಸ್ಕರಿಸುವದೆಂದರೆ— ಜ್ಞಾಲಾಣಿಸಿ ಸಂರಕ್ಷಿಸುವ ನೌಾತ್ಮನನ್ನೇ ಹಳಿವಂತಾಗು ತ್ತದೆ ಆದ್ದರಿಂದ ಮಾನವರೇ! ದುರಭಿಮಾನವನ್ನು ಬಿಡಿರಿ ಸದ್ಗುರುನಾಥನ ಪಾದವನ್ನು ಹಿಡಿಯಿರಿ ಸದ್ಗುಪದೇಾವನ್ಮತನನ್ನು ಕುಡಿಯಿರಿ. ಸದ್ಗತಿಯನ್ನು ಪಡೆಯಿರಿ ಒಡಬಿಡಿತೆಯನ್ನು ಬಿಡಿರಿ ಸುಳ್ಳನ್ನು ಸುಡಿರಿ ಕಲಹವನ್ನು ಕಡಿಯಿರಿ ಗುರುಸೇವೆಯಲ್ಲಿ ಮಡಿಯಿರಿ ಧರ್ಮಾಚರಣೆಯಲ್ಲಿ ದುಡಿಯಿರಿ ಗುರು ಪಾದವನ್ನು ನೋಡಿರಿ ಗುರುಪೂಜೆಯನ್ನು ಮಾಡಿರಿ ಅಂದರೆ ನಿಮಗೆ ಸದ ತಿಯುಂಟು "ಹರೇ ಕೃಷ್ಣೇ ಗುರು ಸ್ವಾತಾ ! ಗುರುಕೃಷ್ಣೇ ನಕಶ್ಚನ! ' ಎಂಬುದನ್ನು ಮರೆಯ ಬೇಡಿರಿ

ಹಳಕಪ್ಪೆಯವರ ೭೭೦ ಅಮರಗಣಾಧೀಶ್ವರರು

ಎಂಬ ಗ್ರಂಥದನಿಮರ್ಕ

(ಲೇಖಕರು —ಶ್ರೀ ಸ ಬ್ರಂ. ಬಾಲಬೃಹಸ್ಪತಿ ಗಂಗಾಧರ
ಶಿವಾಚಾರ್ಯಮಹಾಸ್ವಾಮಿಗಳವರು,
ಜಡೆಯ ಬೃಹನ್ಮಠ, ಮಂಡ್ಯ)

ತಾ॥ ೧೦-೧೨-೩೪ ನೇಯ ದಿವಸ ವಿಜಾಪುರದಲ್ಲಿ ನಡೆದ ೭೭೦ ಅಮರಗಣಾಧೀಶ್ವರರ ಪೂಜಾಮಹೋತ್ಸವದ ಸ್ಮಾರಕವಾಗಿ ೭೭೦ ಅಮರಗಣಾಧೀಶ್ವರರ ಎಂಬ ಪುಸ್ತಕವ ಶಿವಾನುಭವ ಸಂಪಾದಕ ಶ್ರೀಯುತ ಫ ಗು ಹಳಕಟ್ಟಿಯವರಿಂದ ಬರೆಯಲ್ಪಟ್ಟು ಪ್ರಕಾಶಿತವಾದುದು ಸರಿ ಆಶ್ಚೇ! ಇವರು ಗ್ರಂಥಕ್ಕ ವಿಷಯಗಳಬಗೆಗೆ ಇತೀರ ಸ್ಥಿತಿಯವಾಗಿ ಪರಿಶ್ರಮಿಸಿ ಪಂಡಿತರ ಅವಗಾಹನೆಗೆ ಒಳಪಡಿಸಿಕೊಂಡು ಸರಿಕಂಡಮೇಲೆ ಅಚ್ಚುಗೊಳಿಸಿದ್ದರೆ ಒಳಿತ್ತು. ಪೂಜಾಮಹೋತ್ಸವದ ಸಮಿಯವರಿಗಾಗಿ ಸಂಘಟಕರಾದ ಬಂಥಾನಳ ಶ್ರೀಗಳವರಿಂ ವಿನೇಚಿಸಿ ಸಹಕರಿಸಬೇಕಿತ್ತು. ಇದರಲ್ಲಿ ಅನೇಕರ ಚರಿತ್ರಾಂಶಗಳು ಅಸಂಗತವಾಗಿವೆ ಕೆಲವೆಡೆ ಮಹತ್ವದ ಅಂಶಗಳನ್ನು ಇಾಡಿದೆ ಅದರ ಸಂಬಂಧವೆಸ್ತೇ ಕತ್ತರಿಸಿದ್ದಾರೆ. ಅವಿಶ್ಚಿತ ಹಾಗು ಅಸಮಂಜಸ ವಿಷಯಗಳನ್ನು ಖಂಡಾಯದ ನಿಲುಗುಸಬೇಕಾದ ತೋರಿಸಲು ಸಹ ಹಿಂಜರಿದಿಲ್ಲ. ಹಿರಿ ತ್ರದ ಬೆಂಬಲವಿದ್ದರೂ ಚರಿತ್ರಾಂಶವನ್ನು ಮರೆಮಾಚು ತ್ತಿರುವ ಶ್ರೀಹಳಕಟ್ಟಿಯವರು ನಿಷ್ಪೇಕ್ಷಪಾತದ ಪ್ರಸಾರಕ ರೆಂದು ತಿಳಿಯುವದು ಸಂಶೋಧಜಗತ್ಪವಾಗಿದೆ. ಇಲ್ಲಿ ಮಾದರಿಗೆಂದು ಶ್ರೀ ಸಿದ್ಧರಾಮದೇವರ ಚರಿತ್ರವನ್ನು ಉದಾಹರಿಸಬಹುದು ಲೇಖಕರಿಗೆ ಏಷ್ಟೇ ಸಂಕ್ಷಿಪ್ತವಾಗಿ ಬರೆಯುವ ಪ್ರಸಂಗಬಂದರೂ ಮುಖ್ಯ ಘಟನೆಗಳನ್ನು ಮಾತ್ರ ಒಂದೆರಡು ವಾಕ್ಯಗಳಲ್ಲಿ ಹೇಳಿ ಮುಂದುವರಿಯ ಬೇಕಾದುದು ಅನಿವಾರ್ಯ ಸಿದ್ಧರಾಮೇಶ್ವರರ ಬಗ್ಗೆ ಬರೆಯುವಾಗ್ಗೆ ಅವರ ಜನನದ ಮುನ್ನ ಅಜ್ಞಾತವಸ್ಥ ರೇವಣಾಸಿದ್ಧನ ಪವಿತ್ರಚರಿತ್ರಸ್ಪರ್ಶದಿಂದ ಸಿದ್ಧರಾಮೇಶ್ವರನ ತಾಯಿಯಾದ ಸುಗ್ಗಮ್ಮೆಯು ಗರ್ಭ ಪರಿಶುದ್ಧಿ ಯಾದ ಸಂಗತಿಯನ್ನು ಮತ್ತು ಶಿವಯೋಗಿಲಿಂಗಾಮನು ನಿನಗೆ ಮಗನಾದಪನೆಂಬ ಸಿದ್ಧಚರ್ತವರ್ತಿ ರೇಣುಕಪ್ಪ ಭನಿಷ್ಯವಾಣಿಯನ್ನು ಕುರಿತು ಒಂದೆರಡು ಮಾತು ತೂಡಿ ಉಲ್ಲೇಖಿಸದೆ ಅದರ ದೀರನ್ನು ಕಿತ್ತು ಬಿಸುಟಿರು ವದು

ಮಹಾಕವಿಾಚಿವೇಾನಂತನು ಸಿದ್ಧರಾಮ ಚರಿತ್ರೆಯನ್ನು ರಚಿಸಿದ್ದಾನೆ. ಈ ಕಾವ್ಯವು ವಸ್ತುರೂಪ ಸತ್ವ ದಿಂದಲೂ ಅಲಂಕಾರಿಯಲ್ಲು ಒಳಗೊಂಡು ಕನ್ನಡ ಸಾಹಿತ್ಯಕ್ಕೆ ವೈವಿಧ್ಯ ವೈಶಿಷ್ಟ್ಯಗಳ ಬೆಡಗನ್ನು ಏಾಡಿದೆ ಈ ಕಾವ್ಯದಲ್ಲಿ ಸೇಳಲಿನ ಮುಖ್ಯಂಶವು ಇಂತು ಮನೆಂಬುಗು ವಂತಿದೆ

ಆಶ್ರಿತಿಯು ಗುರು ರೇವಣಾಚಾರ್ಯನು ಸೊನ್ನಲಿ ಗೆಯ ಸೀಮೆಯೊಳು ದಂಡಿಗೆಯನೊಳಿಧಲು ಹಾವುಗೆ ಗಳಂ ಕಳೆದು ನಡೆದು ಬಂದು ಸುಗ್ಗಮ್ಮೆಯ ಉದರಮಂ ಮುಟ್ಟಿ ಅಪ್ಪತಿನಿ ಶಿವಯೋಗಿ ಏಸಿಗೆ ಪುತ್ರಸಂಗವ ನೆಂದು ಅಂದನು ಆ ನುಡಿ ಕೇಳಿದೊಡನೆ ಸುಗ್ಗಮ್ಮೆ—

ಎನ್ನ ಪರಿಯಾಪಿಟ್ಟ ಜಿವಿಟ್ಟು ಹೊಲಿಗೆಟ್ಟು!
ಕೆನ್ನೆನೆರೆದಿಪಟ್ಟು ಕಿಬಿಲ್ಕತ್ತಳವಟ್ಟು ನೆರ
ನುನ್ನಿನಂಗ ಸಿಕಾರಮು ಬಿಟ್ಟುಹೋಗಿ ಧಾತುಗಳು
ಪಲ್ಲಟವಾದವು!

ಇನ್ನು ನಾನತ್ತಮಗನು ನಡೆವುದೆತ್ತಲಾ!
ತಂ ನೆರೆದು ಕುಲವಳು ಯೋಗಿಯಾಯಿದೆತ್ತ ಲೋ!
ಕಂ ನಗುವ ನೂತಾನಾದರಿ ಹುಟ್ಟ ನಡೆ ಹುಟ್ಟಿನೆ ಹಿಂದೆ॥
ಎಂದು ಕೇಳುವಳು

ಆಗ ರೇವಣಸಿದ್ಧರು—

ಪುರುಷರೆಲ್ಲಂ ಕಂಡು ಕೂಡಲೆಳಸುವ ನಿನ್ನ!
ಪರಿಯಮೊಳು ಹೊಲಿಗೆ ರಿಲೆಯಿಲ್ಲ ಯತಾಕಾಲದೊಳು
ಪರಮದಂಂತಿಗೆ ಎಾರವದುಭವದ ಹೆಯಿದಲ್ಲ
ಕೋಗಲೆಯೊಳು!
ಭವಿ ಜನಿಯಿಸಲಂದನೆ ಮಾಯೆ! ಹೀಗೆ ಮಾಡುವುದು
ನೊಡುವರು.

ಯೌವನದ ಸಹಜಚಿತ್ರವು ಇಲ್ಲಿ ಮನವೋಹಕವಾಗಿ ಚಿತ್ರಿತವಾಗಿದೆ ಇಂತಹ ಸನ್ನಿವೇಶವನ್ನು ತಳ್ಳಿಹಾಕಿ ಯಾವ ಪುರುಷಾರ್ಥವನ್ನು ಹಳಕಟ್ಟಿಯವರು ಪಡೆದರೋ ನಾವರಿಯೆವು!! ' ಕೆಲವು ಅನುರಣಾಧೀಶ್ವರರ ಚರಿತ್ರೆಗಳು ಹಳ್ಳಿಗೆ ವಿನ್ಯೂಕವಾಗಿರುತ್ತವೆ ಎಂಥವರ ಚರಿತ್ರೆಗಳನ್ನು ನಾವು ಅದೇ ರೀತಿ ಸ್ವಲ್ಪ ವಿಸ್ತಾರವಾಗಿ ಒರೆದಿದ್ದೇವೆ ಈಗಿನ ಪರಿಸ್ಥಿತಿಯಲ್ಲಿ ಅನರಲ್ಲಿ ಬಹು ಜನರ ವೃತ್ತಾಂತಗಳು ನಮಗೆ ಅಪರಿಚಿತವಾಗಿದ್ದರಿಂದ ನಾವು ಅವರ ಹೆಸರುಗಳನ್ನು ಮಾತ್ರ ಇಲ್ಲಿ ಕೊಟ್ಟಿಲ್ಲೇವೆ ಮುಂದೆ ಗ್ರಂಥಾಭಾಗಳು ಬೆೞರೆತಹಾಗೆ ಇಂಥವರ ಚರಿತ್ರೆಗಳನ್ನು ನಾವು ಪೂರ್ಣಮಾಡಲು ಯತ್ನಿಸು ವೆವು" ಎಂಬುದಾಗಿ ಹೇಳುವ ಹಳಕಟ್ಟಿಯವರು ಬಹು ಜನರ ವೃತ್ತಾಂತಗಳ ಪರಿಚಯವಿಲ್ಲದಿದ್ದರೂ ಚಿಂತೆ ಯಿಲ್ಲ! ಚರಿತ್ರೆಗಳಲ್ಲಿ ಘೆಂಬಾಶೋಕವಾಗಿ ಸಾರಿದ ವಿಷಯಗಳನ್ನು ಅಲ್ಪವಾದರಾಗಲಿ ಬರೆಯಬಾರದಿತ್ತೇ? ಇದು ಚರಿತ್ರಾಂಶದ ಅನಪೇಕ್ಷಣವಲ್ಲವೇ!! ಪಕ್ಷಪಾತ ವಲ್ಲವೇ!!!

ಇದಲ್ಲದೆ ಒಸರಲ್ಲಾನವರ ಸಮಕಾಲೀನರಾದ ಮಲ್ಲಿ ಕಾರ್ಜುನರೆಂಡಿತರನ್ನು ಶ್ರೀಶೈಲಾಂಧಾವಸ್ಥಾಪನಾ ಚಾರ್ಯರೆಂತಲೂ ಪಂಚಪೀಠಾಧಿಪತಿಗಳಲ್ಲಿ ಒರ್ವರೆಂತಲೂ ಲಿಖಿಸಿದ್ದಾರೆ. ಇದರ ಸತ್ಯಾಂಶವನ್ನೆಷ್ಟು ನಿಶ್ಚಿಸೋಣ!

ಸುಧಾಂಂಶಾಮ್ಬು ಸಕ್ಷೀತ್ಯೇ ಮಲ್ಲಿಕಾರ್ಜುನ ಲಿಂಗತಃ!
ಜನನಂ ಪಂಗಿತಾರ್ಯಸ್ಯ ವಿಸಾಸಃ ಶ್ರೀಗಿರೌನಿವೇ॥

ಈ ಸ್ವಾಯಂಭುವ ವಚನವು ಪಂಡಿತಾರಾಧ್ಯರು ಮಲ್ಲಿ ಕಾರ್ಜುನರೆಂಗದಿಂದವತರಿಸಿ ಅಲ್ಲಿಯೇ ತಮ್ಮ ಪಿಕ ವನ್ನು ಸ್ಥಾಪಿಸಿದರೆಂದು ಗೊತ್ತುಗೊಳಿಸುತ್ತಿದೆ. ಶ್ರೀ ಪ.

೯೪೦ ರಲ್ಲಿ ಶ್ರೀಷ್ಣಾತೀರದ ಒರೆಯೂರು ಪಟ್ಟಣವನ್ನಾಳು ತ್ತಿದ್ದ ನನ್ನ ಜೋಡದೇವನೆಂಬ ಮಹಾಂಜನು 'ಅಂಧ್ರ ಕುಮಾರಸಂಭವ' ಎಂಬ ಕಾವ್ಯವನ್ನು ಬರೆದು ತನ್ನ ಗುರುರಾಜ ಶ್ರೀಶೈಲಪಿಠಾಧಿಪತಿಯಾದ ಜಂಗಮ ಮಲ್ಲಿ ಕಾರ್ಜುನವಿಗೆ ಅತಿಭಕ್ತಿಯಿಂದ ಸಮರ್ಪಿಸಿರುವನು ಅತನ ಕೃತಿಗೆ ಒಡೆಯನೆಂದು ಸಾರಿರುವಳು

ಸದ್ಭುದಿಜನಜನನಿಲಿಲಾ- ।
ಗದ್ಭುದಿನಳು ಸಂತತೋಪಜಕಾರಿಂ ಮುನಿನಿ- ।
ದ್ಯದ್ಭುದಿನಳುಳಿಂಬುಧಭಿತ ।
ಪುದ್ಭುದಿನಳ ಪಾರಧರ್ಮಮತಿನ್ ೧ ೫ ೧೧
ಸಂ. ಅ. ೯

ರವಿಶಲಲಶೀತಭುಂಡು ಕವಿರಾಜಪಿಪಾಮನಿ ಕಾವ್ಯಕರ್ತ ಸ. ।
ಕೃವಿಧುನಿನಿನ್ನೆ ಬೋಡುಡಟಿ ಕಾವ್ಯಮು ವಿಸ್ತ್ಯತೆಂಂ
ಗುಮಾರಸಂ. ।

ಭವನುಟ ಸತ್ಯಕಾಧಿಪತ ಭವ್ಯಮು ಜಂಗಮ ಮಲ್ಲಕಾರ್ಜುನುಂ
ಡವಿ ಚರಿತಾರ್ಥಯೋಗ್ಯಮಧುಪಟ್ಟಿವಿನಂ ಗೊಸುಯಾಡ
ಜಾಲದೇ ೧ ಪ ॥ ೫೭ ಅ. ೧

ಈ ಪದ್ಯಗಳು ಮೇಲ್ಕಂಡ ಅಭಿಪ್ರಾಯವನ್ನು ಸ್ಪಷ್ಟೀಕರಿಸುತ್ತಿವೆ ಹಾಗು ತನ್ನ ಕಾವ್ಯದಲ್ಲಿ ಅಖಿಲ ಜಗದ್ಗುರು ಶಿವಾಗಮವೇದಿ ಬ್ರಹ್ಮಕುಲೋತ್ತುಂಗ ಶಿವ ತತ್ವಪ್ರಕಾಶಕ ಎಂದು ಬಗೆ ಬಗೆಯಾಗಿ ಆ ಮಹಾ ಚಾರ್ಯನನ್ನು ಸುತಿಸಿದ್ದಾನೆ ಕರ್ನೂಲು ಜಿಲ್ಲೆಯ ಗ್ರಾಮದಲ್ಲಿರುವ ಶ್ರೀ ಶ ೯ ನೆಯ ಶತಮಾನದ ೧೯೯೯ನೇ ಸಂವತ್ಸರದಲ್ಲಿ ಪಂಡಿತಾರಾಧ್ಯರ ನಾರ್ನೇಪ್ಪೆಲು ನವು ಉಂಟು ಹೀಗಿರುವಾಗ ೧೨ ನೆಯ ಶತಮಾನದ ಮಲ್ಲಿಕಾರ್ಜುನಪಂಡಿತರೇ ಶ್ರೀಶೈಲಪೀಠದ ಪ್ರತಿವ್ಯಾಪಕರೆಂದು ಹಲುಬುವ ಹಳಕಟ್ಟಿಯವರ ಬರಹವು ಅಸಂಬದ್ಧ ವಾದುದು ಇನ್ನು ಮುದನೂರಿನ ವಿಕೋರಾಮಪ್ಪನ ಶ್ರೀಕರಭಾಷ್ಯದಲ್ಲಿ ಸ್ತೋತ್ರಪಾತ್ರನಾದ ವಿಕೋರಾಮನಾ ಚಾರ್ಯನಿಗೂ ಸಂಬಂಧವೇ ಇಲ್ಲ

ಶಿಲಾದಮುನಿಗೆ ಋಜ್ಯಳ್ ಎಂಬ ಹೆಂಡತಿ ಇದ್ದು ಆವಳು ಶಾಪಗ್ರಸ್ತಳಾಗಿ ಮರ್ತ್ಯಲೋಕಕ್ಕೆ ಬಂದು ಕಗ್ಗಲ್ಲ ಪುರದಲ್ಲಿ ಕೂಚಿಮಾರನೆಂಬ ನಾಮಧೇಯನ ಹೆಂಡತಿ ಯಾದಳು ಈತನು ಗ್ರಾಮದ ಒಡೆಯನಾದ ಬಾಚಿ ಗೌಡನ ಸೇವಕನಾಗಿದ್ದನು ಮುಂದೆ ಮರುಳಸಿದ್ಧೇ ಶ್ವರನು ಕೂಚಿಮಾರನ ಮಗನಾಗಿ ಜನಿಸಿದನು. ಈತನು ಉಜ್ಜಯಿನಿಪುರದಲ್ಲಿ ನಿಂತು ಅಲ್ಲಿ ಅನೇಕ ಪವಾಡಗಳನ್ನು ಮಾಡಿದ್ದರಿಂದ ಉಜ್ಜಯಿನಿಯ ಮಹಿಷ್ಮ ಹೆಜ್ಜಾಲು ವೀರಶೈವರಿಗೆ ಪಂಚಸಿಂಹಾಸನಸ್ಥರಲ್ಲಿ ಒಂದಾಯಿತು ಮುಂತಾದ ಹಳಕಟ್ಟಿಯವರ ಈ ಅಭಿಪ್ರಾಯಗಳು ದೋಷದೂಷಿತವೂ ಆತವಿಪರುಂಡಿಕಾರ್ಹವೂ ಎಂದು ನಾವು ಧೈರ್ಯದಿಂದ ಹೇಳುತ್ತಿದ್ದೇವೆ

ಸುಪ್ರಸಿದ್ಧರಾದ ಪಂಚಾಚಾರ್ಯರಲ್ಲಿ ಪರಿಗಣಿತ ಮರುಳಸಿದ್ದರು ೧೨ನೆಯ ಶತಮಾನದವರೆಂಬುದು, ಹಾಗು ಅಪ್ಪಯ್ಯ ಸಂಪಾದಕರೆಂಬುದು, ಸತ್ಯಕ್ಕೆ ಸಮ್ಮತ ವಾದುದಲ್ಲ ! ಶ್ರೀಕರಭಾಷ್ಯಕಾರರಾದ ಶ್ರೀಪತಿಪಂಡಿತರು ತಮ್ಮ ಭಾಷ್ಯಾರಂಭದಲ್ಲಿ 'ಸಿದ್ಧಾಶ್ಯಂ ಮರುಳಶ್ಚ ಭೂ ಜುಧನುಶಂ ತಂ ವುವ್ಯಹೇಶ್ವೀಯಸೇ !' ಈರೀತಿ ಸ್ತುತಿ ಸಿದ್ಧಾರೆ ಶರಣ ಮರುಳಸಿದ್ದರು ಶ್ರೀಪತಿ ಪಂಡಿತರಿಗಿಂತ ಪ್ರಾಚೀನನೆಲುಬು ನಿರ್ವಿವಾದವು ! ಶ್ರೀಪತಿಗಳ ಹೆಸರು ಮಲ್ಲಿಕಾರ್ಜುನ ಪಂಡಿತರ ಗಣಸಹಸ್ರದಲ್ಲಿ ಉಲ್ಲೇಖವಾಗಿದೆ ಮಲ್ಲಿಕಾರ್ಜುನಪಂಡಿತರು ಬಸವಣ್ಣನವರ ಸಮಕಾಲೀನ ರಾಗಿರುವರು ಆಜಾರ್ಯ ಶ್ರೀಪತಿಗಳು ಬಸವಣ್ಣನವರಿಗಿಂತ ಪೂರ್ವದವರಾಗುವರು. ಇವರ ಕಾಲ ಕ್ರಿ ಶ ೧೦೬೨ ! ಈ ಬಗೆಗೆ ಸಂದೇಹಬಂದವರು 'ಶ್ರೀಪತಿ ಪಂಡಿತಾರಾಧ್ಯರ ಕಾಲನಿರ್ಣಯ' ಎಂಬ ಗ್ರಂಥವನ್ನು ಅಗತ್ಯ ಅವಲೋಕಿಸಬೇಕು ಇದಲ್ಲದೆ ಪಂಚಾಚಾರ್ಯ ಪಂಜಿನೋತ್ಪತ್ತಿ ಸಂಸ್ಕೃತಗ್ರಂಥದಲ್ಲಿ ಮರುಳಸಿದ್ದರು ದಾರುಕರ ಅವತಾರವೆಂದು ನಂದಿಗೋತ್ರಸಮುದ್ಭವ ರೆಂದು ಹೇಳಲಾಗಿದೆ ಇದು ನಿಜವೆ !

ಹೂಲಿಯ ವಿಖ್ಯಾತಕವಿಯಾದ ಶ್ರೀ ಸಿದ್ಧನಂಜೇ ಶನು ಗುರುರಾಜಚರಿತ್ರವನ್ನು ಬರೆದಿರುವನೆಷ್ಟೆ ! ಆ ಕಾವ್ಯದ ೧ನೆಯ ಸಂಧಿಯಲ್ಲಿ ೨೮ ಯೋಗಾಚಾರ್ಯರ ಪೂರ್ವಾವತಾರ ಮತ್ತು ಪೋಡಕರ ತೋರಿಸಿದ್ದಾನೆ. ಆದರೆ ಇವರೆಸ್ಟೆಲ್ಲ ಹಳಕಟ್ಟಿಯವರು ೭೭೦ ಅಮರಗಣಂಗಳ ವಗ್ಗಳಲ್ಲಿ ಖಂಡಾಕಾರವಾಗಿ ಸಮಾವೇಶಮಾಡಿದ್ದಾರೆ. ಒಂದು ವರ್ಗದವರಲ್ಲಿಸೇರಿಸುವದು ಅಕ್ಷಮವೆನಿಸುವದು ಗಣಸಹಸ್ರದಲ್ಲಿ ಸಂಖ್ಯಾಪೂರ್ಣತೆಗಾಗಿ ಸಳಲರ ನಾಮ ನಿರ್ದೇಶವು ಕಂಡುಬಂದರೂ ೭೭೦ ಅಮರಗಣಂಗಳ ಸಂಪೂರ್ಣ ನಾಮನಿರ್ದೇಶಕವಿಲ್ಲವೆಂಬುದು ಗವುನಾರ್ಹ ವಾಗಿದೆ ಸಂಕೋಧಿಸುತ್ತ ನಡೆದರೆ ಅಧಿಕಾಧಿಕವಾಗಿ ಗಣಂಗಳ ಸಂಖ್ಯೆ ಬೆಳೆಯುಬಹುದಾಗಿದೆ.

ಪೂರ್ಣಪರಮತಿಸಿದೆ ಹಾಗು ತಾಳಮೇಳವಿಲ್ಲದೆ ಉಚ್ಚುಗೊಂಡ ಹಳಕಟ್ಟಿಯವರ ೭೭೦ ಅಮರ ಗಣಾ ಧೀಶ್ವರರು ಎಂಬ ಗ್ರಂಥವು ಅಕಾರದಲ್ಲಿ ಹಿರಿದಾಗಿದ್ದು ಲೇಖಕರ ಪ್ರಕಾಶಕರು ಶ್ರಮವು ಸಫಲವಾಗದಿದ್ದುದರ ನಿದರ್ಶನವೆಂದು ಕಂಡುಬರುತ್ತಿದೆ.

ಸರಿಯಾಗಿ ಪರಿಶ್ರಮಿಸಿ ಸೋಸಿದ ವಿಷಯಗಳನ್ನು ಇದ್ದ ಹಾಗೆನೆ ಗ್ರಂಥಮಾಡಿದರೆ ಅದು ಉಪಯುಕ್ತವಾಗು ವದೆಂಬುದನ್ನು ಬರಹಗಾರರು ಅರಿತಷ್ಟೂ ಹಿತ ಯಾವದೇ ಗುಂಪಿನ ಸೆಕೆತಕ್ಕೆ ಸಿಲುಕದೆ ನಿರ್ವಿಕಾರಿ ಯಾಗಬಹ್ಯೂ ಬರೆಹಗಾರನ ದೆರೆ ದೆಳೆಯುವದು. ಆತ ನಿಂದ ಸಾಹಿತ್ಯಕ್ಕೆ ಸದಾ ಸೇವೆ ಸಲ್ಲುವದು

ದಾರುಕೇಶ್ವರ ಪ್ರಸನ್ನ

ಭಕ್ತಿಯನು ಯಿಡು ನಿತ್ಯದೇವನಡಿಯಲ್ಲಿ ।
ಮುಕ್ತಿಯನು ಈಯುವನು ನಿತ್ಯಮುದದಲ್ಲಿ ॥
ಶಕ್ತಿಪುತ್ರರು ನೀವು ಚಿತ್ತೈಸಿಕೇಗಳ್ಕೆ ।
ಒತ್ತಿ ಪೇಳುವೆನು ಭಕ್ತಿಸಂಗತಿಯಪ್ಪ ॥೧॥

ಭಕ್ತ ಬಾಣನ ಭಕ್ತಿಗೆ ತಾವೊರಿದು ।
ನಿತ್ಯ ಗೃಹಕಾಯಿಲ್ಲವೆನ ಪರವೇಳಕ ॥
ಭಕ್ತ ಪಾರ್ಥನ ಭಕ್ತಿಗೆ ತಾವುರುಳಾಗಿ ।
ಚಿತ್ತದಲ್ಲಿ ರಥ ನಡೆಸಿಲ್ಲವೇ ಆ ಕೃಷ್ಣ ! ॥೨॥

ಪತಿವ್ರತಾ ವ್ರೌಪದಿಯ ।
ಮತಿಗೆಟ್ಟು ಕೌರವನು ॥
ಖತಿಯಿಂದ ಸೆರಗನೆಳೆಯಲ್ ।
ಪತಿತಪಾವನ ಕೃಷ್ಣಮಾನ ಕಾಯಲಿಲ್ಲವೇ ? ॥೩॥

ಸಿರಿಯಾಳ ಸೆಟ್ಟಿಯಾ ।
ಕರೆಯನ್ನು ಕೇಲದಾ ಭಗವಂತ ॥
ಮರೆಮಾಚಿದೆ ಮರ್ಯಾದೆಗೆ ।
ಕರವಿಡಿದು ಕಾವಾಡಲಿಲ್ಲವೇ ? ॥೪॥

ಶಿವಭಕ್ತ ವಿಶ್ವರಾಜನರಂಭ ।
ರವಿಯಿತ್ತ ಚಿಂದ್ರವಕ್ಯಾವಿಂದಾಗ ॥
ಕವಿ ಸಿದ್ಧಲಿಂಗಪಿನತುಗಳು ।
ಶಿವಮಣಿಗೆ ಶಾಪ ಸೋಂಕಿತ. ॥೫॥

ಪುರವರಿತ ಇಜ್ಜೆಲ್ಲನಿಯಲಿ ।
ಮುರುಲ್ಯಾನಾಸ್ಯಾನದಲಿ ॥
ಗುರುಸಿದ್ಧೇಶ್ವರರ ಚರಣಗಳಲ್ಲಿ
ಕರವಿಕ್ಕಿದೀ ಪದ್ಯವಂಬರೆಯಲ್ ॥೬॥

ಸಿದ್ಧಲಿಂಗಯ್ಯ ಉಜ್ಜ

ಸುದ್ದಿ ಸಂಗ್ರಹ

ಭಾರತ ಸರಕಾರ ಪೋಲೀಸ್ ಕಾರ್ಯಾಚರಣೆ ನಡೆಸಿದೆ, ಗೋವಾ ಪ್ರತಿಯು ಪರಿಹಾರ ಸಾಧ್ಯವಲ್ಲ ವೆಂದು ಅಖಿಲ ಭಾರತ ಹಿಂದೂಮಹಾಸಭೆಯ ಪ್ರಧಾನ ಕಾರ್ಯದರ್ಶಿ ಮತ್ತು ಲೋಕಸಭೆಯ ಸದಸ್ಯರಾದ ಶ್ರೀ ವಿ ಜಿ ಕೇಕರವಾಂಡೆ ಅವರು ದೆಂಗಳೂರಿದ್ದಲ್ಲಿ ಪತ್ರಿಕಾಪ್ರತಿನಿಧಿಗಳೊಡನೆ ಮಾತನಾಡುತ್ತ ತಿಳಿಸಿದರು ಮುಂದುವರಿದು-ಹೃದಯ ಪರಿವರ್ತನೆಯೇ ಉದ್ದೇಶ ವಾದ ಸತ್ಯಾಗ್ರಹ ಮಾರ್ಗಾನುಸರಣೆಯಿಂದ ಪೋರ್ಚು ಗೀಸ್ ಸರಕಾರದ ಮೇಲೆ ಏನೂ ಪರಿಣಾಮ ಉಂಟಾ ಗುವುದಿಲ್ಲವೆಂದು ತಮಗೆ ತಿಳಿದಿದೆಯೆಂದೂ, ಅದರೂ, ಸರಕಾರ ತನ್ನ ಶಕ್ತಿಯನ್ನು ಮಾಡುತ್ತಿಲ್ಲವಾಗಿ ಕಾಗೂ ಜನರ ಸಹನೆ ಮೀರಿರುವ ಕಾರಣ ಆ ಕ್ರಮ ವನ್ನು ಕೈಗೊಳ್ಳಬೇಕಾಯಿತೆಂದೂ ತಿಳಿಸಿ ಧೈರ್ಯ ದಿಂದ ಪೋಲೀಸ್ ಕಾರ್ಯಾಚರಣೆ ನಡೆಸಿ ಗೋವಾ ಸಮಸ್ಯೆಯಷ್ಟು ಮುಕ್ತಾಯಗೊಳಿಸಬೇಕೆಂದು ತಾವು ಪ್ರಧಾನಿ ನೆಹರೂರವರನ್ನು ಪ್ರಾರ್ಥಿಸುವುದಾಗಿಯೂ ತಿಳಿಸಿದರು. ಇವರು ಜೂನ್ ೧೫ ನೆಯ ಕಾರ್ಯಾ ೫೦ ಮಂದಿ ಹಿಂದೂಮಹಾಸಭೆಯ ಸತ್ಯಾಗ್ರಹಿಗಳ ನಾಯಕತ್ವ ವಹಿಸಿ ಗೋವಾ ಪ್ರವೇಶಿಸಿರುವರು.

* * *

ಪೋರ್ಚುಗೀಸ್ ಸ್ವಾಸ್ಥ್ಯಗಳವರ ಡಯು ಮತ್ತು ಡಾಮನ್ ಪ್ರದೇಶಗಳಿಗೆ ಕಳೆದ ಮಂಗಳವಾರದಿಂದ ತಾತ್ಕಾಲಿಕವಾಗಿ ಆಂಜೆ ವ್ಯವಸ್ಥೆಯನ್ನು ನಿಲ್ಲಿಸಲಾಗಿದೆ. ಈ ಪ್ರದೇಶಗಳಿಗೆ, ಭಾರತ ಮತ್ತು ವಿದೇಶಗಳ ಆಂಜೆ, ಭಾರತದ ಆಂಜೆ ಇಲಾಖೆಯ ಮೂಲಕ ಹೋಗಬೇಕಾ ಗಿದೆ ಡಯು ಮತ್ತು ಡಾಮನ್ ಪ್ರದೇಶಗಳಿಗೆ ಆಂಜೆ ಯನ್ನು ಮುಟ್ಟಿಸಲಾಗುವುದಿಲ್ಲವೆಂದು ಭಾರತ ಸರ್ಕಾರ ಪೋರ್ಚುಗೀಸ್ ಆಡಳಿತ ವರ್ಗಕ್ಕೆ ತಿಳಿಸಿದೆಯೆಂದು ತಿಳಿದುಬಂದಿದೆ ಆದರೆ ಗೋವಾಕ್ಕೆ ಎಂದಿನಂತೆ ಆಂಜೆ ಸೌಕರ್ಯವಿದೆ

* * *

ವಿಮಾನದ 'ಸ್ಟಾರ್ ಬೋರ್ಡ್‌ಹೈಲ್‌ಎಲ್' ನಲ್ಲಿ ಇಡಲಾಗಿದ್ದ ನಿಯತ ಕಾಲಕ್ಕೆ ಸಿಡಿಯುವ ವಿಧ್ವಂಸಕ ಯಂತ್ರ ವಿತೇಹವೊಂದು ಅಸ್ಸೋಟಿಟಿದ್ದರಿಂದಲೇ, ಬಾಂಡುಂಗ್ ಸಮ್ಮೇಳನಕ್ಕೆ ಕೆಲವೇ ದಿನಗಳ ಹಿಂದೆ ಚೀನೀ ಮತ್ತು ವಿಯಟ್ನಾಂ ಪ್ರತಿನಿಧಿಗಳನ್ನು ಹೊತ್ತು ತರುತ್ತಿದ್ದ ಏರ್ ಇಂಡಿಯ ಇಂಟರ್‌ನ್ಯಾಷನಲ್ ಕಾನ್‌ಸ್ಟೆಲೇಷನ್ ವಿಮಾನವು ದಕ್ಷಿಣ ಚೀನ ಸಮು ದ್ರದ ಒಳ ದುರಂತಕ್ಕೆ ಒಳಗಾಗಿದ್ದು ಎಂದು ಇಂದೋ ನೇಷಿಯ ಸರ್ಕಾರವು ನೇಮಿಸಿದ್ದ ತನಿಖಾ ಸಮಿತಿ ತೀರ್ಮಿಸಿದೆ

* * *

ದಕ್ಷಿಣ ಆಫ್ರಿಕದ ದೇಶೀಯ ವ್ಯವಹಾರ ಶಾಖಾ ಮಂತ್ರಿ ಡಾ॥ ಹೆನ್ರಿಕ್ ವೇರ್ ವೋರ್ಡ್‌ರು ವಿಧಿಸಿರುವ ಹೊಸ ಬಹಿಷ್ಕಾರಾಜ್ಞೆಯ ಕಾರಣ ಮಿಷ್ಕಾಟ್‌ಲೆ ರ್ಯಾಂಡ್‌ನ ೪,೦೦೦ ಆಫ್ರಿಕ ಶಾಲಾ ವಿದ್ಯಾರ್ಥಿಗಳಿಗೆ ಈಗ ಶಾಲೆಯಲ್ಲಿ ಪ್ರವೇಶವಿಲ್ಲವಾಗಿದೆ. ಬಂಟು ಶಿಕ್ಷಣ ಶಾಸನದ ವಿರುದ್ಧ ನಡೆದ ಪ್ರದರ್ಶನಗಳಲ್ಲಿ ಭಾಗ ವಹಿಸಿದ್ದರೆಂಬುದೇ ಇವರ ಮೇಲಿನ ಆಪಾದನೆ. ಡಾ॥ ವೇರ್‌ವೋರ್ಡ್ ಎಚ್ಚರಿಕೆಯಿತ್ತಿ ದ್ದಂತೆ ಇವರು ಏಪ್ರಿಲ್ ೫೫ ರಂದು ಶಾಲೆಗಳಿಗೆ ವಾಪಸಾಗದೆ ಹೋದುದರಿಂದ ಅವರಿಗೆ ಬಹಿಷ್ಕಾರ ಹಾಕಿರುವುದಲ್ಲದೆ ಆ ಶಾಲೆಗಳ ಆಸ್ತಿಕರ್ ಉಪಾ ಧ್ಯಾಯರಲ್ಲಿ ಬಹುಮಂದಿಯನ್ನು ಕೆಲಸದಿಂದ ತೆಗಿಯ ಲಾಗಿದೆ ಮತ್ತೆ ಕೆಲವರನ್ನು ಬೇರೆ ಶಾಲೆಗಳಿಗೆ ವರ್ಗಾ ಯಿಸಲಾಗಿದೆ ಇದು ಶಿಕ್ಷಣ ಶಾಸನದ ವಿರುದ್ಧ ಪ್ರದರ್ಶನಗಳಲ್ಲಿ ಇವರು ಭಾಗವಹಿಸಿದ್ದರೆಂದಲ್ಲ, ವಿದ್ಯಾರ್ಥಿಗಳಲ್ಲಾವಿದ್ದರೂ ಅವರು ಖಾಲಿ ಶಾಲೆಗಳಿಗೇ ಹೋಗಿ ಬರುತ್ತಿದ್ದರು ಈ ಹೊಸ ಆಜ್ಞೆಯು ಪರಿಣಾಮ ವಾಗಿ ಮಿಷ್ಕಾಟ್ಸ್ ರ್ಯಾಂಡ್‌ನ ಶಾಲೆಗಳಲ್ಲಿ ವಿದ್ಯಾರ್ಥಿ ಗಳೇ ಇಲ್ಲದಿರುವುದರಿಂದ ಉಪಾಧ್ಯಾಯರುಗಳಿಗೂ ಕೆಲಸವಿಲ್ಲವೆಂದು ವಿರೋಧ ಪ್ರದರ್ಶನಗಳಲ್ಲಿ ಭಾಗವಹಿ ಸಿದ ಎಲ್ಲ ಆಸ್ತಿಕರನ ವಿರುದ್ಧವೂ ಸರ್ಕಾರವು ಕ್ರಮ ಕೈಗೊಳ್ಳಲಿಚ್ಛಿಸಿದೆ ಅವರು ವಾಸಿಸುತ್ತಿರುವ ಪ್ರದೇಶ ಗಳಿಂದ ಉಚ್ಚಾಟನೆಯೇ ಆ ಶಿಕ್ಷೆ. ಈ ವಿಚಿತ್ರಾಜ್ಞೆ ಯನ್ನು ಈಗಾಗಲೇ ಕೆಲವರ ಮೇಲೆ ಜಾರಿ ಮಾಡ ಲಾಗಿದೆ.

* * *

ಪೋರ್ಚುಗೀಸರಿಂದ ಗೋವನ್ನು ವಿಮೋಚಿಸೆ ಗೊಳಿಸುವ ಪ್ರಶ್ನೆಯನ್ನು ಅಖಿಲಾಗಿ ಬಗೆಹರಿಸಲು ತನಗೆ ಸೂಕ್ತವೆಂದ. ತೀರಾದ ಯಾವುದೇ ಶ್ರಮವನ್ನು ಬೇಗನೆ ತೆಗೆದುಕೊಳ್ಳಬೇಕೆಂದು ಪಾಲಿಸೆಂಟ್ ಪದ ಸ್ಥರೂ, ಪ್ರಜಾಸೋಷಲಿಸ್ಟ್ ಪಕ್ಷದ ಪ್ರಮುಖ ನಾಯ ಕರೂ ಆದ ಶ್ರೀ ಜೆ ಬಿ ಕೃಪಲಾನಿಯವರು ಭಾರತದ ಸರ್ಕಾರವನ್ನು ಒತ್ತಾಯ ಮಾಡಿದರು. ಗೋವಿನ ವಿಷಯದಲ್ಲಿ ಭಾರತದೊಡನೆ ಯಾವುದೊಂದು ಶಾಂತಿ ಯುತವಾದ ಮತ್ತು ಸೌಹಾರ್ದರವಾದ ಒಪ್ಪಂದಕ್ಕೆ ಬರಬೇಕಾದುದರ ಅಗತ್ಯವನ್ನು ಪೋರ್ಚುಗೀಸರು ಮನಗಾಣುವಂತೆ ಮಾಡಲು, ಭಾರತದ ಸರ್ಕಾರವು, ಪೋರ್ಚುಗಲ್‌ನೊಡನೆ ರಾಯಭಾರಿ ಸಂಬಂಧವನ್ನು ರದ್ದುಮಾಡುವುದು ಭಾರತದಲ್ಲಿನ ಪೋರ್ಚುಗೀಸ್ ಸ್ವಾಸ್ಥ್ಯಗಳ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹಾಕುವುದು, ಮೊದಲಾದ ಕ್ರಮಗಳನ್ನು ಪರಿಣಾಮಕಾರಿ ವಾಗಿ ಕೈಗೊಳ್ಳಬಹುದೆಂದೂ ಅವರು ಸೂಚಿಸಿರುವರು.

ಸಿದ್ಧಾಂತಶಿಖಾಮಣಿ
(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಶೈವಲ್ಲ ಕಲ್ಪಶರುವಿನೊಡಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀ ಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟದ್ದು. ದೇವಾಗಾರಿಧಾಸೆಯಲ್ಲಿದ್ದಿತು ಅದಕ್ಕೆ ಆನೇಕರು ಆನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಗೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಕೈ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಶ್ಲಾಘನೆಗೆ ಪಾತ್ರರಾಗಿದ್ದಾರೆ ಮೂರುನೂರು ಪುಟಗಳ ಮೇಲ್ಪಟ್ಟಾಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಭಗವದ್ಗುರು ರೇಣುಕಾಚಾರ್ಯರ ಲೀಲಾಮೋಧಕವಾದ ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣಾತೀತವಾಗಿದೆ ಸದರ ಗ್ರಂಥದ ಎರಡನೇ ಮುದ್ರಣವು ಪಂಡಿತರ ಸಹೋದರರಾದ ವೇ|| ಬ್ರ|| ಮಹಾದೇವಯ್ಯನವರಿಂದ ಮುದ್ರಿಸಿ ಪ್ರಕಾಶಿತವಾಗಿದೆ ಈ ಅಮೂಲ್ಯ ಗ್ರಂಥವನ್ನು ಸರ್ವರೂ ತರಿಸಿ ಓದಿ ಧನ್ಯರಾಗಬೇಕು ಬೆಲೆ ರೂ. 2 8–0

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ರೂಪ್ಯೆ ೦–೬–೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧವರ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ ೦–೪–೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹಪೀಠಗಳಿಗೆ ತಿರುಪಿದ್ದಾಂತವನ್ನು ಉಪದೇಶಿಸುವ ಫೋಟೋ ೦–೬–೦
ಶ್ರೀಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ರೂಪ್ಯೆ ... ೦–೪–೦
" " " ಹಳ್ಳಿ ಸೈಜು ಬೆಲೆ . ೦–೨–೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ ೦–೩–೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡಿಸುವ ಫೋಟೋ ೦–೩–೦
ಶ್ರೀರೇಣುಕಾಚಾರ್ಯರು ಶ್ರೀವೀರಭದ್ರಾಚಾರ್ಯರಿಗೆ. ಪಂಥಪ್ರವರ್ತಕತ್ವವನ್ನು ಅನುಗ್ರಹಿಸುವ ಫೋಟೋ ೦–೩–೦
ಶ್ರೀರೇಣುಕಾಚಾರ್ಯರು ವಿಶ್ವಕರ್ಮಾ ಸ್ಥಾಪತ್ಯಸೆಯಂತೆ ೭. ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦–೩–೦
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯರುಹಸ್ತಾಪಿಸುಗಳವರ ಫೋಟೋ (ನಾನಾವಿಧವರ್ಣಗಳು) . ೦–೪–೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀದಂಪಭಾಪೀಠ ಜಗದ್ಗುರುಗಳು ಶಿರೋವಸ್ತ್ರಪಟ್ಟಾಭಿಷೇಕ ಮಾಡಿಸುವ ಫೋಟೋ ... ೦–೩–೦
ಸದ್ಯಃ ವೀರಾದೇಶಮಾಮಾಡಿರುವ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ ೦–೩–೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦–೩–೦
ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ... ೦–೩–೦
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸದ್ಭಿಯಲ್ಲಿ ಶ್ರೀ ಕಾಶೀಜಗತ್ಪೀಠಾಧಿಪತಿಗಳವರು ಉಪಕಾಶೀಪ್ರಾಂತಾಧಿಪತಿ ಫೋಟೋ. ೦–೩–೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಬೆಲೆ ೦–೩–೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಬೆಲೆ ೦–೪–೦
ಶ್ರೀರಂಭಾಪುರೀ ಜಗದ್ಗುರುಗಳವರ ಸದ್ಭಿಯಲ್ಲಿ ಶ್ರೀವಸ್ತ್ರಹಸ್ತಾಚಾರ್ಯರು ವಿರಾಜಿಸುತ್ತಿರುವ ಫೋಟೋ ... ೦–೩–೦
ಶ್ರೀಜಗದ್ಗುರುರಂಭಾಪುರ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿವಾಶಾಸನಗಳು ... ೦–೩–೦

ಮ್ಯಾನೇಜರ್— ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸದ್ಗ್ರಂಥಗಳು

ಗೋತ್ರಸೂತ್ರಪಟ್ಟಿ (೩ನೆಯ ಆವೃತ್ತಿ)	—	೧ ಆಣೆ
ಸಜ್ಜಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	—	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	—	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	—	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	—	೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	—	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	—	೨ ಆಣೆ.
ಶಿವಭಕ್ತಿವಿಲಾಸ	—	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	—	೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	—	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ)	—	೩ ಆಣೆ
ಜಪಸಾದಿವಿಜಯತತ್ವದರ್ಪಣ (೫ನೆಯ ಆವೃತ್ತಿ)	—	೩ ಆಣೆ
ಹುಚಾಚಾರ್ಯಪ್ರಕಾಶ	—	೩ ಆಣೆ.
ಪಂಚಾಚಾರ ಪ್ರಕಾಶಿಕಾ	—	೩ ಆಣೆ
ಶ್ರೀಗುರುತತ್ತ್ವಪದಗಳು	—	೩ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	—	೪ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	—	೪ ಆಣೆ
ಲಿಂಗಧಾರಣವಿಧಿ	—	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	—	೪ ಆಣೆ.
ವೀರಶೈವ ಪಾಯಶ್ಚಿತ್ತವಿಧಿ	—	೪ ಆಣೆ.
ವೀರಶೈವ ಅಂತ್ಯೇಷ್ಟಿ-ಶ್ರಾದ್ಧವಿಧಿ	—	೪ ಆಣೆ
ವೈದಿಕವಾಜ್ಮಯರಹಸ್ಯ	—	೪ ಆಣೆ
ಶ್ರೀಜಗದ್ಗುರು ಸಂಜಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	—	೪ ಆಣೆ
ಶಕ್ತಿವಿಶಿಷ್ಟಾದ್ವೈತವಿದ್ಧಾಂತ	—	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ) (೩ ನೆಯ ಆವೃತ್ತಿ)	—	೬ ಆಣೆ
ಸಜ್ಜಾಸಾಶ್ರಮವಿಮರ್ಶಶತ್ಪ್ರತಿರೀಕರಣ (೩ನೆಯ ಆವೃತ್ತಿ)	—	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	—	೮ ಆಣೆ
ಶಿವಾದ್ವೈತವಿಭಾಷಾ (ಸಂಸ್ಕೃತ)	—	೮ ಆಣೆ
ವೀರಶೈವಮತಾತ್ಪರ್ಯ	—	೮ ಆಣೆ
ಉಪನಿಷದ್ಭಾಂತದಿವಾಕರ (೩ನೆಯ ಆವೃತ್ತಿ)	—	೮ ಆಣೆ
ಆಗಮಪರಿಜ್ಞಾನ	—	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	—	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	—	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಮವಿಜಯ ವಸ್ತ್ರಕ್ಷತಮಾಲಿಕಾ	—	೮ ಆಣೆ
ಕನ್ನಡ ನ್ಯಾಯಶತಕಮ್	—	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	—	೧೨ ಆಣೆ
ಶಿಷ್ಟಾಸೂತ್ರಸಿದ್ಧಾಂತದರ್ಪಣ.	—	೧೨ ಆಣೆ
ಶ್ರೀಜಗದ್ಗುರು ಸಂಜಾಚಾರ್ಯರ ಪ್ರಾಚೀನತ್ವ	—	೧ ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	—	೧ ರೂ.
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ)	—	೧ ರೂ.
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	—	೧ ರೂ.
ವೈದಿಕಶಿವಪೂಜಾವಿಧಿ (ವೈದಿಕಸ್ತವರತ್ನಾವಳಿಯು. ೩ನೆಯ ಆವೃತ್ತಿ)	—	೧೫ ರೂ.
ಶ್ರೀಕರಭಾಷ್ಯಂ (೩ ನೆಯ ಆವೃತ್ತಿ)	—	೧೫ ರೂ.
ಶಿಷ್ಯರ ಮನೆಗಳಲ್ಲಿ ರಿಜಿಸ್ಟರ್ ಬುಕ್	—	೧೫ ರೂ.
ಶಿವಾಗಮಸಂಗ್ರಹ: (ಆಂಧ್ರಭಾಷಾ ಸಾಗಮ-ಶಾಸ್ತ್ರಾಗಮ-ಮಂತ್ರತಂತ್ರಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	—	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	—	೨ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿರುವುದು	—	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	—	೫ ರೂ.
A brief life-sketch of Pandit Sri Kashinatha Shastriji (*English*)		4 As.
The Philosophical Aspect of Virasaivism (*English*)	...	8 As.
Speeches by Pandit Shri Kashinatha Shastriji (*English*)		12 As.
ಶಿವಾಚಾರಚಂದ್ರಿಕಾ (ಉರ್ದು)		೩ ಕ.
ವೀರಶೈವರತ್ನ (ಮರಾಠಿ)		೩ ೮–೦
ಜಹಾಜಾರಾಧ್ಯಪಂಚಕ (ವೀರಶೈವಾಚಾರ-ಉರ್ದು)		೫ ಕ.
ಶಿವಸಿದ್ಧಾಂತಕಾರಿಕಾ (ಉರ್ದು)		೩ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Bruhanmathadhyaksha Sri Mahadevaru at Sri Panchacharya Electric Press, Sayaji Rao Road, Mysore

REGISTERED No M. 2266 « ಶ್ರೀಜಗದ್ಗುರು ಪಂಚಾಚಾರ್ಯಾ: ಪ್ರಸೀದಂತು » REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾಜನಿತರ್ ಪಂಚಾಸ್ಯಪೂರಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರವಿಯಾಮಕರ್ ಪರಿಲಸತ್ಪಂಚಾಕ್ಷರೀಮೂಧರ್ಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು— ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ] ಸಂಪಾದಕರು— ನಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಶಾಸ್ತ್ರಿಗಳವರು [ಏಕ ಪ್ರತಿಯ ಸೇರಿ ೩ ರೂ ೪ ಆ

ಸಂಪುಟ ೨೯ | ಸೋಮವಾರ ತಾ॥ ೬ ನೇ ಜೂನ್ ೧೯೩೫ | ಸಂಚಿಕೆ ೬

ಗುರುಭಕ್ತಿಯು ಮುಕ್ತಿಮಾರ್ಗವಾದ ರಾಜಮಾರ್ಗವು

ಮನುಷ್ಯಪ್ರಾಣಿಗೆ ಒದಗತಕ್ಕ ವಿವಿಧ ದುಃಖಗಳಲ್ಲಾ ಶ್ರೀವಿಧ ತಾಪಗಳಿಗೂ ಮೂಲಕಾರಣವೆಂದರೆ ಅಹಂಕಾರವು ಈ ಅಹಂಕಾರದಿಂದಲೇ ಜೀವಿಗಳು ಜನನ ಮರಣದ ಸುತ್ತಿನಲ್ಲಿ ಸಿಕ್ಕಿ ಬಳಲುವವು ಅಹಂಕಾರವು ಹುಟ್ಟಿದ ಕೂಡಲೇ ಮನುಷ್ಯನು ಉಚ್ಚೈದಂದಿಂದ ಜಾರಿ ಜೀಲನನು ಈ ಅಹಂಕಾರದ ಕುರುಹಷ್ಟು ನಿರ್ಮೂಲ ಮಾಡಲಿಕ್ಕೆ ಜ್ಞಾನವೇ ಮುಖ್ಯಕಾರಣವೆಂದು ಜ್ಞಾನಿಗಳೂ, ವೈರಾಗ್ಯವೇ ಮುಖ್ಯ ಕಾರಣವೆಂದು ವಿರಾಗಿಗಳೂ, ಯೋಗ-ತ್ಯಾಗಾದಿಗಳೇ ಮುಖ್ಯ ಕಾರಣಗಳೆಂದು ಆಯಾ ಸಾಧನಗಳ ಅಭಿಮಾನಿಗಳಾದ ಜನರು ಭಿನ್ನ ಭಿನ್ನವಾಗಿ ಪ್ರತಿಪಾದಿಸುತ್ತ, ತಾವೂ ಅದಂತೆ ಆಚರಿಸುತ್ತಿರುವರು, ಆದರೆ ಜ್ಞಾನ-ವೈರಾಗ್ಯ-ಯೋಗ-ತ್ಯಾಗ ಮೊದಲಾದವುಗಳು ಅಹಂಕಾರರಹಿತವಾಗಿ ಭಕ್ತಿಯುತವಾದರೆ ಮಾತ್ರ ಅವು ಭವಬಂಧವಿನಾಶಕವಾಗುವವು. ಹಾಗಿಲ್ಲದೆ ಅವು ಭಕ್ತಿಹೀನವಾಗಿ—ನಾನು ಜ್ಞಾನಿ, ಜ್ಞಾನಿ ನಾನು, ನಾನು ಯೋಗಿ, ನಾನು ತ್ಯಾಗಿ, ಇತ್ಯಾದ್ಯಹಂಕಾರಯುತವಾದರೆ, ಈ ಅಹಂಕಾರವು ಎಷ್ಟು ಸೂಕ್ಷ್ಮವಾಗಿದ್ದರೂ ದುಃಖಕ್ಕೆ ಕಾರಣವಾಗುವದು ಒಮ್ಮೆಯೂ ಅತಿ ಸೂಕ್ಷ್ಮವಾದ ಅಹಂಕಾರವು ಮಕ್ಷಸ್ಥಲಕ್ಕೆ ಸೇರಿ ತೊಂಡುದು ಸಹ ಗಿತ್ಯಾಗುವದಿಲ್ಲ. ಈ ಇಪ್ಪತ್ತನೆಯ ಶತಮಾನದಲ್ಲಿ ಜನರು, ಇದು ವಿಜ್ಞಾನಮಯ ಕಾಲ ಎಂದು ಸಾರುತ್ತ, ತಾವು ಕೇವಲ ವಿಜ್ಞಾನವಂತರೆಂಬ ಅಹಂಕಾರ ಬುದ್ಧಿಯನ್ನು ತಮ್ಮ ಮಾರ್ಗದರ್ಶಯಾಗಿ ಮಾಡಿಕೊಂಡು, ತಮ್ಮ ಬುದ್ಧಿಗೆ ತೋಚಿದ ಯುಕ್ತಿ-ಪ್ರಯುಕ್ತಿಗಳಿಂದಲೇ ತಮ್ಮ ಉದ್ಧಾರವಾಗುವ ದೊಡಿ ಪಂಬಿಕೊಳ್ಳುವರು ಮಕ್ಷಸ್ಥ, ಚಿತ್ತ, ಬುದ್ಧಿ, ಅಹಂಕಾರ ಎಂಬ ಅಂತಃಕರಣ ಚತುಷ್ಟಯದ ಸ್ಥಿತಿ ಭೇದಗಳಲ್ಲಾ, ಅಂತಃಕರಣವು ಜಂಜಡವಾಗಿ ಹಲವು ವಿಷಯ ವಿಚಾರ ನಾಡತೊಡಗಿದರೆ ಅದು ಮಕ್ಷಸ್ಥನಿಸಿಕೊಳ್ಳುವದು. ಆ ಮನಸ್ಸು ಯಾವುದೊಂದು ವಿಷಯ ವಿಚಾರದಲ್ಲಿ ಅಂಟಿಕೊಂಡು ಅದನ್ನೇ ಚಿಂತಿಸ ಹತ್ತಿದರೆ ಚಿತ್ತವೆನಿಸಿಕೊಳ್ಳುವದು ಬಳಿಕ ಚಿತ್ತವೆನೆಂಬುದು ಆ ವಿಷಯದಲ್ಲಿ ಉದ್ಯೋಗಿಸಿಸ್ಯುವಯಿಂದರೆ ಅದು ಒದ್ದಿಯನಿಸಿಕೊಳ್ಳುವದು ಆ ಬುದ್ಧಿಯು ಫಲಪ್ರಸ್ತುತ್ತಿಯಿಂದ ಮತ್ತವಾಯಿಸಿದರೆ ಅದು ಅಹಂಕಾರ ವೆನಿಸುವದು ಅಂದಬಳಿಕ ಬುದ್ಧಿಪ್ರೇರಿತ ಯುಕ್ತಿ ಪ್ರಯುಕ್ತಿಗಳಿಂದ ಉದ್ಧಾರವಾಗುವೆನೆಬ್ಬ ಭವನು ಅಹಂಕಾರಕ್ಕೆಯ್ಯಗಾಗಬಹುದಲ್ಲದೆ ಉದ್ಧಾತ್ಮತಾಗಲಾರನು ಉದಾಹರಣಾರ್ಥವಾಗಿ, ಒಬ್ಬನ ಅಂತಃಕರಣದಲ್ಲಿ ಜ್ಞಾನ ಸುಳ್ಳಾಗಿರುವೆನು, ಕಳ್ಳನಿರುವೆನು. ಇವುಗಳನ್ನು ಬಿಟ್ಟರೆ ಪರ್ಣ ಉದ್ಧಾರವಾಗುವದು ಎಂಬ ವಿಚಾರವು ಸ್ಥಿರವಾಯಿತೆಂದು ತಿಳಿಯಿರಿ. ಅದರಂತೆ ಅವರು ಯುಕ್ತಿಯಿಂದ ಒಂದು ಪಕ್ಷದಲ್ಲಿ ಸುಳ್ಳತ್ವ, ಕಳ್ಳತನವನ್ನೂ, ಬಿಟ್ಟರೆ ನಾನು ಸತ್ಯವಾದಿಯು ಪರರ ಸೊತ್ತನ್ನು ಆಪಹರಿಸದವನು ಎಂಬ ಅಹಂಕಾರವು ಮಾತ್ರ ಜನಿಸಲ್ಪಡುವದು ಇಷ್ಟಾರ್ಥಪೂರ್ತಿಯಲ್ಲಿ ಉಚ್ಚೈನಿಂದ ಉಚ್ಚಾಕಾರ ಉತ್ಪನ್ನವಾಗುವದು ಸಹಜವಾಗಿದೆ ಅದರಿಂದ ಒದ್ದಿಪ್ರೇರಕೋಪಾಯಗಳಿಂದ ಉದ್ಧಾರವಾಗುವ ಸಂಭವವಿಲ್ಲವೇ ಇಲ್ಲ

ಈ ವಿಷಯವಾಗಿ ಮಹನೀಯರು ಹಿಂದೂಸ್ಥಾನಿಯಲ್ಲಿ "ಮನೆಮಂ-ಖೀ ಹೋ ಗಯೇ ತೋ ಘೋಕಾ ಪಾನೇಗೆ ಗುರು-ಮುಖೀ ಹೋ ಗಯೇ ತೋ ತರ ಜೀವೇಗೆ," ಅಂದರೆ ಮನಬಂದಂತೆ ನಡೆದರೆ ಹಾಪಿನೊಂದುವನು ಗುರು ಮುಖವಾಗಿ ನಡೆದರೆ ಬಾಟುಹೋಗುವನು ಎಂದು ಬೋಧಿಸಿರುವರು ಗುರುಮುಖದಿಂದ ನಡೆಯುವವನು ಇಷ್ಟಾರ್ಥಪೂರ್ತಿಯನ್ನು ಹೊಂದಿದಾಗ ಆದರ ಶ್ರೇಯಸ್ಸನ್ನೆಷ್ಟು ವನ್ನೂ ಗುರುವಿಗೆ ಅರ್ಪಿಸಿಬಿಡುವದರಿಂದ ಅವನು ಅಹಂಕಾರರಹಿತನಾಗುವನು ಆದರೆ ಮನಸ್ಸಿಗೆಬಂದಂತೆ ನಡೆದು ಭವವನ್ನು ಹೊಂದಿದರೆ ಆದರ ಶ್ರೇಯಸ್ಸನ್ನು ತನ್ನ ಬುದ್ಧಿಗೆ ಅರ್ಪಿಸಿ ಅಹಂಕಾರಿಯಾಗುವನು ಆದ್ದರಿಂದ ಭವಸಾಗರವನ್ನು ದಾಟಿ ಪೈತ್ಯಾನಂದವನ್ನು ಪಡೆಯಲಿಚ್ಛಿಸುವವನು ಮನಬಂದಂತೆ ಅಂದರೆ ಬುದ್ಧಿ ಮುಖಿಯಾಗಿ ನಡೆದುಕೊಳ್ಳದೆ ಗುರುಮುಖಿಯಾಗಿ ನಡೆದುಕೊಳ್ಳಬೇಕು ಹೀಗೆ ಮಾಡದೆ ಬುದ್ಧಿಮುಖಿಯಾಗಿ ನಡೆದುಕೊಂಡರೆ ಯುಕ್ತಿಪ್ರಯುಕ್ತಿಗಳ ಆಗರವಾದ ಬುದ್ಧಿಯು ತನ್ನ ಅನುಯಾಯಿಗಳಿಗೆ ಹೊಸ ಹೊಸಯುಕ್ತಿ-ಪ್ರಯುಕ್ತಿಗಳನ್ನು ಸೂಚಿಸುತ್ತ ನಡೆಯುವುದು ರೀತಿನೀತಿಯು ಹುಳುವಿ ಚಾಯಿಂದಲೇ ರೀತಿಮೆಯು ಎಳೆಯನ್ನು ತೆಗೆದು ತನ್ನ ಕೈಯಿಂದ ಕಾಣಗೃಹನಿರ್ಮಾಣವಾಗಿರಿಕೊಂಡು ಅದರಲ್ಲಿಯೇ ಬಿದ್ದು ಸತ್ತುಹೋಗುವಂತೆ ಜೀವಿಗಳವರೂ ಕೇವಲ ತಮ್ಮ ಬುದ್ಧಿಯನ್ನು ಅನುಸರಿಸಿ ನಡೆದು ಅಹಂಕಾರ ರೂಪವಾದ ಕಾಲ್ಪನಿಕ ವಿಚಾರಗಳಲ್ಲಿ ತೊಡಗಿ ಕಡೆಗೆ ಅವುಗಳಲ್ಲಿಯೇ ಮುಳುಗಿ ಸಾಯುವವು. ಒಟ್ಟಿಗೆ ಅಹಂಕಾರವನ್ನು ಬಡಿಯುವುದು ಪರಮ ದುಸ್ತರವು! ಆದರೆ ಪರಮ ಕರುಣಾಶಾಲಿಗಳಾದ ಶರಣರೂ ಸಂತರೂ ಭಕ್ತಿಯಿಂದ ರಾಜಮಾರ್ಗದಿಂದ ಅಹಂಕಾರದ ಬೇರನ್ನು ಕಿತ್ತುಬಿಸಾಡುವ ಉಪಾಯವನ್ನು ಹೇಳಿ ಅಪಾರಕೆಯಲ್ಲ ತಂಸುಳಿಸಿಬಿಟ್ಟಿರುವರು. ಭಕ್ತಿಮಾರ್ಗವು ಎಲ್ಲಾ ಮಾರ್ಗಗಳಿಗಿಂತಲೂ ಶ್ರೇಷ್ಠವಾದುದು ಪರಮ ಪ್ರೇಮಮೂರ್ತಿಯಾದ ಪರಮಾತ್ಮನ ಸಂಗದ ಪ್ರೇಮಬೆಳೆಯಿಸಿ ಅವನ ಸ್ವರೂಪದಲ್ಲಿ ಬೆರೆಯುವದಕ್ಕೆ ಗುರುಭಕ್ತಿ ಮಾರ್ಗವು ರಾಜಮಾರ್ಗವಾಗಿರುವದು ಭಕ್ತಿಯದ್ವಿಲ್ಲಿ ಪೈಕ್ತಿಯಿರುವದು ಭಕ್ತಿಹುಟ್ಟಿದ ಕೂಡಲೆ ಸಂಕಲ್ಪ ವಿಕಲ್ಪಗಳು ತಾವಾಗಿ ಶುದ್ಧಾಂತಃಕರಣದ ದರ್ಪಣದಲ್ಲಿ ಸದ್ಗುರುವಿನ ಸ್ವರೂಪವು ತಪ್ಪಸ್ಪಷ್ಟಿ ತಾನೇ ಇಣಿಸುವುದು. ಭಕ್ತನು ಮೊದಲು ಅನನ್ಯರೀತಿಯಿಂದ ಸದ್ಗುರುವಿಗೆ ಶರಣುಹೋಗಬೇಕಾಗುತ್ತದೆ. ಹೀಗೆ ಶರಣು ಹೋದಕೂಡಲೆ ಭಕ್ತಿ-ಜ್ಞಾನ-ವೈರಾಗ್ಯಗಳು ತಮ್ಮ ತಮ್ಮ ಕೈಕೆ ತಾವೇ ಉಚ್ಚತ್ವವಾಗುತ್ತವೆ. ಸದ್ಗುರುವಿಗೆ ಶರಣುಹೋದಕೂಡಲೇ ಏಕ ವಾದ ಹಣ್ಣು ದೇಟಿಂದ ಕಳಚಿಬಿಳುವಂತೆ ಅಹಂಕಾರವು ಅಂತಃಕರಣದಿಂದ ದೂರವಾಗುತ್ತದೆ ಒಬ್ಬೆ ದೇಟಿನಿಂದ ಉದುರಿಬಿದ್ದ ಹಣ್ಣು ಪುನಃ ದೇಟಿಗೆ ಹತ್ತಿಕೊಳ್ಳಲಿರುವಂತೆ ಒಮ್ಮೆ ದೂರವಾದ ಅಹಂಕಾರವು ಪುನಃ ಅಂತಃಕರಣಕ್ಕೆ ಅಂಟಿಕೊಳ್ಳಲಾರದು ಸದ್ಗುರುವಿಗೆ ಶರಣುಹೋದವನ ದುರ್ಗುಣಗಳು ತಮ್ಮನ್ನೆಕ್ಕೆ ತಾವೇ ನಷ್ಟವಾಗಿ ಅವನು ಪರಮ ಪ್ರಕಾಶರೂಪವನ್ನು ಕಂಡು ಕೃತಕೃತ್ಯನಾಗುವನು ಸದ್ಗುರುವಿಗೆ ಶರಣುಹೋಗಿ ಶರಣುಶರಣೆಂದು ಸದ್ಗುರು ಸಾಕ್ಷಾತ್ಕಾರವಾಗಿ ನಡೆಯುವದೇ ಭಕ್ತಿಮಾರ್ಗವು. ಬಾಲರು, ತರುಣರು, ವೃದ್ಧರು, ಪಂಡಿತರು, ವಿದ್ಯಾವಿಹೀನರು, ಸರ್ವರೂ ಭಕ್ತಿಮಾರ್ಗವನ್ನು ಹಿಡಿದು ನಡೆದರೆ, ಇಷ್ಟವು ಸಿದ್ಧಿಸುವದು. ಭಕ್ತಿಯು ಬಲಿದು ಮುಕ್ತಾತ್ಮರಾದ ಸದ್ಗುರುಗಳನ್ನು ಶರಣುಹೋಗಿ ಮೊದಲು ಭಕ್ತಿಯ ಯುಕ್ತಿಯನ್ನು ಆಚರಿಸಿದರೆ ಮುಕ್ತಿಯು ಜೊರೆಯವದು ಮರ್ತ್ಯವರೆಯದೆ ಭಕ್ತಿ ಮಾಡುತ್ತೇನೆಂದು ನಟಿಸುತ್ತಹೋದರೆ ಮುಕ್ತಿಯು ಜೊರೆಯವದಿಲ್ಲ ಆದ್ದರಿಂದ ಪ್ರತಿಯೊಬ್ಬರೂ ಧರ್ಮ ನಿಷ್ಠ ಸದ್ಗುರುಗಳಲ್ಲಿ ಭಕ್ತಿಯನ್ನಿಟ್ಟು ಮುಕ್ತಿಮಂದಿರದ ರಾಜಮಾರ್ಗವನ್ನು ಹಿಡಿದು ಇಷ್ಟವನ್ನು ಸಂಪಾದಿಸುವದು ಮುಖ್ಯ ಕರ್ತವ್ಯವಲ್ಲವೇ ?

ಗುರುಭಕ್ತಿಪ್ರೇಮಿ

ಸ್ವೀಕಾರ

ಬೆಳಗಾಂವ ಜಿಲ್ಲಾ ದೊಡ್ಡವಾಡ ಗ್ರಾಮದ ಹುರಗಂಬಳಿ ಕಟ್ಟಿನವರಲ್ಲಿ ತಾ॥ ೩೦-೫-೩೫ ಸೋಮವಾರ ದಿವಸ ಲಕ್ಷ್ಮೇಶ್ವರದ ಶ್ರೀ ಮರಿತಮ್ಮಪ್ಪ ಸಾಂತಾಂತ ಶೆಟ್ಟಿ ಎಂಬ ತರುಣನಿಗೆ ನಡೆದ ತಿವಿಕಲ್ಪಾ ಸಮಾರಂಭ ಸಮಯದಲ್ಲಿ ಪ್ರಭಾಪೂಣಣಕ್ಕಾಗಿ ಸಮರ್ಪಿಸಲ್ಪಟ್ಟ 2 ರೂಗಳು ಶ್ರೀ ಕರ್ಕತೇಶ್ವರ ನೀಲಲಂಕಶಿವಾಚಾರ್ಯ ಸ್ವಾಮಿಗಳು ಸಿಂಹಾಸನ ಬೃಹನ್ಮಠ ಹೂಲಿ ಇವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ॥ ಗದಿಗಿನಪಲ್ಲಿರುವ ವೇ॥ ತೋಟಪ್ಪಯ್ಯ ಶಾಸ್ತ್ರಿಗಳು ತಂಬ್ರಹಳ್ಳಿ ಹಿರೇಮಠ ಇವರ ಪುತ್ರ ಚಿ॥ ವಿಶ್ವನಾಥಶಾಸ್ತ್ರಿ ಇವರಿಗೆ ನೇ॥ ಚನ್ನಯ್ಯನವರು ಹಡಗಲಿ ಹಿರೇಮಠ ಇವರ ಪುತ್ರಿ ಚಿ॥ ಸೌ॥ ಅನ್ನಪೂರ್ಣಾದೇವಿ ಇವರನ್ನು ವಧೂವರರನ್ನಾಗಿ ನಿಶ್ಚಯಿಸಿ ತಾ॥ ೨೫-೫-೩೫ ಗುರುವಾರ ದಿವಸ ನೆರವೇರಿದ ನಿಶ್ಚಯಸಮಾರಂಭದಲ್ಲಿ ಪ್ರಭಾಪೂಣಣಕ್ಕಾಗಿ ವರಕಡೆಯಿಂದ ಸಮರ್ಪಿಸಲ್ಪಟ್ಟ 1 ರೂ ಒಟ್ಟು 3 ರೂಪಾಯಿಗಳು ಶ್ರೀ ಜಸವಂತಗೌಡ ದೊಡ್ಡನಗೌಡರ (ತೊಂಡಿಹಾಳ) ಇವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿಶ್ಚಮಂಗಲವನ್ನಿತ್ತಿಯಲೆಂದು ಪ್ರಾರ್ಥಿಸುತ್ತೇವೆ

ಸಂಚಾಚಾರ್ಯಪ್ರಭಾ

೧೯೫೫ನೆಯ ಜೂನ್ ತಾ|| ೬ನೇ ಸೋಮವಾರ

ರೇಣುಕಾಚಾರ್ಯರ ಕಾಲವನ್ನು ಕಂಡುಹಿಡಿಯುವುದು ಸಾಧ್ಯವೇ ?

ಶ್ರೀಮದಗದ್ಗುರು ರೇಣುಕಾಚಾರ್ಯರು ದ್ವಾಪರಾರಂಭದಲ್ಲಿ ಅವತರಿಸಿದ್ದರೆಂಬ ವಿಷಯವನ್ನು ಪಾಶುಪತ ತಂತ್ರ'ವು

" ದ್ವಾಪರೇ ರೇಣುಕಶ್ಚೈವ ವಾಸಿಷ್ಠ ಇತಿಯೋಗಃ।
ಪುಂಡಾಕಾರಾಸ್ತ್ರಯಶ್ಚೈತೇ ಶಿವಯೋಗೇಷು ಕೀರ್ತಿತಾಃ
ಸಿದ್ಧಕರ್ಣಶ್ಚ ಪಂಚೈತೇ ಪಂಚಯೋಗಾಃ ಸದರ್ಶಕಾಃ "

ಹೀಗೆಂದು ಸ್ಪಷ್ಟವಾಗಿ ಪ್ರತಿಪಾದಿಸುತ್ತಿರಲಿದೆ ರೇಣುಕಾಚಾರ್ಯರು ಅಗಸ್ತ್ಯಾಶ್ರಮದಲ್ಲಿ ಹತ್ತಿರಾಗಲಿಗೆ ತಿರುವಾಂಕೂರ್ ದೇಶದಲ್ಲಿ ಪ್ರವೇಶಮಾಡಿದ ವಿಷಯವು ಇತಿಹಾಸಿಕ ದೃಷ್ಟಿಯಿಂದಲೂ ಸಂಗತವಾಗಿಯೂ ಸಿದ್ಧವಾಗಿದೆ. ಶಿವತಾಂಡವಾಚಾರ್ಯವಿರಚಿತ 'ರೇಣುಕವಿಜಯ'ದಲ್ಲಿ ಶ್ರೀ ರೇವಣಸಿದ್ಧರು ಇದ್ದಾಗಿ ವರ್ಣಿತವಾಗಿರುವುದು ಅಸಂಗತವಲ್ಲ ಏಕೆಂದರೆ ರೇಣುಕಾಚಾರ್ಯರು ಕಲಿಯುಗದಲ್ಲಿಯೂ ಅವತರಿಸಿರುವ ವಿಷಯವು ಸ್ವಯಂಭುವಾಗಿದೆ'ದಲ್ಲಿ

" ಶ್ರೀಮತ್ಪೌರಾಣಿಕಸ್ಯೈಕಲ್ಯಾಗಮ ಶಿರೋರತ್ನತೋ
ಸೂಚೀಕೃತಿರಿಯಾಜ್ಞಾಪ್ರಕಟನಾವಾಸ ಸದ್ಭಕ್ತಯೇ ॥

ಮುಂತಾಗಿ ಪ್ರತಿಪಾದಿಸಲ್ಪಟ್ಟಿದೆ ಆದುದರಿಂದ ರೇಣುಕಾಚಾರ್ಯರು ಸಲುವಾಗಿ ಯಾವ ಕಾಲದಿಂದ ಯಾವ ಕಾಲದವರೆಗೆ ಚರಿತ್ರವು ದೊರೆಯುತ್ತಿದೆಯೋ ಅನ್ನೆಲ್ಲವನ್ನೂ ಒಂದೇ ಕಡೆ ಸಕ್ರಮವಾಗಿ ಪ್ರತಿಪಾದನೆ ಮಾಡಿರುವುದು ಸ್ವಾಭಾವಿಕವಾಗಿದೆ ಶಿವನ ಪಂಚಮಂಚತಿ ಲೀಲೆಗಳು ಬೇರೆಬೇರೆ ಕಾಲಗಳಲ್ಲಿ ನಡೆದರೂ ಅವೆಲ್ಲವೂ ಒಂದೇ ಶಿವಪುರಾಣದಲ್ಲಿಯೇ ಹೇಳಲ್ಪಟ್ಟಿವೆ ರೇಣುಕಾಚಾರ್ಯರು ನಾಲ್ಕು ಯುಗಗಳಲ್ಲಿ ಅವತರಿಸಿರುವುದರಿಂದ ಅವರ ಲೀಲೆಗಳೂ ಆಯಾ ಯುಗದ ರೇಣುಕಾಚಾರ್ಯರಿಗೆ ಸಂಬಂಧಿಸಿದವುಗಳೆಂತಲೇ ತಿಳಿದುಕೊಳ್ಳುವುದಲ್ಲವೆ ' ರೇಣುಕವಿಜಯ ' ಮೊದಲಾದುವುಗಳಲ್ಲಿ ಏಕತ್ರಿತವಾಗಿರುವ ಇವರ ಲೀಲಾವಳಿಯು ಸುಸಂಗತವಾದುದೆಂತಲೇ ಸ್ಪಷ್ಟಯಿಸಿಕೊಳ್ಳಬೇಕು ಹೀಗೆ ಆಯಾ ವಿಷಯಗಳನ್ನು ಸಮಂಜಸಗೊಳಿಸಿಕೊಳ್ಳಲು ಯೋಗ್ಯತೆಯಿಲ್ಲದವರು, ಓಹೋ ! ಎಲ್ಲಿಯ ಆಗಸ್ತ್ಯರು ? ಎಲ್ಲಿಯ ರೇಣುಕರು? ಎಲ್ಲಿಯ ಶಂಕರಾಚಾರ್ಯರು? ಎಲ್ಲಿಯ ರೇವಣಸಿದ್ಧರು? ಮುಂತಾಗಿ ವ್ಯರ್ಥವಾದ ಊಹಾಪೋಹಗಳಿಂದ ಜನಗಳಲ್ಲಿ ಸಂಶಯಗ್ರಸ್ತರನ್ನಾಗಿ ಮಾಡುತ್ತಿದ್ದಾರೆ ಈ ಮಹಾನುಭಾವರು ತಮ್ಮ ಮಿಥ್ಯಾ ಬುದ್ಧಿಯನ್ನು ವಿಚಾರವೆಂಬ ಕುದ್ದೂದರಕಾದಿಂದ ಸ್ವಲ್ಪ ತೊಳೆದುಕೊಳ್ಳುವುದಕ್ಕೆ ಯತ್ನಿಸುವುದಾದರೆ ತನ್ಮೂಲಕ ಸಂಶಯವು ನಿವಾರಣೆಯಾಗುವುದಲ್ಲದೆ ಆನ್ಯರ ಸಂಶಯಗಳನ್ನು ದೂರವಾಡುವುದಕ್ಕೆ ಅನುಕೂಲವಾಗುವುದೆಂಬುದನ್ನು ನಾವಿಲ್ಲಿ ಅತ್ಯಾಗ್ರಹದಿಂದ ಸೂಚಿಸ ಬೇಕಾಗಿದೆ.

ಕ್ರಿಸ್ತಶಕ ೧೦ನೆಯ ಶತಮಾನದಲ್ಲಿ ಚಾಲುಕ್ಯ ವಂಶದ ಕೊಟ್ಟಿಗದೇವ (ವಿಕ್ರಮವರ್ಮ)ನೆಂಬ ರಾಜನು ಮಳಖೇಡ (ಮಾನ್ಯಖೇಟ)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯವನ್ನಾಳುತ್ತಿದ್ದ ಸಮಯದಲ್ಲಿ, ಪಂಡಿಗರೆಂಬ ರಾಜನು ಅವನ ಮಾಂಡಲಿಕ ರಾಜನಾಗಿ ಕರ್ಣಾಟಕ ದೇಶವನ್ನಾಳುತ್ತಿದ್ದನು. ಈ ಪಂಡಿಗ ರಾಜನಿಗೆ " ಜಕ್ಕಿಸುಂದ " ಎಂಬ ಹೆಂಡತಿಯಿದ್ದಳು. ಈ ಜಕ್ಕಿಸುಂದರಿಯು ಶಾಲಿವಾಹನಶಕ ೯೯೦ನೆಯ ಪ್ರಭವನಾಮ ಸಂವತ್ಸರ ಫಾಲ್ಗುಣಮಾಸ ಶುಕ್ಲತಾಯಣ ಪುಣ್ಯಕಾಲ ಸಂಕ್ರಾಂತಿಯ ದಿವಸ ದಾನಮಾಡಿರುವ ವಿಷಯವು ಚಿತ್ರದುರ್ಗದ ತಾ|| ಬೇವಿನಹಳ್ಳಿ ಗ್ರಾಮದ ಹನುಮಂತ ದೇವರ ಗುಡಿಯ ಪ್ರಾಕಾರದಲ್ಲಿರುವ ಶಿಲಾ ಶಾಸನದಲ್ಲಿ ಹೇಳಲ್ಪಟ್ಟಿದೆ. ಪೂರ್ವದಲ್ಲಿ ಮೈಸೂರು ಗವರ್ನಮೆಂಟಿನ ಶಾಸನ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ಮೈ|| ರೈಸ್ ಸಾಹೇಬರವರು ಈ ಶಾಸನವನ್ನು ಶೋಧಿಸಿ ಮುದ್ರಿಸಿರುವರು ಇದು ಚಿತ್ರದುರ್ಗ ತಾಲೂಕಿನ ೭೪ನೆಯ ನಂಬರಿನ ಶಾಸನವಾಗಿರುವುದು ಈ ಶಾಸನದಲ್ಲಿ ಪಂಡಿಗರಾಜನ ಪ್ರಾಚೀನ ವಂಶಾವಳಿಯು ವರ್ಣಿಸಲ್ಪಟ್ಟಿರುವುದು ಈ ವಂಶಾವಳಿಯಲ್ಲಿ ಪಂಡಿಗ ರಾಜನಿಗೆ ಆರನೆಯ ತಲೆಯವನಾದ ' ರೇವಣನಾಥ ' ನೆಂಬ ರಾಜನ ಹೆಸರು ಉಲ್ಲೇಖಿತವಾಗಿರುವುದು ಆ ಶಾಸನದಲ್ಲಿ ಈ ಕೆಳಗೆ ಉದಾಹರಿಸಿರುವ ಪದ್ಯಗಳು ಕೆತ್ತಲ್ಪಟ್ಟಿರುವವು.

ಆ ವಿಭುರಾತ್ಮಜಂ ನೆರೆಯೆ ಪುಟ್ಟಿದೆ ಪುಟ್ಟದ ಪಿಲ್ಲಿಮಯ್ಯನಂ।
ಶಾ ವಸ ಧಾಧಿಪಂಗಿನ ತನಿಯಂ ಕಲಿಕೊಂಕಣವೇಪನು ಸ್ಫು
ದ್ಗಾವನನಂಗಿನಿ ಕೀರ್ತಿಯಿತಿಗ್ರಜನಾಸನ ಸಿಂಹನು ದಾನ ಶಾಂ।
ರೇವಣನಾಥನಾತನ ಮಗಂ ಸೆಗ್ಗುಂ ಸಲೆ ರಾಜಭೂಭುಜಂ॥

ಆತಂಗೆ ಬಿಕ್ಕಿಯಣ್ಣಂ।
ನಾಂತಗೆ ಸತ್ಯತ್ರಿನ ಸುಭುತ್ರಂಗೆ ಸುತಂ॥
ನೊತಳುಂಬಂ ಗೊಗ್ಗಿ ಗೊಗ್ಗಿಗೆ!
ಪೇತಂ ಶ್ರೀಕೊಡ್ಡಣಾಂಕನಾತಂಗೆ ಮಗಂ॥
ಸಂದ ಮಹಾಸಾಮಂತಂ!
ಪಂಡಿಗಾಖ್ಯತ್ರಿಮಿರಮಿವೀ ಜಗದೊಳ್ ಸಂ॥
ಕೃಂಜಸಸಂದನಪಸ್ಪರ್ಶಂ!
- ಪಂ ನಿಜಬಾಹ್ಯಸಪಮಿಯೆಳ್ ಸುಖದಿಂದಂ॥

ಈ ಪದ್ಯಗಳಿಂದ ಪಂಡಿಗರಾಜನ ತಂದೆಯು " ಕೂಡ್ರ ಕಾ ಕ' ನಂದೂ, ಅವನ ತಂದೆಯು "ಗೊಗ್ಗಿ"ಯೆಂದೂ, ಅವನ ತಂದೆಯು "ಬಿಕ್ಕಿಯಣ್ಣ"ನೆಂದೂ, ಅವನ ತಂದೆಯು "ರಾಜಭೂಭುಜು"ನೆಂದೂ, ಅವನ ತಂದೆಯು ರೇವಣನಾಥ ನೆಂದೂ ವ್ಯಕ್ತವಾಗುವುದು. ರೇವಣ ಸಿದ್ಧನ ಹೆಸರನ್ನಿಟ್ಟುಕೊಂಡಿದ್ದ "ರೇವಿನಿಣನಾಥ"ನೆಂಬ ರಾಜನು ಪಂಡಿಗರಾಜನಿಗೆ ೬ನೆಯ ತಲೆಯವನಾಗಿದ್ದಾನೆ ಪ್ರತಿಯೊಬ್ಬರಿಗೆ ೩೦ ವರ್ಷಗಳಂತೆ ಲೆಕ್ಕ ಹಾಕಿದರೂ, ಪಂಡಿಗರಾಜನಿಂತ ರೇವಣನಾಥ ರಾಜನು ೧೮೦ ವರ್ಷಗಳ ಪೂರ್ವದಲ್ಲಿದ್ದನೆಂದು ಸ್ಪಷ್ಟವಾಗುವುದು ಪಂಡಿಗರಾಜನು ಶಾಲಿವಾಹನಶಕ ೯೯೦ ಅಂದರೆ (ಕ್ರಿಸ್ತಶಕ ೯೬೮)ರಲ್ಲಿದ್ದನೆಂಬ ವಿಷಯವು ಈ ಶಾಸನದಿಂದಲೇ ತಿಳಿದುಬರುವುದು ಇದರಿಂದ ಪಂಡಿಗ ರಾಜನಿಗೆ ೬ನೆಯ ತಲೆಯವನಾದ ರೇವಣನಾಥ ರಾಜನು ಸುಮಾರು ಕ್ರಿ ಶ ೭೮೪ ರಲ್ಲಿದ್ದನೆಂದು ತೋರಿಬರುವುದು ಈಗ್ಗೆ ಸುಮಾರು ೧೨೦೦ ವರ್ಷಗಳ ಪೂರ್ವದಲ್ಲಿದ್ದ ರಾಜರು ಈ ಮಹಾಚಾರ್ಯರ ಹೆಸರನ್ನಿಟ್ಟುಕೊಳ್ಳಬೇಕಾದರೆ, ಆ ಕಾಲದಲ್ಲಿ ಈ ಭಗವತ್ಪಾದರ ತೇಜಸ್ಸು ಪ್ರಪಂಚದಲ್ಲೆಲ್ಲಾ ವ್ಯಾಪಿಸಿ ತ್ತಿಂದು ಧಾರಣೆಯಾಗಿ ಜೇಳಲಹಬುದಾಗಿದೆ ಶ್ರೀ ರೇಣುಕಾಚಾರ್ಯರೇ ಪವಿತ್ರನಾವು ಸಾವಿರಾರು ವರ್ಷಗಳ ಪೂರ್ವದಲ್ಲಿ ರಚಿಸಲ್ಪಟ್ಟಿರುವ ಅನೇಕ ಗ್ರಂಥಗಳಲ್ಲಿ ಉಕ್ತವಾಗಿದ್ದರೂ, ಅದು ಈ ಕಾಲದ ಕೆಲವರಿಗೆ ರುಚಿಸುವುದಿಲ್ಲ ಅವರಿಗೆ ಮುಖ್ಯವಾಗಿ ಶಿಲಾಶಾಸನದಲ್ಲಿರಲೇಕಂತೆ ! ಈಗ ಶಿಲಾಶಾಸನದಲ್ಲಿಯೂ ತೋರಿಸಿ ದಂತಾಯಿತು ಇನ್ನು ಮುಂದೆ ಜಲಶಾಸನವೆಂದು ತೋರಿ ಬರೇಕೆಂದು ನುಡಿಯುತ್ತಾರೆಯೋ ಹೇಗೆ ನೋಡಬೇಕು ನಾರ್ಗವಪ್ಪ ವಲಂಬಿಸುವರೆಬಿದು ಪೂರ್ಣ ಸಂಬದ್ಧವೆ. ಯಾವುದಾದರೂ ಒಂದು ವಿಷಯವನ್ನು ವಿಮರ್ಶಕಮಾಡ ಬೇಕಾದರೆ ಕೇವಲ ಶುದ್ಧಹೃದಯದಿಂದ ಮಾಡಬೇಕು ಇದನ್ನು ಬಿಟ್ಟು ಕಲುಷಿತಹೃದಯದಿಂದ ಮಾಡುತ್ತ ಹೋದರೆ ಎಲ್ಲವೂ ತಲೆಕೆಳಗಾಗುವುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ ಒಟ್ಟಿಗೆ ವೀರಶೈವರುತಾಚಾರ್ಯರು ಬಹು ಪ್ರಾಚೀನರು ಈ ಮಹಾತ್ಮರು ಪ್ರತಿಯೊಂದು ಯುಗದಲ್ಲಿಯೂ ಅವತರಿಸಿ ಲೋಕೋದ್ಧಾರವನ್ನು ಮಾಡಿದುದರು ಇವರು ಇತ್ತೀಚೆಗವರೆಂದು ನುಡಿಯುತ್ತ ದುರಭಿಮಾನದಿಂದ ಸಾಧಿಸತೊಡಗುವುದು ಯೂರ್ಯತನವಲ್ಲದೆ ಬೇರೆಯಲ್ಲ ! ಪ್ರಮಥಪುಂಗವರ ಕಾಲವನ್ನು ಕಂಡುಹಿಡಿಯುತ್ತೇವೆಂದು ಪ್ರಲಪಿಸುವುದೂ, ಪರಬ್ರಹ್ಮದ ಕಾಲವನ್ನು ಕಂಡುಹಿಡಿಯು ತ್ತೇವೆಂದು ಪ್ರಲಪಿಸುವದೂ ಹುಚ್ಚರ ವರ್ಗಕ್ಕೆ ಸೇರಿದವರ ಮಾತಾಗಿರುತ್ತದೆ.

ಶ್ರೀಕಂಠರನು ರೇಣುಕನೇತವನ್ನು ತಾಳಿ ಅರ್ಜುನನೆಂಬನೆ ಯುದ್ಧಮಾಡಿದ ಸಮಯದಲ್ಲಿ, ಶಂಕರ ರನ್ನ ಸಂಗಡವಿದ್ದ ಪ್ರಮಥಪರಿವಾರದಲ್ಲಿ ಶ್ರೀರೇಣು ಕನೂ ಇದ್ದನೆಂಬ ವಿಷಯವು ಮಹಾಭಾರತದಿಂದ ತಿಳಿದುಬರುವದು ಮಹಾಭಾರತವನ್ನು ಕುಮಾರ ವ್ಯಾಸನೆಂಬ ಲೋಕಪ್ರಸಿದ್ಧನಾದ ಕವಿಯು ಕನ್ನಡಿಸಿರು ವನು ಈ ಕವಿಯು ಹೆಸರನ್ನು ಕೇಳದ ಕನ್ನಡಿಗನೇ ಇರುವುದಿಲ್ಲ ಈ ಕವಿಯು ಸರವುತೀಯನು. ಈತನು ತನ್ನಿಂದ ವಿರಚಿತವಾಗಿರುವ ಮಹಾಭಾರತದ ಆದ್ಯಾ ಪರ್ವದ ೫ನೆಯ ಸಂಧಿಯಲ್ಲಿ—

ದೇವಸನುರೂಪದಲಿ ನಿಂದಮು।
ದೇವಿಯುಂ ಗುಹಗಣಂತಗಳೆ।
ಲ್ಲಾ ವಿಸೋದವ ನೋಡಿ ಧಂಸಿಸರೊಲಯು ತಾಬದವ॥
ಆ ವಿಗಡನಂದೀಶ ವೀರಕ।
ದೇವಲಕ ರೇಣುಕ ಮಹೋದರ।
ವಾಪತಿಪಿಸುಖು ವೀರಭದ್ರಾತ್ಮಬಲಿಭೂತಗಣ ॥೪೦॥

ಶಂಕರನು ಆರ್ಜುನನೊಡನೆ ಯುದ್ಧಮಾಡುವ ಸಮಯದಲ್ಲಿ ಶಬರವೇಷವನ್ನು ಧರಿಸಿದಂತೆ, ಕಕ್ಕೆ, ಷಣ್ಮುಖ, ಗಣಪತಿ, ನಂದೀಶ್ವರ, ವೀರಕ, ದೇವಲಕ, ರೇಣುಕ, ಮಹೋದರ, ಭಾವಿಷಿವಿ, ವೀರಭದ್ರ ಮತ್ತು ಸಮಸ್ತ ಭೂತಸಮುದಾಯ ಇವರೆಲ್ಲರೂ ವಿನೋದದಿಂದ ಶಬರವೇಷವನ್ನು ಧರಿಸಿದ್ದರೆಂದು ವರ್ಣಿಸಿದ್ದಾನೆ. ಇದರಿಂದ ರೇಣುಕರು ಸಾಂಡವರ ಕಾಲದಲ್ಲಿಯೂ ಇದ್ದರೆಂಬುದು ಸ್ಪಷ್ಟವಾಗುತ್ತದೆ

ಕ್ರಿ ಶ ೧೮೫೧ ರಲ್ಲಿ ಧರಣಿಮಂಡಿಯನ್ನು ಅಂಕಾರಿಸಿದ್ದ ಶ್ರೀಮೈಂದ್ರನೆಂಬ ಮಹಾಕವಿಯು " ಭಾರತಮಂಜರಿ " ಎಂಬ ಮಹಾಕಾವ್ಯವನ್ನು ರಚಿಸಿದ್ದಾನೆ ಈ ಮಹಾಕವಿಯು ಮಹಾಭಾರತದ ವಿಷಯವನ್ನೇ ತನ್ನ ಗ್ರಂಥದಲ್ಲಿ ವಿವರಿಸುತ್ತಾನೆ ಈ ಮಹಾಕಾವ್ಯದ ಆರಣ್ಯಪರ್ವದಲ್ಲಿ ೬೦೫ ನೆಯ ಶ್ಲೋಕದಿಂದ ೬೬೭ ನೆಯ ಶ್ಲೋಕದವರೆಗೆ ತೀರ್ಥಯಾತ್ರೆಗಳ ವರ್ಣನೆಯಿದೆ. ಇದರಲ್ಲಾಕ್ಕವಾಗಿದೆ " ಅಗಸ್ತ್ಯ ತೀರ್ಥ, ರುದ್ರತೀರ್ಥ, ಸ್ಕಂದಕೋಟಿತೀರ್ಥ, ರುದ್ರ ಕೋಟಿತೀರ್ಥ " ಇತ್ಯಾದಿ ತೀರ್ಥಗಳ ಮಧ್ಯ ದಲ್ಲಿ—" ರೇಣುಕತೀರ್ಥ"ದ ನಾಮವೂ ಉಲ್ಲೇ ಖಿಸಲ್ಪಟ್ಟಿರುವುದು.

ಬ್ರಮ್ಮತೀರ್ಥಂ ಸಕಾಮಾರಂ ರೇಣುಕಂ ಚ ಸರೋವರಂ
॥೬೧೯॥

ಇತ್ಯಾದಿಯಾಗಿ ಶ್ಲೇಮೇಂದ್ರನು ಉಲ್ಲೇಖಿಸಿರುವನು. ಇದೇ ರೀತಿಯಾಗಿ ಅನೇಕ ಪ್ರಾಚೀನ ಗ್ರಂಥಗಳಲ್ಲಿ ವೀರಶೈವ ಮತಾಚಾರ್ಯರ ನಾಮೋಲ್ಲೇಖವು ಕಂಡು ಬರುವದು ಇದನ್ನೆಲ್ಲಾ ಪಂಡಿತಂಮನ್ಯರು ಕಣ್ಣಿರೆದು ನೋಡದೆ, ಕಲ್ಪಶಪ್ದದರ್ಥದಿಂದ ಕೂಡಿ ಅಯಥಾರ್ಥವಾಗಿ ಪ್ರಲಪಿಸುತ್ತ ಹೋಗುವುದು ಎಷ್ಟು ಶ್ರೇಯಸ್ಕರವಲ್ಲವೆಂದೂ, ಇನ್ನು ಮುಂದಾದರೂ ಸನ್ಮಾರ್ಗಗಾಮಿಗಳಾಗಬೇಕೆಂದೂ ಆಶಿಸುತ್ತೇವೆ. ಒಟ್ಟಿಗೆ ವೀರಶೈವ ಮತಾಚಾರ್ಯರ ಕಾಲವು ಇಂದೇ ಎಂದು ಕಂಡುಹಿಡಿಯಲು ಸಾಧ್ಯವಿಲ್ಲವೆಂಬುದೇ ಸಿದ್ಧಾಂತವು

ಅತ್ಯಂತ ದೀರ್ಘವಾದ ಸೂರ್ಯಗ್ರಹಣ

ಇದೇ ಜೂನ್ ೩೦ ರಂದು ಗೋಚರವಾಗುವ ಅತ್ಯಂತ ದೀರ್ಘವಾದ ಸೂರ್ಯಗ್ರಹಣದ ವೀಕ್ಷಣೆಗಾಗಿ ಸಿಂಹಳ ದ್ವೀಪಕ್ಕೆ ಭಾರತೀಯ ತಂಡದ ಮುಂಗಡ ಪಕ್ಷವನ್ನೊಂದು ಸಮಾಕ್ಕಾ ಮದರಿಗಳ ಹೆಮ್ಮೆಟ್ ಕೈರಿಕ್ಸ್ ರಾದ ಡಾ|| ಎ ಕೆ. ದಾಸ್‌ರವರ ನಾಯಕತ್ವದಲ್ಲಿ ತೆರಳಿದೆ ಈ ಸೂರ್ಯಗ್ರಹಣವು ಅತ್ಯಂತ ದೀರ್ಘಕಾಲ ವಿದ್ದಿರುವ ೧೨೯೦ ವರ್ಷಗಳಲ್ಲಿ ಪ್ರಥಮಬಾರಿ ಕಾಣಿಸಿ ಕೊಳ್ಳಲಿದೆ

ಸೂರ್ಯಗ್ರಹಣದ ಪಥವು ಸಿಂಹಳದ್ವೀಪ, ಅಂಡಮಾನ್‌ದ್ವೀಪಗಳು, ಬರ್ಮಾ, ಥಾಯ್‌ಲ್ಯಾಂಡ್, ಫಿಲಿಪ್ಪೈನ್ಸ್‌ಗಳ ಮೂಲಕ ಹಾದು ಹೋಗಲಿದೆ ಸಂಪೂರ್ಣ ಗ್ರಹಣದ ಅವಧಿಯು ಸಿಂಹಳ ದ್ವೀಪದಲ್ಲಿ ಏಳು ನಿಮಿಷಗಳು ಮತ್ತು ಫಿಲಿಪ್ಪೈನ್ಸ್ ದ್ವೀಪಗಳಲ್ಲಿ ಈ ಅವಧಿಯು ಏಳು ನಿಮಿಷಗಳು ಮೂರು ಸೆಕೆಂಡುಗಳು ಮಾತ್ರ ಇರುವದು. ಈರೀತಿಯ ಸೂರ್ಯ ಗ್ರಹಣವು ಕ್ರಿ ಶ. ೨೦೩೫ ನೆಯ ಇಸವಿಗೆ ಮೊದಲು ಮತ್ತೆ ಗೋಚರವಾಗುವುದಿಲ್ಲವೆಂದು ಹೇಳಲಾಗಿದೆ.

ಸುದ್ದಿ ಸಂಗ್ರಹ

ಈಚೆಗೆ ಏಪ್ರಿಲ್ ತಿಂಗಳಲ್ಲಿ ಏರ್ ಇಂಡಿಯಾ ಇಂಟರ್ ನ್ಯಾಷನಲ್ ವಿಮಾನ(ಕಾಶ್ಮೀರ್ ಪ್ರಿನ್ಸೆಸ್) ದುರಂತಕ್ಕೀಡಾಗಲು ಕಾರಣವಾದ ಅತ್ಯಾಚಾರಿಗಳನ್ನು ಪತ್ತೆಹಚ್ಚಿ ಅವರ ಬಗ್ಗೆ ಉಗ್ರಶಿಕ್ಷೆಯ ಕೈಗೊಳ್ಳಲು ಹಾಂಕಾಂಗಿನಲ್ಲಿ ಬ್ರಿಟಿಷ್ ಅಧಿಕಾರಿಗಳು ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕೆಂದು ವಿಯರ್‌ಮಿನ್ ಪತ್ರಿಕೆ ಯೊಂದು ಒತ್ತಾಯಪಡಿಸಿದೆ ಈ ದುರಂತದ ಬಗ್ಗೆ ವಿಚಾರಣೆ ನಡೆಸಿದ ಇಂಟೇನೇಷಿಯ ತನಿಖಾ ಸಮಿತಿ ವರದಿ ಪಾಗೂ ಹಾಂಕಾಂಗಿನಲ್ಲಿನ ಬ್ರಿಟಿಷ್ ಅಧಿಕಾರಿಗಳ ಪ್ರಕಟಣೆಯನ್ನು ವೀಕ್ಷಿಸಿದರೆ ಟಿಯಾಂಗ್ ಕೈಷೇಕ್ ರ ಪಂಗಡದವರೇ ಆತ್ಯಾಚಾರಿಗಳೆಂಬುದು ಸ್ಪಷ್ಟವಾಗಿದೆ ಎಂದೂ ತಿಳಿಸಿದೆ ಟ್ರೂಂ ಬಾಂಬೊಂದನ್ನು ಹಾಂಕಾಂಗಿನಲ್ಲಿಯೇ ವಿಮಾನದಲ್ಲಿಟ್ಟರಬಹುದಾದ ಸಾಧ್ಯತೆಯನ್ನು ಹಾಂಕಾಂಗ ಸರ್ಕಾರವೂ ಒಪ್ಪಿಕೊಂಡಿದೆ.

* * *

ಗೋವಾ ಸ್ವಾತಂತ್ರ್ಯವನ್ನು ಪೋರ್ಚುಗೀಸರಿಂದ ಬಲಪ್ರಯೋಗದಿಂದ ಪಡೆಯದೆ ಬೇರೆ ಮಾರ್ಗವಿಲ್ಲ ವೆಂದು ಗೋವಾ ವಿಮೋಚನೆಗಾಗಿ ತೆರಳುತ್ತಿರುವ ೩ ನೆಯ ಸ್ವಯಂಸೇವಕರ ತಂಡದವರೆನ್ನು ಬೀಳ್ಕೊಡುವ ಸಂದರ್ಭದಲ್ಲಿ ನೈನಿತಾಲ್‌ನಿಂದ ಸಾರ್ವಜನಿಕ ಸಭೆಯಲ್ಲಿ ಆಸ್ಟ್ರೇಲಿಯಾದಲ್ಲಿ ಭಾರತದ ಹೈಕಮೀಷನರ್ ಆಗಿದ್ದ ಡಾ॥ ಆರ್ ಪಿ ಪರಾಂಜಪೆಯವರು ತಿಳಿಸಿದರು

* * *

"ಪಮ್ಮಿ ಜನರನ್ನೂ, ನಮ್ಮನ್ನೂ ನೋಯಿಸಿರುವ ಘಟನೆಗಳೇನೇ ಇರಲಿ" ಗೋವಾ ಪ್ರಶ್ನೆಯನ್ನು ಶಾಂತಿಯುತವಾಗಿ ಎದುರಿಸುವ ತನ್ನ ನೀತಿಯನ್ನು ಭಾರತದ ಸರ್ಕಾರವು ಕೈಬಿಡಬೆಂದು ಪ್ರಧಾನಿ ನೆಹರೂ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿರುವರು

ಪಾಕಿಸ್ತಾನದ ಹತೋಟಿಯಲ್ಲಿರುವ ಕಾಶ್ಮೀರದ ಪ್ರದೇಶದಲ್ಲಿ ಪಾಕಿಸ್ತಾನದ ಸರ್ಕಾರವು ಅನುಸರಿಸು ತ್ತಿರುವ ದಮನ ನೀತಿಯ ಬಗ್ಗೆ ಶೇಖ್ ಮತ್ತು ರಾಜೋರಿಗಳಲ್ಲಿನ ಮುಸ್ಲಿಮರು ತೀವ್ರ ಅಸಮಾಧಾನ ವನ್ನು ವ್ಯಕ್ತಪಡಿಸುತ್ತಿರುವರೆಂದು ಜಮ್ಮು ಪ್ರಾಂತೀಯ ರಾಷ್ಟ್ರೀಯ ಸಮ್ಮೇಳನದ ಸಮಿತಿಯ ಪ್ರಧಾನ ಕಾರ್ಯ ದರ್ಶಿ ಶ್ರೀ ಕೃಷ್ಣದೇವ್ ಸೇಥಿಯವರು ತಿಳಿಸಿರುವರು

* * *

ಪಾಕಿಸ್ತಾನ ಅಭ್ಯಾಸಿಸ್ಯಾವಗಳ ನಡುವಣ ಬಿಕ್ಕಟ್ಟಿಗೆ ಪರಿಹಾರ ಕಂಡುಹಿಡಿಯುವ ಸಲುವಾಗಿ ಈಜಿಪ್ಟಿನ ಮಂತ್ರಿ ಕರ್ನಲ್ ನಾದರ್‌ರವರು ೫ ನೇ ತಾರೀಕು ಕರಾಚಿಗೆ ಆಗಮಿಸಿದರು

ಜರ್ಮನ್ ಸಮಸ್ಯೆ ಬಗ್ಗೆ ಘೋಷಣೆ

ಜರ್ಮನಿಯ ಜನರ ಹಿತ ಮತ್ತು ಸಾರ್ವತ್ರಿಕ ಭದ್ರತೆಯ ದೃಷ್ಟಿಯಿಂದ ಜರ್ಮನ್ ಸಮಸ್ಯೆಯ ಪರಿಹಾರ ವಾಗಬೇಕೆಂದು ಘೋಷಣೆ ತಿಳಿಸಿದೆಯಲ್ಲದೆ ಏಪ್ರಿಲ್ ತಿಂಗಳಲ್ಲಿ ಬಾಂಡುಂಗ್‌ನಲ್ಲಿ ನಡೆದ ಏಷ್ಯಾ-ಆಫ್ರಿಕ ರಾಷ್ಟ್ರಗಳ ಸಮ್ಮೇಳನದ ಫಲಿತಾಂಶಗಳನ್ನು ಸ್ವಾಗತಿಸಿದೆ.

೧೯೪೮ ರಲ್ಲಿ ಕೋಮಿನ್ ಫಾರ್ಮ್‌ನಿಂದ ಯುಗೊ ಸ್ಲಾವಿಯವನ್ನು ಉಚ್ಚಾಟನೆಗೊಳಿಸಿದುದಕ್ಕಾಗಿ ಕ್ರುಶ್ಚೇ ವರು ಸಂಧಾನದ ಆರಂಭದಲ್ಲಿ ಇಳೆದ ಶುಕ್ರವಾರ ವಿಷಾದ ವನ್ನು ಸೂಚಿಸಿದ್ದರು ೧೯೫೫ ರಲ್ಲಿ ದೇಶದ್ರೋಹಕ್ಕಾಗಿ ಗಲ್ಲಿಗೇರಿಸಲ್ಪಟ್ಟ ರಷ್ಯದ ಪೋಲೀಸ್ ಮುಖ್ಯಾಧಿಕಾರಿ ಲ್ಯಾವ್ರೆಂಟಿ ಬೆರಿಯಾರೇ ಇದಕ್ಕೆ ಕಾರಣರೆಂದು ಅವರು ಆಪಾದಿಸಿದರು.

ಪೋರ್ಚುಗೀಸ್‌ರಲ್ಲಿ ಕಳವಳ

"ನಿಮ್ಮ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ರಾಷ್ಟ್ರೀಯ ಹೋರಾಟಕ್ಕೆ ಜೊಲ ಕೊಟ್ಟು ಗೋವಾ ವಿಮೋಚಕರಿ ಗೊಳಿಸಲು ಹೋಗಿ" ಎಂಬುದಾಗಿ ಗೋವಾದ ಮಾಜಿ ಸೈನಿಕ ಅಂತೋನಿ ಡಿಸಿಲ್ವಾರವರು ಹೇಳಿಕೆ ಯೊಂದನ್ನಿತ್ತು ಗೋವಾ ಸಶಸ್ತ್ರ ಪಡೆಯವರಿಗೆ ಮಪಿವಿ ಮಾಡಿಕೊಂಡಿದ್ದಾರೆ ಹೆಚ್ಚಿನ ಸಂಖೆಯಲ್ಲಿ ಭಾರತೀಯ ಸೈನಿಕರು ಗೋವಾ ಪ್ರವೇಶಿಸಿದಾಗ ಪಗರ್‌ಹವೇಲಿ ಯಲ್ಲಿ ಮಾಡಿದ ಹಾಗೆ ಮೃತ್ಯುವನ್ನು ಎದುರಿಸಲು ಪೋರ್ಚುಗೀಸರು ನಿನ್ನೆಲ್ಲರನ್ನೂ ಕೆಲಿಟ್ಟು ಓಡುವ ರೆಂದು ಡಿಸಿಲ್ವರವರು ಗೋವಾ ಸೈನಿಕರನ್ನು ಎಚ್ಚರಿ ಸಿದ್ದಾರೆ. ಈ ಹೇಳಿಕೆಯನ್ನೆಳಗೊಂಡ ಪತ್ರಪತ್ರಿಕೆ ಗಳನ್ನು ಗೋವಾ ಮಿಲಿಟರಿ ಪಡೆಗಳೆಲ್ಲಾ ಹಂಚ ಲಾಗಿದೆ. ಈ ಹೇಳಿಕೆಯು ಪತ್ರಪತ್ರಿಕೆಗಳು ಹೇಗೆ ಗೋವಾ ಸೈನಿಕರಿಗೆ ತಲಪಿದುವೆಂದು ಗೋವಾ ಅಧಿಕಾರಿ ಗಳು ಆಶ್ಚರ್ಯಗೊಂಡಿದ್ದಾರೆ. ಆಲ್ಲದೆ ಇದರಿಂದ ಅವ ರೆಲ್ಲಾ ತುಂಬಾ ಸ್ತೋಭೆಗೊಳಗಾಗಿದ್ದಾರೆ.

ಗೋವಾ ವಿಮುಕ್ತಿಗೆ ಜನತೆ ತಾವೇ ಮುನ್ನುಗ್ಗ ಬೇಕು

ಗೋವಾ ವಿಮೋಚನೆಗೆ ಸರ್ಕಾರವನ್ನೇ ನಂಬಿ ಕೊಂಡು ಕೂಡುವುದರ ಬದಲು ಭಾರತದ ಪ್ರಜೆಗಳು ಆ ಬಗ್ಗೆ ತಾವೇ ಮುಂದುವರಿಯಬೆಕೆಂದು ಗೋವಾ ಪ್ರವೇಶಿಸಲಿರುವ ಸತ್ಯಾಗ್ರಹಿಗಳ ಮೂರನೆ ತಂಡದ ನಾಯಕರಾದ ಶ್ರೀ ಆತ್ಮಾರಾಂ ಖಾಪೀಲರು ಭಾರತದ ಜನತೆಗೆ ಮನವಿಮಾಡಿಕೊಂಡಿದ್ದಾರೆ.

ರಷ್ಯಾ ಪ್ರವಾಸಕ್ಕಾಗಿ ನೆಹ್ರೂ ಪ್ರಯಾಣ

ಮೈಸೂರು ನಗರದಲ್ಲಿರುವ ಕೈ। ಪಂ। ಶ್ರೀ ಕಾಶೀನಾಥಶಾಸ್ತ್ರಿಗಳವರ ಕೈಲಾಸೈಕ್ಯಮೃತ ಗದ್ದುಗೆಗೆ ಕಾರ್ತಿಕ ಮಾಸದ ಪೂರ್ಣೋತ್ಸವದ ನಿಮಿತ್ತವಾಗಿ ಕಾರ್ತಿಕ ಶು॥ ೧೫ರಿಂದ ಪ್ರತಿದಿವಸ ನಡೆಯುತ್ತಿದ್ದ ದೀಪಾರಾಧನೆಯು ಇದೇ ಮಾರ್ಗಶೀರ್ಷ ಶು॥ ೨ ಶುಕ್ರವಾರ (ತಾ॥ ೧೩-೧೨-೩೫) ದಿವಸ ಮುಕ್ತಾಯವಾಯಿತು ಅಂದು ಸ್ವಾತಃಕಾಲ ರುಂಭಾಸ್ಫಂಭಗಳೆಂದಲಂಕೃತವಾದ ಗದ್ದಿಗೆಯಲ್ಲಿರುವ ಶಿವಲಿಂಗಕ್ಕೆ ವೈದಿಕರಿಂದ ರುದ್ರಾಭಿಷೇಕ ಹೊಸಕೆ ಸೋಡತೋಪಜಾರ ಪೂಜೆಯೂ ಗಂಲ ಬಿಲ್ವ ಹಾಗು ಫಲ ಪುಷ್ಪ ಸಮರ್ಪಣೆಯೂ ಮಹಾ ನೈವೇದ್ಯ ಮೊದಿಗೆ ನಡೆದನಂತರ ಸಾಯಂಕಾಲ ೬ ಘಂಟೆಗೆ ಪುನಃ ಸಂಕ್ಷೇಪ ಪೂಜಾದಿಗಳಿಂದ ಅಲಂಕರಿಸಿದ ನುಂಟಪದಲ್ಲಿ ರಾಯಚೂರು ಜಿಲ್ಲಾ ಕೊಪ್ಪಳ ತಾಲೂಕು ಭಾಗ್ಯನಗರದ ವೇ॥ ಶಿವಯ್ಯನವರು ಹಿರೇಮಠ ಇವರು ದೀಪಾರಾಧನೆಗಾಗಿ ಭಕ್ತಿಯಿಂದ ಸಹಾಯಮಾಡಿದ್ದರಲ್ಲಿ ದೀಪಗಳನ್ನು ಹಚ್ಚಲಾಯಿತು ಈ ದೀಪೋತ್ಸವಕ್ಕಾಗಿ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನ ಎಲ್ಲ ಕೆಲಸಗಾರರೂ ಪಗರದ ಮಹನೀಯರೂ ಪ್ರೇಕ್ಷಕರೂ ನೆರೆದಿದ್ದರು ಹಂಡಿತರ ಜೀವನದಲ್ಲಿದ್ದ ಪ್ರಕಾಶವು ಅಂದು ತಡೆದ ದೀಪೋತ್ಸವದಿಂದ ಶೋಭಾಯಮಾನವಾಗಿ ಭೂಲೋಕಾಲಂತೆ ಕಾಣುತ್ತಿತ್ತು ಈ ಆನಂದದಲ್ಲಿಯೇ ರಾತ್ರಿ ೮ ಘಂಟೆಯನಂತರ ಮಂಗಲಮಾಡಿ ಶ್ರೀ ಜಗದ್ಗುರು ಪಂಚಾಚಾರ್ಯರ ಹಾಗೂ ಶ್ರೀ ಕಾಶೀನಾಥಶಾಸ್ತ್ರಿಗಳವರ ಜಯಜಯಕಾರದೊಡನೆ ದೀಪೋತ್ಸವ ವನ್ನು ಮುಕ್ತಾಯಗೊಳಿಸಲಾಯಿತು ಕೂಡಿದ ಯಾವ ತಪ್ಪಿಜನರು ಕಾಂಬೂಲ, ದಕ್ಷಿಣೆ, ಪ್ರಸಾದಗಳಿಂದ ಸುತ. ಹೃದಾರು ಶ್ರೀ ಶಾಸ್ತ್ರಿಗಳವರ ತ್ರೈಯೋಭಿವೃದ್ಧಿಗಾಗಿ ಪ್ರಮಿಸುತ್ತಿರುವ ಅವರ ಸಹೋದರರಾದ ವೇ॥ ಮಹಾದೇವಯ್ಯನವರಿಗೂ, ಪ್ರಸ್ತಿನ ಕೆಲಸಗಾರರಿಗೂ ಪರಮೇಶ್ವರನು ಆಯುರಾರೋಗ್ಯವನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುತ್ತೇನೆ ವಿಶ್ವನಾಥಕರ್ಮಾ ಗುರುಕುಲ

ಶ್ರೀ ಚಿಕ್ಕಮಣ್ಣೂರು ಸ್ವಾಮಿಗಳವರಿಗೆ ದಿವ್ಯಸ್ವಾಗತ, ನಾಲಕವಾಡ

ವಿಜಾಪುರ ಜಿಲ್ಲಾ ಮುದ್ದೇಬಿಹಾಳ ತಾಲೂಕ ಕೃಷಿ ನಾಲಕವಾಡಕ್ಕೆ ದಯಮಾಡಿಸಿದ ಶ್ರೀ॥ ೫॥ ಶ್ರಿ॥ ಹಂಡಿಕ ರೇವಣಸಿದ್ಧೇಶ್ವರ ಸಂಸ್ಥಾನಮಠದ ಜಗದ್ಗುರು ಪೂಜ್ಯಶ್ರೀ ಚಿಕ್ಕಮಣ್ಣೂರು ಈ ಪೂಜ್ಯ ಶಿವಯೋಗಿಗಳನ್ನು ದಿನಾಂಕ ೭-೧೨-೩೫ ನೇ ದಿವಸ ಪುರಪ್ರಮುಖರು ಒಳ್ಳೇ ಆದರದಿಂದಲೂ ಪೂಜ್ಯಬುದ್ಧಿಯಿಂದಲೂ ಸ್ವಾಗತ ಸಿಸರು ವೇಕಾಯರ ನಾಡೆದಲ್ಲಿ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ಅವಶ್ಯಿನ ದಿವಸ ಶ್ರೀ ಪುರುಷರು ಅನೇಕವಾಗಿ ಒಂದಿದ್ದರು ಸರ್ವಧರ್ಮದವರು ಒಪ್ಪುವಂತೆ ರಾಷ್ಟ್ರ ಹಾಗೂ ಧರ್ಮಗಳಲ್ಲಿ ನಂಬಿಕೆ ಇರಬೇಕೆಂದು ಅನೇಕ ಉದಾಹರಣೆಗಳನ್ನು ಕೊಟ್ಟು ಸಂಗೀತ ಸಾಹಿತ್ಯದೊಡನೆ ಜ್ಞೋಧಮಾಡಿದ ಮೇಲೆ ಮಂಗಲಮೂಡನೆ ಸಭೆಯು ಸಮಾಪ್ತವಾಯಿತು ಮರುದಿವಸ ಪಬ್ಲಿಕ್ ಬಜಾರದಲ್ಲಿ ಶ್ರೀಮಾನ್ ಗಡೇದ ಸಿದ್ಧಾಮಪ್ಪನವರ ಅಂಗಡಿಯ ಮುಂದೆ ಸಭೆ ನಡೆಯಿತು ಧಾರ್ಮಿಕವಿಷಯವಾಗಿಯೂ ವಿದ್ಯಾ ವಿಷಯವಾಗಿಯೂ ಒಳ್ಳೇ ಮಾರ್ಮಿಕವಾಗಿ ತಮ್ಮ ಅವ್ಯತವಾಣಿಯಿಂದ ಬೋಧಮಾಡಿದರು ಕನ್ನಡ ಶಾಲಾ ಗುರುಗಳು ಎಲ್ಲಾ ವಿದ್ಯಾರ್ಥಿಗಳ ಮಂಗಲಜಯಘೋಷದೊಡನೆ ಸಭೆಯು ಸಮಾಪ್ತವಾಯಿತು ದಿನಾಂಕ ೯-೧೨-೩೫ ನೇ ದಿವಸ ಮುಹಾವೈರಾಗ್ಯಶಾಲಿಗಳಾದ ನಾಲಕವಾಡದ ಶ್ರೀ ವೀರೇಶ್ವರ ಶರಣಾ ಮುಖ್ಯಗುರುಗಳ ಹಿರೇಮಠದಲ್ಲಿ ಶ್ರೀಗಳವರು ವೀರಶೈವ ಶ್ರೀ-ಪುರುಷರು ದೀಕ್ಷೆ ಆಗಬೇಕು, ಸದಾಚಾರದಿಂದ ನಡೆಯಬೇಕೆಂದು ಅನೇಕ ಸಿದ್ಧಾಂತ ವಿಷಯಗಳನ್ನೇ ಪ್ರಾಧಾನ್ಯವಾಗಿ ಮಾದರಿಕೊಟ್ಟು ಒಳ್ಳೇ ರಸವತ್ತಾಗಿ ಎಲ್ಲರಿಗೂ ತಿಳಿಯುವಂತೆ ವ್ಯಾಖ್ಯಾನ ಮಾಡಿದರು ತಾವು ಸ್ವತಃ ಬರೆದು ಮುದ್ರಣಮಾಡಿಸಿದ ಗ್ರಂಥಗಳನ್ನು ಸಭೆಯಲ್ಲಿ ಉಚಿತವಾಗಿ ಹಂಚಿದರು

ವೀ ರಾ. ಹೂಲಿಗೇರಿ

ಕರ್ನಾಟಕ ಸಂಘದಲ್ಲಿ ಗುರುವಿನಪುರ ಶ್ರೀಗಳವರ ಭಾಷಣ

ಮೈಸೂರಿನಲ್ಲಿರುವ ಕರ್ನಾಟಕ ಸಂಘದ ಅಧ್ಯಕ್ಷರು, ಸದಸ್ಯರು ಅಲ್ಲದೆ ಪಾಸಗೀಯ ಕೆಲವು ಮಹನೀಯರು, ವಿದ್ಯಾರ್ಥಿಗಳು ತಾ॥ ೮-೧೨-೩೫ ದಿವಸ ಶ್ರೀಗಳವರನ್ನು ಎಮರುಗೊಂಡು ಅಭೂತಪೂರ್ವ ಸ್ವಾಗತದೊಡನೆ ಸಭಾಂಗಣಕ್ಕೆ ಕರೆದೊಯ್ದರು ಸಭೆಗೆ ಅಧ್ಯಕ್ಷರಾಗಿ ಶ್ರೀಗಳವರು ಭಾಷಣವನ್ನು ಆರಂಭಿಸಿ "ಕನ್ನಡ ಪ್ರಾಂತ ರಕ್ಷಣೆಗೆ ವಿರೋಧ ಸಲ್ಲದು" ಎಂದರು "ಕಾಂಗ್ರೆಸ್ಸು, ಮೈಸೂರು ಸರಕಾರ, ಇಡೀ ಲೋಕವೇ ಮೈಸೂರು ಸಹಿತ ಕರ್ನಾಟಕಕ್ಕೆ ಒಪ್ಪಿಕೊಂಡಿದ್ದರೂ ಅದಮ್ಮ ವಿರೋಧಿಸುವ ಕೆಲವು ಜನಗಳು ಉರುಳು ಶ್ರುವ ಇತಿಹಾಸದ ಭೀಮಾಲಿಗಳಂತಿಯಲ್ಲಿ ಅದೇಕೆ ಬರಲಿಕ್ಕೆ ಸುತ್ತಾರೆಯೋ ತಿಳಿಯದು, ಒಮ್ಮೆ ತೀರ್ಮಾನವಾದ ವಿಷಯಕ್ಕೆ ಎಲ್ಲರೂ ಬೆಲೆಕೊಡಬೇಕು, ಬದಲಾಗು ತ್ತಿರುವ ಕಾಲಕ್ಕೆ ಹೊಂದಿಕೊಳ್ಳಬೇಕು, ವಿರಸಕೈಡಿಗೊಡ ಬೇಡಿ" ಎಂಬ ಮುಖ್ಯಮಂತ್ರಿ ಹಮುಮಂತಯ್ಯನವರ ವಿಶ್ವಹವನ್ನು ಏರೀಕರಣ ವಿರೋಧಿಗಳು ಗಮನಿಸಿ ಹೊಸ ಪ್ರಾಂತರಚನೆಗೆ, ಅವರ ಅಭಿವೃದ್ಧಿಗೆ ನೆರವಾಗು ವುದು ಜಾತಿಯ ಮಾತ್ರ ಕರ್ತವ್ಯವಾಗಿರುತ್ತದೆ ಶ್ರೀ ಹನುಮಂತಯ್ಯನವರು ಆದರಂತೆ ನಡೆದುಕೊಂಡು ಕನ್ನಡಿಗರುಲದ ಅಭಿನಂದನೆಗೆ ಪಾತ್ರರಾಗಿದ್ದಾರೆ"ಎಂದರು ಮುಂದುವರೆದು 'ಈಗ ನಿರ್ಮಿತವಾಗಲಿರುವ ಪ್ರಾಂತ್ಯ ವಮ್ಮ "ವಿಶಾಲ ಮೈಸೂರು" ಎಂದು ಕರೆಯಬೇಕೆ ಕೆನ್ನವ ವಾದವನ್ನು ಬದಲಾಯಿಸಿ "ಕರ್ನಾಟಕ" ಎಂದೇ ಕರೆಯುವುದು ಉತ್ತಮ "ಮೈಸೂರು" ಎಂದು ಕರೆದರೂ ಯಾರದೂ ತೀವ್ರ ಆಕ್ಷೇಪವೇನೂ ತೋರುತ್ತಿಲ್ಲ "ಮೈಸೂರು" ಎಂಬ ಶಬ್ದ ಇನ್ನೂ ಕಿದ ಕನ್ನಡಿಗರಿಗೂ ಅಪ್ಯೇ ಮೋಹಕ, ಆಕರ್ಷಕವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ ಆದರೆ ಕನ್ನಡ, ಕರ್ನಾಟಕ ಎಂಬ ಶಬ್ದಗಳ ಅಮೌಲ್ಯವಾದ ಅರ್ಥ "ಮೈಸೂರು" ನಲ್ಲರುವುದೆ? ತಮಿಳು ಭಾಷೆಯ ತಮಿಳುನಾಡು, ಮರಾಠಿಯ ಮಹಾರಾಷ್ಟ್ರ, ಬಂಗಾಲಿಯ ಬಂಗಾಲ, ಗುಜರಾಥಿಯ ಮಹಾಗುಜರಾಥ ಆಗುತ್ತಿರುವಾಗ ಕನ್ನಡದ ಕರ್ನಾಟಕವಾದರೆ ಏನು ಆಪಚಾರವೋ ಏನು ಅನ್ಯಾಯವೋ ಅರ್ಥವಾಗುವು ಮೈಸೂರಿಂಬ ಹೆಸರನ್ನು ಉಳಿಸಿಕೊಳ್ಳುವುದು ಅಗತ್ಯವಿದೆ ಎಂದು ಕೂಗು ಹಾಕುವುದಕ್ಕೆ ಬದಲು ಕರ್ನಾಟಕದಲ್ಲಿ ರೂಢಿಗೆ ತರಬೇಕಾದ ಮೈ ಮೂರಿನ ಉತ್ತಮ ಸಂಪ್ರದಾಯಗಳನ್ನು ಯೋಚಿಸಿ ಅದಕ್ಕಾಗಿ ಕ್ರಮಿಸಲಿ" ಎಂದು ಹೇಳಿ ಬಳ್ಳಾರಿಯ ಜಿಲ್ಲೆ ಮಾತನಾಡುತ್ತ—" ಭಾರತದಲ್ಲಿ ಬಂಗಾಲ ದುರ್ದೈವಿಯಾಗಿ ಕತ್ತಿ ಅನುಭವಿಸಿರುವಂತೆ, ಕರ್ನಾಟಕದಲ್ಲಿ ಬಳ್ಳಾರಿಗೆ ಆ ದೌರ್ಭಾಗ್ಯ ಲಭಿಸಿದೆ ಪ್ರತಿಫಲವೂ ಅದು ಅಗ್ನಿಪರೀಕ್ಷೆಗೆ ಗುರಿಯಾಗುತ್ತಿದೆ" ಎಂದರು ಮುಂದೆ ಗಡಿಸಮಸ್ಯೆಯನ್ನು ಕುರಿತು ವಿಸ್ತಾರವಾಗಿ ನೂತನವಾಗಿ "ಕನ್ನಡಿಗರೆಲ್ಲರೂ ಒಮ್ಮತದಿಂದ ದುಡಿದರೆ ಎಲ್ಲವೂ ಸಾಧ್ಯ" ಎಂದು ಹೇಳಿ ತಮ್ಮ ಉಪನ್ಯಾಸವನ್ನು ಮುಕ್ತಾಯಮಾಡಿದರು ವಂದನಾರ್ಹರೆ, ರಾಷ್ಟ್ರ ಗೀತೆಯಾದನಂತರ ಸಭೆ ಮುಕ್ತಾಯವಾಯಿತು

ಆನಂತರಂಗಾಚಾರ್ಯ, ಬಿ ಎ

ಬಳ್ಳಾರಿಯ ಶಾಂತಿಗಾಗಿ ದೇವತಾಪೂಜೆ

ಬಳ್ಳಾರಿ ಜಿಲ್ಲೆಗೆ ಅನ್ಯಾಯವಾಗಿರುವುದು ಸರ್ವರಿಗೆ ವೇದ್ಯವೆ ಇರುತ್ತೆ, ಆದರೆ ಈಗ ಕೊಟ್ಟೂರು ಪ್ರಭು ವಡೆಯರ್ ಸುಖದ ಮರುಳಾರಾಧ್ಯರು ಬಳ್ಳಾರಿ ಜಿಲ್ಲೆಗೆ ನ್ಯಾಯ ಹೊರೆತು ಶಾಂತಿ ನೆಲೆಗೊಳ್ಳುವವರೆಗೂ ಶ್ರೀ ವಿಶ್ವೇಶ್ವರನನ್ನು ಶ್ರೀ ಕೊಟ್ಟೂರೇಶ್ವರನನ್ನೂ ಪೂಜಿಸುವ ಸಂಕಲ್ಪ ಮಾಡಿಕೊಂಡು ಉಭಯಾಗಮೋಕ್ತಿಗಳಿಗೆ ಪಂಚಾಮೃತ ಅಭಿಷೇಕ ಮಾಡಿ ಪೂಜಪತೋಕ್ತವಾಗಿ ಗಂಧಾದಿ ಪೂಜೆಯಿಂದ ಪ್ರತಿನಿತ್ಯದಲ್ಲೂ ಒಂದುಲಕ್ಷ ಮಂತ್ರ ಜಪವನ್ನು ಕೈಕೊಂಡಿರುತ್ತಾರೆ ಮತ್ತು ಶಾಂತಿ ಆಗುವ ವರೆಗೂ ಆಹರಿಸುವರೆಂದು ವಿಶ್ವಪಿಸಿರುತ್ತಾರೆ. ವಿಳ್ಳಿಗಳು ದೂರಾಗಲೆಂದೂ ಬಳ್ಳಾರಿ ಜಿಲ್ಲೆಗೂ ಕರ್ನಾಟಕಕ್ಕೂ ಸುಖವಾಗಲೆಂದೂ ಇವರ ಸಂಕಲ್ಪ ಪ್ರಾರ್ಥನೆ

ಜ. ವಿಶ್ವಕಲ್ಪಪ್ಪ ಕೊಟ್ಟೂರು

ಪಂಚಾಚಾರ್ಯಪ್ರಭಾ

೧೫ನೇ ಡಿಸೆಂಬರ್ ತಾ|| ೧೯ನೇ ಸೋಮವಾರ

ಉದ್ಭಟಾರಾಧ್ಯರು

ಪೂರ್ವಕಾಲದಲ್ಲಿ ವೀರಶೈವ ಗುರುವಂಶೀಯರು ಅನಿತರಸಾಧಾರಣವಾದ ತಪಃಪ್ರಭಾವದಿಂದ ರಾಜಾಧಿರಾಜರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡು ಹೋಗಿರುವ ವಿಷಯವು ಜಗತ್ಪ್ರಸಿದ್ಧವಷ್ಟೆ. ಆ ಮಹಾಶ್ವರ ಪ್ರಭಾವವನ್ನು ಪ್ರಾಚೀನಗ್ರಂಥಗಳು ಮುಕ್ತಕಂಠದಿಂದ ಸಾರುತ್ತಿರುವುವು ಅವರಲ್ಲಿ ಉದ್ಭಟಾರಾಧ್ಯರೆಂಬ ವರೊಬ್ಬರು. ಇವರು ಮಹಾಮಹಿಮಾಶಾಲಿಗಳು ಜಗದ್ವಂದ್ಯರೂ ಆಗಿದ್ದರು ಈ ಮಹಾಶ್ವರ ವಿಷಯವು ಅನೇಕಶಾಸನಗಳಿಗೆ ತಿಳಿಯದಿದ್ದುದರಿಂದ ಸದ್ಯಃ ಅವರ ಸಂಕ್ಷಿಪ್ತ ಚರಿತ್ರೆಯನ್ನು ಇಲ್ಲಿ ಪ್ರಸಾರಿಸುವುದಾಗುವುದು

ಈ ಮಹಾತ್ಮನು ಗುಜರಾಥದೇಶದ ಅಹಮದಾಬಾದ ಡಿಸ್ಟ್ರಿಕ್ಟಿಗೆ ಸೇರಿರುವ ' ಧಳ್ಳಕೆ " ಎಂಬ ಪಟ್ಟಣದಲ್ಲಿ ಕ್ರಿ ಶ ೧೧ ನೆಯ ಶತಮಾನದಲ್ಲಿ ಜನ್ಮವೆತ್ತಿದನು ಈತನು ವೀರಶೈವಾಚಾರಧ್ಯಬ್ಯಾಕ್ಯಾನವೆಂಬುವು ಬಾಲ್ಯದಲ್ಲಿಯೇ ವೇದವೇದಾಂಗಗಳನ್ನೂ ಸಕಲಶಾಸ್ತ್ರಗಳನ್ನೂ ಅಭ್ಯಾಸಮಾಡಿ ದಿಗ್ವಿಜಯಪ್ರಕಟಿಸಿಕೊಂಡು, ಪರಮತಖಂಡನಪೂರ್ವಕವಾಗಿ ಶಿವಸರ್ವೋತ್ಕರ್ಷಮತ್ಸವನ್ನು ಜಗತ್ತಿನಲ್ಲಿ ಸ್ಥಾಪಿಸಿದನು ಈ ಮಹಾತ್ಮನು ಜಗದ್ವಿಖ್ಯಾತ " ಭೋಜರಾಜನಿಗೆ " ಶಿವದೀಕ್ಷೆಯನ್ನು ಅನುಗ್ರಹಿಸಿ ಆ ರಾಜನಿಗೆ ಗುರುವಾಗಿದ್ದನು ಭೋಜ ಮಹಾರಾಜನು ಈ ಮಹಾತ್ಮನಲ್ಲಿ ಅನಿತರಸಾಧಾರಣ ಭಕ್ತಿಯುಳ್ಳವನ್ನು ವರ್ತಿಸುತ್ತಿದ್ದನು

ಧಳ್ಳಕೇಖ್ಯಾಪನಗರೇ ಶಿವಭಕ್ತ್ಯನಿಷೇವಿತೇ
ತತ್ರಾಸೀದ್ಭೂಭಃ ಕೃಪಾದಾರಾಧ್ಯಃ ಸಾಕ್ಷಾತ್ತ್ರಯೀವಿತ್ ॥
ತದಭಿಷೇಷಮಹೋತ್ಸವಾಯ ದೀಕ್ಷಯಾನಾಸ ರಾಸ್ತತಃ ॥
ವೇದಸಿದ್ಧಾಂತಪುರಾಣಾನ್ಯಾ ಸರ್ವಾನ್ಯಜ್ಞಾಂಶ್ಚ ವಾನಸಃ ।
ಪಾಶುಮ್ಯಂ ಸ್ಥಾಪಯಾಮಾಸ ಶಿವಸ್ಯ ಪರಮಾತ್ಮನಃ ॥

ಈ ರೀತಿಯಾಗಿ ಕೆಲವು ಗ್ರಂಥಗಳಲ್ಲಿ ಈ ಮಹಾತ್ಮನ ವಿಷಯವು ಉಕ್ತವಾಗಿದೆ. ಈ ಮಹಾತ್ಮನು ಯಾವಾಗಲೂ ಶಿವಲಿಂಗಸ್ಫೂರ್ತಿಯಲ್ಲಿ ನಿರತನಾಗಿರುತ್ತಿದ್ದುದರಿಂದಲೂ ಅದ್ಭುತವಾದ ಪಾಂಡಿತ್ಯದಿಂದ ಪ್ರಕಾಶಿಸುತ್ತಿದ್ದುದರಿಂದಲೂ ಈ ಮಹಿಮನನ್ನು ಭೋಜಮಹಾರಾಜನ ಭಕ್ತಿಯು ಶತಗುಣಿತವಾಗಿದ್ದು ಹೀಗಿರುತ್ತಿರಲು ಕೆಲವು ಕಾಲದ ಮೇಲೆ ಈ ಮಹಾತ್ಮನು ಶಿವಾಧೀನ ನಾದನು ಆಗ್ಗೆ ಈ ಮಹಾತ್ಮನ ಶರೀರವನ್ನು ರುದ್ರ ಭೂಮಿಗೆ ಸಾಗಿಸಿ ಅಂತ್ಯೇಷ್ಟಿಕ್ರಿಯೆಗಳು ಯಥಾವಿಧಿಯಾಗಿ ನಿರೀವೇರಿಸಲ್ಪಟ್ಟವು ಆ ರುದ್ರಭೂಮಿಯಲ್ಲಿ ಒಂದು ಮಟವೃಕ್ಷವಿದ್ದಿತು ಆ ವೃಕ್ಷದಲ್ಲಿ ಬಹುಕಾಲದಿಂದ ಅಪಮಾನಂತಪಿಶಾಚಿಗಳು ವಾಸಮಾಡಿಕೊಂಡಿದ್ದವು. ಈ ಮಹಾತ್ಮನ ಶರೀರಸಂಸ್ಕಾರಸಮಯದಲ್ಲಿ ಹಾಕಿದ ಧೂಪದ ಹೊಗೆಯು ಆ ವೃಕ್ಷವನ್ನು ವ್ಯಾಪಿಸಲು, ಆ ಹೊಗೆಯ ಸಂಪರ್ಕದಿಂದ ಆ ವೃಕ್ಷದಲ್ಲಿದ್ದ ಪಿಶಾಚಿಗಳೆಲ್ಲವೂ ಪಿಶಾಚಭಾವವನ್ನು ಬಿಟ್ಟು ದಿವ್ಯ ದೇಹವನ್ನು ಧರಿಸಿ, ಶಿವಲೋಕವನ್ನು ಹೊಂದಿದವೆಂಬ ವಿಷಯವು ಈ ಮಹಾತ್ಮನ ಚರಿತ್ರೆಯಲ್ಲಿ ಉಲ್ಲೇಖಿಸಲ್ಪಟ್ಟಿರುವುದು. ಇದರಿಂದ ಈ ಮಹಾತ್ಮನ ಮಹಿಮಾ ಪ್ರಭಾವವು ಯಾವರೀತಿಯಾಗಿರುತ್ತದೆಂಬುದು ಸರ್ವರಿಗೂ ಸ್ಪಷ್ಟವಾಗುತ್ತದೆ. ಈ ಮಹಾತ್ಮನು ಶಿವನ ಲೀಲೆಗಳನ್ನು ಕುರಿತು ಒಂದುಸಾವಿರ ಪದ್ಯಗಳಿಂದ ಯುಕ್ತವಾಗಿರುವ " ಹರಲೀಲೆ " ಎಂಬ ಉದ್ಗ್ರಂಥವನ್ನು ರಚಿಸಿರುವನೆಂಬ ವಿಷಯವನ್ನು ಶ್ರೀ ಕ. ೧೮೩೫ ರಲ್ಲಿದ್ದ " ಬ್ರಹ್ಮಶಿವ "ನೆಂಬ ಜೈನಕವಿಯು ತನ್ನಿಂದ ರಚಿತವಾಗಿರುವ " ಸಮಯಪರೀಕ್ಷೆ " ಎಂಬ ಗ್ರಂಥದಲ್ಲಿ ಹೇಳಿರುವನು. ಅಸಾಧಾರಣಮಹಿಮಾಶಾಲಿಯಾದ ಈ ಮಹಾತ್ಮನನ್ನು ವೀರಶೈವವಿಗಳು ವಿಶೇಷವಾಗಿ ಕೊಂಡಾಡಿರುವರು.

ಇದೇ ಹೆಸರಿನ ಇನ್ನೊಬ್ಬ ಮಹಾತ್ಮನು ಕಾಶ್ಮೀರ ದೇಶವನ್ನಾಳುತ್ತಿದ್ದ " ಜಯಾಪೀಡ "ನೆಂಬ ಮಹಾರಾಜನ ಆಸ್ಥಾನವಿದ್ವಂಸಕನೆಂಬ ವಿಷಯವು

* ರಾಜತರಂಗಿಣಿ " ಎಂಬ ಗ್ರಂಥದಿಂದ ತಿಳಿದುಬರುತ್ತದೆ ಜಯಾಪೀಡ ಮಹಾರಾಜನು ಕ್ರಿ ಶ ೭೭೯ ರಿಂದ ೮೧೩ ರ ವರೆಗೆ ರಾಜ್ಯವನ್ನಾಳಿದನೆಂಬ ವಿಷಯವು ಇತಿಹಾಸಪ್ರಸಿದ್ಧವಷೆ ಕಾಶ್ಮೀರದೇಶದ ಮಹಾರಾಜನ ಆಸ್ಥಾನದಲ್ಲಿದ್ದ ಉದ್ಭಟಾರಾಧ್ಯನು ಭೋಜರಾಜನ ಗುರುವಾಗಿದ್ದ ಉದ್ಭಟಾರಾಧ್ಯನಿಂಲೂ ೨೦೦ ವರ್ಷಗಳ (ಈಗ್ಗೆ ೧೩೦೦ ವರ್ಷಗಳ) ಪೂರ್ವದಲ್ಲಿದ್ದನೆಂದು ವೇದ್ಯವಾಗುವುದು ಆದರೆ ಈ ಮಹಾತ್ಮನ ವಿಷಯಕವಾದ ಚಾರಿತ್ರವಾವುದೂ ಇನ್ನೂ ಹೊರಬ್ದಿದ್ದಲ್ಲಿ ಶೋಧಿಸಿದರೆ ಅದೂ ಸಹ ಹೊರಬೀಳಬಹುದೆಂದು ಶೋರುತ್ತದೆ ಪ್ರಾಚೀನ ಇತಿಹಾಸಗಳನ್ನು ಕೊಧಿಸುತ್ತ ಹೋದರೆ ಇಂತಹ ಅನೇಕ ಪ್ರಾಚೀನ ವೀರಶೈವ ಗುರು ಸಂತತಿಯವರ ವಿಷಯಗಳು ಪ್ರಕಾಶವಾಗುವುದರಲ್ಲಿ ಸಂದೇಹವಿಲ್ಲ

ಇತಾಸಿವಿಷಯಗಳನ್ನು ವಿಸ್ತರ್ಶನಾಡಿನೋಡಿದರೆ ಪೂರ್ವಕಾಲದಲ್ಲಿ ವೀರಶೈವ ಗುರುವರ್ಗದವರು ಮಹಾ ರಾಜಾಧಿರಾಜರಿಂದ ಸಮ್ಮಾನಿತರಾಗಿ ಮೆರೆಯುತ್ತಿದ್ದ ರೆಂದು ಸ್ಪಷ್ಟವಾಗುತ್ತದೆ

ದ್ವಿತೀಯ ಯೋಜನೆಯಲ್ಲಿ ' ರಾಷ್ಟ್ರೀಯ ಶಿಕ್ಷಣ ಪದ್ಧತಿ '

ಡಾ|| ಶ್ರೀ ಕೆ. ಎಲ್. ಮಾಲಿಯವರ ಭಾಷಣ

ಭಾರತವು ಸುಪೀರಾಜ್ಯ ಪದ್ಧತಿಯನ್ನು ತನ್ನ ಗುರಿಯನ್ನಾಗಿ ಆರಿಸಿಕಂಡಿದ್ದು ಅದನ್ನು ಪ್ರಜಾಪ್ರಭುತ್ವದ ವಿಧಾನಗಳಲ್ಲಿ ಸಾಧಿಸಲೆಕಾಗಿರುವುದೆಂದೂ ಅದಕ್ಕಾಗಿ ನನ್ನು ಪ್ರತಿಭೆ ಮತ್ತು ಸುಸಂಸ್ಕೃತಿಗಳುಗುಣವಾದ ರಾಷ್ಟ್ರೀಯ ಶಿಕ್ಷಣ ಪದ್ಧತಿಯನ್ನು ರೂಪಿಸುವದು ಅಗತ್ಯ ವೆಂದೂ ಭಾರತ ಸರ್ಕಾರದ ಶಿಕ್ಷಣ ಖಾಯೆಯ ಉಪ ಮಂತ್ರಿಗಳಾದ ಡಾ|| ಶ್ರೀ ಕೆ ಎಲ್ ಮಾಲಿಯವರು ಇದೇ ನವಂಬರ ೨೩ ರಂದು ದೆಹಲಿಯ ಆಕಾಶವಾಣಿ ಯಲ್ಲಿ ಪ್ರಸಾರಮಾಡಿದ ವಿಚಾರ

ಶಿಕ್ಷಣವು ಸಮಾಜದ ಧ್ಯೇಯಸಾಧನೆಗಾಗಿ ಕೈಕೊಂಡಿರುವ ಪರಿವರ್ತನೆಗಳನ್ನು ಸಾಧಿಸುವ ಸಾಧನವಾಗಿರಬೇಕಾಗಿರುವುದರಿಂದ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅದಕ್ಕಾಗಿ ೧೭೦ ಕೋಟಿ ರೂಪಾಯಿಗಳ ವೆಚ್ಚವನ್ನು ಅಂದಾಜುಮಾಡಲಾಗಿದೆಯೆಂದೂ ಮೂಲ ಶಿಕ್ಷಣಕ್ಕಾಗಿ " ರಾಷ್ಟ್ರೀಯ ಪುಸ್ತಕಪ್ರಸ್ಥ " ಎಂಬ ಕಾರಬೇಕೆ ಕೇಂದ್ರವನ್ನು ಸ್ಥಾಪಿಸಲಾಗುವದೆಂದೂ ಜನತಾ ಕಾಲೇಜುಗಳಿಗೆ ಅಗತ್ಯವಾದ ಶಿಬ್ಬಂದಿಯನ್ನು ನೆರಗಸಿ ಮಕ್ಕಳ- ಮತ್ತು ವಯಸ್ಕರಿಗೆ ಅಗತ್ಯವಾದ ಶಿಕ್ಷಣಸಾಹಿತ್ಯವನ್ನು ಸಿದ್ಧಗೊಳಿಸುವದು ಈ ಕೇಂದ್ರಗಳ ಕೆಲಸವಾಗಿರುವದೆಂದೂ ಹೇಳಿದರು

ಮಾಧ್ಯಮಿಕ ಶಿಕ್ಷಣ, ವಿಶ್ವವಿದ್ಯಾಲಯ, ತಾಂತ್ರಿಕ ಶಿಕ್ಷಣ, ಶಾರೀರಕ ಶಿಕ್ಷಣ, ಅಂಗವಿಹೀನರಿಗೆ ಶಿಕ್ಷಣ ಇತ್ಯಾದಿ ಕಾರ್ಯಗಳು ರಾಷ್ಟ್ರೀಯ ಶಿಕ್ಷಣ ಪದ್ಧತಿಯಲ್ಲಿ ಸೇರಿವೆ ಈ ಪದ್ಧತಿಯು ಯಾವುದೇ ಒಂದು ವಿಶಿಷ್ಟ ಕಾಲದ (ಯುಗದ) ಶಿಕ್ಷಣ ಪದ್ಧತಿಯನ್ನು ಪ್ರತಿಫಲಿಸು ವಂತಿರಬೇಕು ಭಾರತದ ಉಜ್ಜ್ವಲ ಧ್ಯೇಯದಂತೆ ಸಮಾಜ ಪುನರ್ರಚನೆಯ ಕಾರ್ಯವನ್ನು ಅರಂಭಿಸಬೇಕಾಗಿರುವ ದರಿಂದ ವರ್ಗರಹಿತ ಸಮಾಜವು ಶಾಲಾತರಗತಿಗಳಲ್ಲಿಯೇ ರೂಪುಗೊಳ್ಳಬೇಕು ಭಾರತವು ನಿರ್ದಿಷ್ಟ ಗೊಳಿಸಿದ ಅವಧಿಯಪ್ರಕಾರ ೧೯೬೦ ನೇಳೆಗೆ ಎಲ್ಲಾ ಭಾರತೀಯ ಬಾಲಕರೂ ೧೪ ವರ್ಷದವರೆಗೆ ಕಡ್ಡಾಯ ವಾಗಿ ಉಚಿತ ಶಿಕ್ಷಣ ಪೊರೆಯುವಂತಾಗಬೇಕು. ಪ್ರಸ್ತುತದಲ್ಲಿ ಶಿಕ್ಷಣ ಸೌಕರ್ಯಗಳು ಸಂತಾರದ ಅರ್ಧಕ್ಕ ಮಟ್ಟಿನವನ್ನು ಅಪೂರಯಿಸಿವೆಯಾದ್ದರಿಂದ ಅನೇಕ ಬಿಡ್ಡಿ ಕಾಲಿ ಬಾಲಕರು ಮತ್ತು ಯುವಕರು ಶಿಕ್ಷಣವನ್ನು ಮಧ್ಯದಲ್ಲಿಯೇ ನಿಲ್ಲಿಸುವರು ಈ ಕೊಂದರೆಗಳನ್ನು ನಿರ್ಮೂಲಗೊಳಿಸಲು ವ್ಯಾಪಂಗವೇಷನ, ಉಚಿತ ಪಾಠ ಶಾಲೆ (ಭೋಜನ-ಪುಸ್ತಕ-ವಸ್ತ್ರಗಳನ್ನು ಉಚಿತವಾಗಿ ಪಡಗಿಸುವ) ಅರ್ಯಕ್ರಮಗಳನ್ನು ಕೈಕೊಳ್ಳಬೇಕು. ಈ ಪಾಠಶಾಲೆಗಳು ಸಂತಾರದ ಹಣಾಸಿಕ ಮತ್ತು ಇತರ ಅಭಾವಗಳನ್ನು ನೀಗಿಸುವ ಸಮಾಜ ಕೇಂದ್ರ ಗಳಾಗಿರಬೇಕು. ಈ ತೆಆಡಿಯ ಮೇಲೆ ಕಾರ್ಯಪ್ರವೃತ್ತ ಕೈಕೊಳ್ಳಲು ಈಗ ಸಾಧ್ಯವಿಲ್ಲದಿದ್ದರೂ ಈ ಹಾದಿಯಲ್ಲಿ ಪ್ರಯತ್ನವನ್ನು ಆರಂಭಿಸುವದು ಸಾಧ್ಯವಾಗಿರುತ್ತದೆ. ಈಗಿನ ತಾಂತ್ರಿಕ ಶಿಕ್ಷಣಕ್ರಮದಂತೆ ವಿಜ್ಞಾನಿಕಶಿಕ್ಷಣ ಗಳು ವೈಜ್ಞಾನಿಕಶಿಕ್ಷಣೋಪಗಾಲೆಗಳು ಉದ್ಯೋಜ್ಞಾನಿಕ ಸಂಶೋಧನೆಸಂಸ್ಥೆಗಳನ್ನು ಹೆಚ್ಚಿಸುವದು ಅಗತ್ಯ ಶಿಕ್ಷಣ ಪೊಲಬ್ಧದ ಜೊತೆಗೆ ಶಿಕ್ಷಣದ ಗುಣಾಂವನ್ನೂ ಉತ್ತಮಪಡಿಸಬೇಕು ಇದಕ್ಕಾಗಿ ಉಪಾಧ್ಯಾಯಸಗರದ ಅಭಿವೃದ್ಧಿಯು ಮುಖ್ಯವಾಗಿರುವದು ಅದರಂದ ಶಿಕ್ಷಣ ಖಾಯೆಯವರು ೧೦೮೦ ಕೋಟಿ ರೂ ಗಳ ವೆಚ್ಚವನ್ನು ನಿರೀಕ್ಷಿಸಿದ್ದರು. ಅವುಗಳಲ್ಲಿ ೫೦೦ ಕೋಟಿ ಪ್ರಾಥಮಿಕ ಶಿಕ್ಷಣಕ್ಕೂ ೮೫ ಕೋಟಿ ಸಮಾಜಶಿಕ್ಷಣಕ್ಕೂ, ೩೦೦ ಕೋಟಿ ಮಾಧ್ಯಮಿಕ ಶಿಕ್ಷಣಕ್ಕೂ, ೮೦ ಕೋಟಿ ತಾಂತ್ರಿಕ ಶಿಕ್ಷಣಕ್ಕೂ ೭೦ ಕೋಟಿ ವಿಶ್ವವಿದ್ಯಾಲಯಗಳು ಶಿಕ್ಷಣಕ್ಕೂ ತೆಗೆದಿದ್ದಬ್ಬದೆ ವ್ಯಾಪಂಗವೇಷನ, ಶಾರೀರಿಕ ಶಿಕ್ಷಣ, ಅಂಗಹೀನರ ಶಿಕ್ಷಣ ಮತ್ತು ಹಿಂದುಳಿದ ಪ್ರಜಾರಾಶ್ಯಾಗಿ ೪೦ ಕೋಟಿ ರೂ ಗಳನ್ನು ತೆಗೆದಿಡಲಾಗಿತ್ತು. ಆರ್ಥಿಕ ಪರಿಸ್ಥಿತಿಯ ಕಾರಣವಾಗಿ ಈ ಯೋಜನೆಯನ್ನು ಕಡಿಮೆ ಮಾಡಿಕೊಳ್ಳಬೇಕಾಯಿತು ಈ ಪ್ರಕಾರ ೬-೧೧ ವರ್ಷ ವಯಸ್ಸಿನ ಬಾಲಕರಲ್ಲಿ ೧೦೦ ಕ್ಕೆ ೬೦ ರಷ್ಟು ಮಂದಿ ದ್ವಿತೀಯ ಯೋಜನೆಯ ಕೊನೆಯ ವೇಳೆಗೆ ಶಿಕ್ಷಣ ವ್ಯಾಪ್ತಿಗೆ ಒಳಗಾಗುವರು ೧೧-೧೪ ವಯಸ್ಸಿನ ಬಾಲಕರ ಪ್ರಮಾಣವನ್ನು ೪೦ ಕ್ಕೆ ೧೫ ರಿಂದ ೨೫ ಕ್ಕೆ ಏರಿಸಲಾಗುವದು. ನೂರಕ್ಕೆ ೫೦ ರಷ್ಟು ಹೊಸಶಾಲೆಗಳು ಮೂಲಶಿಕ್ಷಣ ಮಾದರಿಯಲ್ಲಿರುವವು. ಉಳಿದವು ಸಾಮಾನ್ಯಶಾಲೆಗಳಾಗಿದ್ದು ಕಾಲಕ್ರಮೇಣ ಅವೂ ಸಹ ಮೂಲಶಿಕ್ಷಣಶಾಲೆಗಳಾಗಿ ಪರಿವರ್ತಿಸುವವು ಈಗ ಅರ್ಧಾವಶ್ಯ ಶಾಲೆಗಳಲ್ಲಿ ಕೈಕಸುಬುಶಿಕ್ಷಣವನ್ನು ಅರಂಭಿಸಲಾಗುವದು

೧೮೦೦ ವ್ಯೌಢಶಾಲೆಗಳನ್ನು ವಿವಿಧೋದ್ದೇಶ ಶಾಲೆಗಳನ್ನಾಗಿ ೧೫೦೦ ಮಾಧ್ಯಮಿಕಶಾಲೆಗಳನ್ನು ಶ್ರೌಢ-ಮಾಧ್ಯಮಿಕಶಾಲೆಗಳನ್ನಾಗಿ ಪರಿವರ್ತಿಸಲಾಗುವದು. ೬೦೦೦ ಶಾಲೆಗಳಲ್ಲಿ ಪುಸ್ತಕಭಂಡಾರವನ್ನು ಹೆಚ್ಚಿಸ ಲಾಗುವದು ೫೫೦೦ ಶಾಲೆಗಳಿಗೆ ಪುಸ್ತಕಭಂಡಾರ ಗಳನ್ನು ಸ್ಥಾಪಿಸಲಾಗುವದು. ೧೪-೧೭ ವಯಸ್ಸಿನ ಬಾಲಕರ ವಿದ್ಯಾಭ್ಯಾಸಪ್ರಮಾಣವನ್ನು ನೂರಕ್ಕೆ ೧೦ ರಿಂದ ೧೫ಕ್ಕೆ ಏರಿಸಲಾಗುವದು

ಮಾಧ್ಯಮಿಕಶಾಲೆಯ ಉಪಾಧ್ಯಾಯರ ವೇತನ ಪ್ರಮಾಣವನ್ನು ಉತ್ತಮಪಡಿಸಲಾಗುವದು. ೩೦೦೦ ಹಿಂದೀ ಉಪಾಧ್ಯಾಯರನ್ನು ಹಿಂದೀ ಮಾತನಾಡದ ಕ್ಷೇತ್ರಗಳಲ್ಲಿರುವ ಶಾಲೆಗಳಲ್ಲಿ ನೇಮಿಸಲಾಗುವದು. ದೇಶಾದ್ಯಂತ ಪದವಿಗಳಿಗೆ ಮೂರುವರ್ಷಗಳ ವ್ಯಾಸಂಗ ವನ್ನು ನಿರ್ಧರಿಸಲಾಗುವದು. ೧೯೫೬ ರ ಜುಲೈ ತಿಂಗಳಂದ ಈ ಪರಿವರ್ತನೆ ಆರಂಭವಾಗುವಂತೆ. ಸಂಸ್ಕೃತ ಮತ್ತು ಭಾರತೀಯ ವಿಷಯಗಳ ವ್ಯಾಸಂಗಕ್ಕೆ ಯೋಜ ನೆಗಳನ್ನು ತಯಾರಿಸಲಾಗುವದು. ವಯಸ್ಕಾದ ನಿರಕ್ಷರ ರಕ್ಕ ಮಹಿಳೆಯರಲ್ಲಿ ಅಕ್ಷರಪ್ರಜಾರ ಪ್ರಚಿಸಲು ವಿಶೇಷ ಪ್ರಯತ್ನಗಳನ್ನು ಕೈಕೊಳ್ಳಲಾಗುವದು.

ಇದಲ್ಲದೆ ಹಿಂದೀಪ್ರಚಾರಕ್ಕಾಗಿ ಹಿಂದೀವಿಶ್ವಕೋಶ ಹಿಂದೀಮಾತ್ಕಭಾಷೆಯಲ್ಲದ ಕ್ಷೇತ್ರದಲ್ಲಿ ಪ್ರಾಥಮಿಕ ತರಗತಿಯ ಪುಸ್ತಕಗಳು ಪ್ರಮಾಣೀಕೃತ ಪಠ್ಯಪುಸ್ತಕ ಗಳು ಮತ್ತು ಜನಪ್ರಿಯಪುಸ್ತಕಗಳನ್ನು ಸಿದ್ಧಗೊಳಿಸುವ ಕಾರ್ಯಕ್ರಮಗಳಿವೆ. ಈ ಪ್ರಕಾರದ ಶಿಕ್ಷಣಪದ್ಧತಿಯ ಪುನರ್ರಚನೆ ಅವಶ್ಯವಾದುದು. ನಮ್ಮಲ್ಲಿರುವ ಸಾಧನ-ಸಂಪತ್ತು ಸಾಲದು. ಆದ್ದರಿಂದ ಮಳ್ಳು, ತಂದೆತಾಯಿ ಗಳು, ಉಪಾಧ್ಯಾಯರು ಕೇಂದ್ರ ಮತ್ತು ಪ್ರಾಂತಸರ್ಕಾ ರಗಳು ಸಮನ್ವೆಯರೀತಿಯಿಂದ ಸಹಕರಿಸಿದರೆ ಇದು ಸಾಧ್ಯವಾಗುವದು

ಶ್ರೀ ಕೊಟ್ಟೂರೇಶ್ವರಿನ ಶಾತಿಶಕೋತ್ಸವ

ಅಗಾಧಮಹಿಮಾತಿಶಯದ ಶ್ರೀ ಕೊಟ್ಟೂರೇಶ್ವರಸ್ವಾ ಮಿಯ ಉತ್ಸವವು ಮಾರ್ಗಶಿರ ಬಹು ೫ ಸೋಮವಾರ ತಾ|| ೨೦-೧೨-೫೫ ರಿಪ ಪದ್ಮಿ ಪೌರ್ಣಿಮೆ ಬಹು ವಿಜೃಂಭಣೆಯಿಂದ ಜರಿಯುತ್ತದೆ. ಸಕಲಲಕ್ಷ್ಮಿ ಭಕ್ತರು ಒಂದು ದರ್ಶನವನ್ನು ಪಡೆದು ಪುಣ್ಯಕಾರಣರಾಗೆಂದು ಅವೇ ಪ್ರೀತಿಯ,

ಪಿ. ಯಂ. ಮರುಳಾರಾಧ್ಯರು.

ವರ್ತಮಾನ ಸಂಗ್ರಹ

ನೀಲಗಿರಿ ಜಿಲ್ಲೆ, ಕನ್ನಡ ಪ್ರಾಂತದಲ್ಲಿ ಸೇರಬೇಕು

ಮೈಸೂರು ರಾಜಪ್ರಮುಖರಲ್ಲಿ ನಿಯೋಗದ ಸ್ವಾರ್ಥನೆ

ಶಾಸಪತ್ರಿಕಾ ಸದಸ್ಯರಾದ ಶ್ರೀ ಹರಿಸೋತ್ತಮ ನಾಯಕ್ ಇವರುಗಳ ನೇತೃತ್ವದಲ್ಲಿ ಇಪ್ಪತ್ತೈದಾಳ್ವು ಸದಸ್ಯರ ನಿಯೋಗವೊಂದು ೨೦ನೆಯಲ್ಲಿ ರಾಜಪ್ರಮುಖರನ್ನು ಭೇಟಿಮಾಡಿ, ನೀಲಗಿರಿ ಜಿಲ್ಲೆಯು ರಚನೆಯಾಗಲಿರುವ ಕರ್ನಾಟಕ ಪ್ರಾಂತದಲ್ಲಿ ಸೇರಬೇಕೆಂದು ಮನವಿಪತ್ರವೊಂದನ್ನು ಅರ್ಪಿಸಿ ಪ್ರಾರ್ಥಿಸಿತು.

ನೀಲಗಿರಿ ಜಿಲ್ಲೆಯು ಮೈಸೂರಿನ ಭಾಗವೆಂಬುದು ಕಳೆದ ನೇ ಶತಮಾನದಿಂದ ೧೪ ನೇ ಶತಮಾನದ ಇತಿಹಾಸದಿಂದ ಸ್ಪಷ್ಟವಾಗಿದೆಯೆಂದೂ, ೧೯೩೪ ರಲ್ಲಿ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಮೈಸೂರಿಗೆ ಭೇಟಿಸಿದ ಮನವಿ ಪತ್ರದಲ್ಲಿ ತಿಳಿಸಿದ್ದಾರೆಂದೂ, ೨೯೫೦ ನಿಯೋಗದವರು ಅರ್ಪಿಸಿದ ಮನವಿ ಪತ್ರದಲ್ಲಿ ತಿಳಿಸಲಾಗಿದೆ

ಇತಿಯಲ್ಲಿ ಮೈಸೂರಿನ ಸ್ನಾನಘಟ್ಟದ ನಿರ್ಮಾಣ

ಇತಿಯಲ್ಲಿರುವ ಮೈಸೂರು ಛತ್ರದ ಬಳಿ ಸಕ್ಕರೆ ಕಾರ್ಖಾನೆಯ ಕಟ್ಟಡದ ಸಂಸ್ಥಾಪಕರಾದ ಅಜ್ಜೆಗೌಡರ ಈ ಕಾರ್ಯಕ್ಕಾಗಿ ಪ್ರತ್ಯೇಕ ಇಂಜನಿಯರಿಂಗ್ ಸಬ್-ಡಿವಿಜನ್ನನ್ನು ರಚಿಸಲಾಗಿದೆ ಎಂದು ಇಲಾಖೆಯ ನಂ. ೧ ಸರ್ಕಲ್ ಸೂಪರಿಂಟೆಂಡಿಂಗ್ ಇಂಜಿನಿಯರ್ ಡಿವಿಜನಲ್ ಅಧಿಕಾರಿ ಶ್ರೀ ಬಿ ಆನಂದರಾಯ ಪ್ರಭು ಇತಿಯಲ್ಲಿನ ಈ ಸಬ್-ಡಿವಿಜನ್ನಿನ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ನೆಹ್ರೂಗೆ ರಷ್ಯಾ ವಿಮಾನ ಉಡುಗೊರೆ

ಸೋವಿಯಟ್ ಪ್ರಧಾನ ಬುಲ್ಗಾನಿನ್‌ರು ಭಾರತದ ಪ್ರಧಾನಿ ನೆಹ್ರೂಗೆ ವಿಮಾನವೊಂದನ್ನು ಉಡುಗೊರೆಯಾಗಿ ಕಳುಹಿಸಿದ್ದಾರೆಂದು ತಿಳಿದುಬಂದಿದೆ ಆ ವಿಮಾನ ಜಾಗೂ ಅದಕ್ಕೆ ಬೇಕಾದ ಸಲಕರಣೆಗಳು ದೆಹಲಿಗೆ ಬಂದಿವೆಯೆಂದೂ ತಿಳಿದುಬಂದಿದೆ.

ಕಮ್ಯೂನಿಸ್ಟ್ ರಾಷ್ಟ್ರಗಳೊಡನೆ ಪಶ್ಚಿಮದ ಬಾಂಧವ್ಯ

ಇತ್ಯರ್ಥವಾದಿ ಉದಯಿರುವ ಪೂರ್ವ-ಪಶ್ಚಿಮ ವಿವಾದಗಳ ಇತ್ಯರ್ಥಕ್ಕೆ 'ಜಿನೀವಾ ಮನೋಭಾವವು' ಪ್ರಾರಂಭಾಗುವುದರಲ್ಲಿ ವಿಫಲವಾದರೆ ಪರಿಸ್ಥಿತಿಯಲ್ಲಿ ಕಮ್ಯೂನಿಸ್ಟ್ ರಾಷ್ಟ್ರಗಳೊಡನೆ ಪಶ್ಚಿಮ ರಾಷ್ಟ್ರಗಳ ಬಾಂಧವ್ಯವನ್ನು ಅಂಗೋರಾ ಅಡೆನ್ ಮತ್ತು ಏಸೆನ್ ಹೋವರರು ಮುಂದಿನ ವರ್ಷದ ತಮ್ಮ ವಾಷಿಂಗ್ಟನ್ ನೂತುಸತಿಗಳಲ್ಲಿ ಪರಿಶೀಲಿಸುವರೆಂದು ರಾಜತಾಂತ್ರಿಕ ವಲಯಗಳು ತಿಳಿಸಿವೆ

ರಷ್ಯದಲ್ಲಿ ಹಿಂದೀ ಶಿಕ್ಷಣ ಯತ್ನ

ಕ್ರುಶ್ಚೇವರ ವಿವರಣೆ

ಪರಸ್ಪರ ಮನವಿಟ್ಟ ಮಾತಾಡಲು ಯಾರೇ ಆಗಲಿ ಪರಸ್ಪರ ರಾಷ್ಟ್ರಗಳ ಭಾಷೆಗಳನ್ನು ಉಭಯರೂ ಕಲಿತಿರಬೇಕು ಎಂಬುದಾಗಿ ಪಾರ್ಲಿಮೆಂಟಿನ ಹಿಂದಿ ಸಂಘದಲ್ಲಿ ಮಾತನಾಡಿದ ಕ್ರುಶ್ಚೇವ್‌ರು ತಿಳಿಸಿದರು. ಅವರವರ ಭಾಷೆಯಲ್ಲೇ ಸಂಭಾಷಣೆ ನಡೆಸಿದೆ ಹೋದರೆ, ಪರಸ್ಪರ ಅರ್ಥಮಾಡಿಕೊಳ್ಳುವುದು ಕಷ್ಟವಾಗುವುದೆಂದು ಜೋಸೆ ಕ್ರುಶ್ಚೇವರು, ತಾವು ತಮ್ಮ ದೇಶದ ಎಲ್ಲಾ ಶಾಲಾಸಂಸ್ಥೆಗಳಿಗೂ ಹಿಂದಿ ಕಲಿಸಲೆಪ್ಪಿಸುವುದಾಗಿ ತಿಳಿಸಿದರು.

ಸೂರ್ಯಗ್ರಹಣದ ಫಲ

೧೪-೧೨-೫೫ ರಲ್ಲಿ ಖಂಡಗ್ರಾಸ ಸೂರ್ಯಗ್ರಹಣವು ಸಂಭವಿಸಿತು. ಕಾರ್ತಿಕ ಮಾಸದಲ್ಲಿ ಈ ಗ್ರಹಣವಾದುದರಿಂದ ಕಾಶ್ಮೀರ, ಕಾಂಭೋಜ, ಮಗಧ, ದ್ರಾವಿಡ ಪ್ರದೇಶಗಳಿಗೆ ವಿಪತ್ತು ಪಡಾಧಿಗಳ ಬೆಲೆ ವಿರುವುದು, ಯಂತ್ರೋಪಕರಣಗಳಿಗೆ ಕ್ಷೇತ್ರ, ಹೆಂಗು, ಅಡಿಕೆ, ವಸ್ತ್ರಗಳ ಬೆಲೆ ವಿರುವುದು ಭಾರತದಲ್ಲಿ ಪ್ರದೇಶಗಳ ಮನುಷ್ಯರಲ್ಲಿ ಭೀತಿಯೂ, ಆತಂಕವೂ ಇದ್ದೇ ಇರುತ್ತವೆ ದ್ರಾವಿಡ ದೇಶಗಳ ಮುಖಂಡರು ಹೆಚ್ಚು ಸಂಯಮವಿಂದಿರಬೇಕು ಇಲ್ಲದಿದ್ದರೆ ಕ್ಷೇತ್ರಗಳೇ ಹೆಚ್ಚು ಪ್ರಜೆಗಳಿಗೆ ತೊಂದರೆ ಹೆಚ್ಚುವುದು. ಮಧ್ಯಭಾರತದಲ್ಲಿ ಅಲ್ಲಲ್ಲಿ ಬೆಂಕಿ ಅನಾಹುತಗಳೂ, ಪ್ರತಿಗಳಲ್ಲಿ ಅನಾರೋಗ್ಯವೂ ಹೆಚ್ಚುವುದು. ಅಶಾಸ್ಯ ಭಾರತ ದಲ್ಲಿ ಶ್ರೀಕೃಷ್ಣಜಯಂತಿಗಳು ಕಟ್ಟಿದ್ದಲ್ಲ. ಪೂರ್ವ ಪಾಕಿಸ್ಥಾನ ದಲ್ಲಿ ಈಚಾಧೆಗಳೂ ಜಗಳ ಮನುಷ್ಯನಲ್ಲಿ ಅತಂಕವೂ, ಪಾಕಿಸ್ಥಾನದ ರಾಜಕೀಯದಲ್ಲಿ ಅನಿಶ್ಚಿತತೆ ಪರಿಸ್ಥಿತಿಯೂ ೧೯೫೬ ನೇ ಫೆಬ್ರವರಿಯಲ್ಲಿ ವೃಶ್ಚಿಕದಲ್ಲಿ ಶನಿ, ಶುಜ ಸಂಬಂಧವಾಗುವ ಕಾಲದಲ್ಲಿ ಪ್ರಮುಖ ಬದಲಾವಣೆಗಳೂ ಕಂಡುಬರುತ್ತವೆ

ಈಜಿಪ್ಟಿನ ಈಶಾನ್ಯದಲ್ಲಿ ಉಲ್ಲಲ್ಲಿ ಯುದ್ಧಭೀತಿಯೂ, ಜನನಗಳಲ್ಲಿ ಆತಂಕವೂ ಕಂಡುಬರುತ್ತವೆ. ಇರಾನ್, ಪಾಕಿಯಾದೇಶಗಳಲ್ಲಿ ಶಾಂತಿಯು ಸ್ಪಷ್ಟ ಪ್ರಾಯವಾಗುವುದು ಹಿಂದೂಚೀನ, ಥಾರ್ಮೋಸಗಳಲ್ಲಿ ರಾಜಕೀಯ ಅಭದ್ರತೆ, ಆಶಾಂತಿಗಳು ಮುಂದುವರಿಯುವುವು ೧೯೫೬ ರಲ್ಲಿ ರಷ್ಯದಲ್ಲಿಯೂ ಮುಖಂಡರುಗಳು ಬಹಳ ಎಚ್ಚರಿಕೆಯಿಂದಿರಬೇಕು ಒಟ್ಟಿನಲ್ಲಿ ಈ ವರ್ಷದ ಗ್ರಹಣ ಗಳಿಂದ ಈಜಿಪ್ಟಿನ ಈಶಾನ್ಯಭಾಗ, ಇರಾನ್, ಪಾಕಿಸ್ತಾನ, ಈಶಾನ್ಯ ಭಾರತ, ಮಧ್ಯಭಾರತ, ದ್ರಾವಿಡ ದೇಶಗಳು ಹಿಂದೂಚೀನ, ಥಾರ್ಮೋಸ, ಸಿಲೋನ್ ದೇಶಗಳವರು ಹೆಚ್ಚು ಎಚ್ಚರಿಕೆಯಿಂದಿರಬೇಕು ಈ ದೇಶಗಳ ಮುಖಂಡರು ಪ್ರಜೆಗಳ ನೆಮ್ಮದಿಗಾಗಿ ದುಡಿಯಬೇಕು.

೧೯೫೬ ರ ಪೂರ್ವ ಪ್ರಪಂಚಕ್ಕೆ ಒಂದು ಪರೀಕ್ಷಣ ಕಾಲ. ಈ ಗ್ರಹಣವೇ ಅಲ್ಲದೆ ೧೯೫೬ ರಲ್ಲಿ ಕುಜ, ಶನಿ ಮತ್ತು ಶನಿ, ರಾಹುಗಳ ಸಂಬಂಧವೂ ವೃಶ್ಚಿಕದಲ್ಲಿ (ಕೇತುವಾಶ್ರಿ) ಆಗುವುದು ಇವು ಶುಭಯೋಗಗಳಲ್ಲ ಈ ಯೋಗಗಳು ಮುಂದಿನ ವರ್ಷದ ಆಗುಹೋಗು ಗಳಿಗೆ ಪೂರ್ವ ಸೂಚನೆಯಂತಿವೆ ಸರ್ವರೂ ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ದೈವಭಕ್ತರಾಗಿ ಪರಸ್ಪರ ಏಳಿಗೆಗಾಗಿ ಸಹೋದರಭಾವದಿಂದ ವರ್ತಿಸಬೇಕಾಗಿರುತ್ತೆ

ಶ್ರೀಭಾಷಾಭಾಗಗಳ ಪುನರ್ವಿಭಜನೆ

ಕೇಂದ್ರಕ್ಕೆ ಹೈದರಾಬಾದ್ ಸಂಪುಟದ ಮನವಿ

ಹೈದರಾಬಾದ್ ಸಂಸ್ಥಾನದ ಶ್ರೀಭಾಷಾ ಪ್ರದೇಶಗಳನ್ನು ಆಯಾಯ ಭಾಷೆ ಆಧಾರದ ಮೇಲೆ ವಿಭಜಿಸಿ ಗಡಿ ನಿರ್ಣಯಿಸಬೇಕೆಂದು ಹೈದರಾಬಾದ್ ಸರಕಾರವು ತೀರ್ಮಾನಿಸಿ ಭಾರತಸರಕಾರವನ್ನು ಪ್ರಾರ್ಥಿಸಿಕೊಂಡಿದೆ ಪ್ರಾಂತಸರಕಾರ ಮಾಡಿರುವ ಈ ಶಿಫಾರಸುಗಳು ಕೇಂದ್ರ ಸರಕಾರದಿಂದ ಅಂಗೀಕರಿಸಲ್ಪಡುವುದಾಗಿದೆ ದ್ವಿಭಾಷಿ ಪ್ರಾಂತವಾದ ಬೀದರ್ ಜಿಲ್ಲೆಯು ಸಹಾ ವಿಭಜಿಸ ಲ್ಪಟ್ಟಿಯು, ಆ ಜಿಲ್ಲೆಯು ಕನ್ನಡಭಾಗಗಳು ಕರ್ನಾಟಕಕ್ಕೆ ಸೇರುತ್ತವೆ

ವಿಭಜನೆ ತ್ವಾಪಾಕುವಾರು ಆಧಾರದ ಮೇಲೆ ಆಗ ಬೇಕೆ ಹೇಗೆ ಎಂಬುದು ಪರಿಶೀಲನೆಯಲ್ಲಿದೆ.

ಗ್ರಹಣಕಾಲದಲ್ಲಿ ೩ ಲಕ್ಷ ಜನರಿಂದ ಪವಿತ್ರ ಸ್ನಾನ

ತಿಕಂಬರ್ ೩೫ ೧೪ ರಲ್ಲಿ ಸೂರ್ಯಗ್ರಹಣ ಸಂಭವಿಸಿದ ನಿಮಿತ್ತವಾಗಿ ಕುರುಕ್ಷೇತ್ರ ಮತ್ತು ಸಾಪಿಕೇಶ ಸರೋವರಗಳಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಯಾತ್ರಿಕರು ಸ್ನಾನಮಾಡಿದರು. ಗ್ರಹಣವು ಆಚರಿಸಿಕೊಂಡು ದಷ್ಟು ಕುರುಕ್ಷೇತ್ರ ಸರೋವರದ ದಡದಲ್ಲಿರುವ ಗೀತಾ ಮಂದಿರದಿಂದ ಕಂಖನಾಥದ ಮೂಲಕ ಸಾರಲಾಯಿತು. ಕುರುಕ್ಷೇತ್ರದ ಸರೋವರದಲ್ಲಿ ಭಗವಾನ್ ಶ್ರೀಕೃಷ್ಣನು 'ಉಕ್ಕೆರೇಗೆ' ಯಷ್ಟು ಸಾಂದನೆಂದು ಶ್ರದ್ಧೆ ಇದೆ ಗ್ರಹಣದ ಕಾಲದಲ್ಲಿ ಅನೇಕ ಯಾತ್ರಿಕರು ಯಜ್ಞಗಳನ್ನು ಮಾಡಿದರು. ಇಲ್ಲದೇ ಧಾರ್ಮಿಕ ಭಾಷಣಗಳನ್ನು ಕೇಳಿ ಕ್ರಿದ್ದರು.

ಅಲಹಾಬಾದಿನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರು ತ್ರಿವೇಣಿ ಸಂಗಮದಲ್ಲಿ ಸ್ನಾನವನ್ನು ಮಾಡಿದರು.

ದೆಹಲಿಯಲ್ಲಿ ಸುಮಾರು ೫೦,೦೦೦ ಜನರು ಯಮುನಾ ನದಿಯಲ್ಲಿ ಸ್ನಾನಮಾಡಿದರು.

ಕಳ್ಳಕ್ಕರಲ್ಲಿ ಸಹಸ್ರಾರು ಅಸ್ಸಿಕ ಜನರು ಗ್ರಹಣ ಕಾಲದಲ್ಲಿಯೂ, ಪಂಕರವೂ ಹುಗ್ಲಿ ನದಿಯಲ್ಲಿ ಸ್ನಾನ ಮಾಡಿದರು

ಸಂಸ್ಥಾನದ ಮಠಗಳ ಆಡಳಿತದ ಹತೋಟಿಗಾಗಿ ಹೊಸ ಶಾಸನ

ಮೈಸೂರು ಸಂಸ್ಥಾನದಲ್ಲಿರುವ ಮುಜರಾಯಿ ಸಂಸ್ಥೆಗಳ ಆಡಳಿತವನ್ನು ಪುನರ್ವ್ಯವಸ್ಥೆಗೊಳಿಸಿ ಹತೋಟಿಗೊಳಪಡಿಸಲು ಸೂತನ ಶಾಸನವೊಂದನ್ನು ಸರ್ಕಾರದವರು ಶಾಸನ ಸಭಾಧಿವೇಶನದಲ್ಲಿ ಮಂಡಿಸುವುದಕ್ಕಾಗಿ ಸಿದ್ಧಗೊಳಿಸುತ್ತಿರುವರೆಂದು ಗೊತ್ತಾಗಿದೆ. ಮಠಗಳು ಮತ್ತು ಇತರ ಧಾರ್ಮಿಕ ಸಂಸ್ಥೆಗಳು ಹೆಚ್ಚು ಸ್ವಾತಂತ್ರ್ಯ ಹೊಂದಲೂ, ಅವುಗಳ ಆಸ್ತಿಪಾಸ್ತಿಗಳು ದುರುಪಯೋಗವಾಗದೆ ಇರುವಂತೆ ಹತೋಟಿ ಇಟ್ಟು ಕೊಳ್ಳಲೂ ಶಾಸನ ಮಾಡಲಾಗುವುದೆಂದೂ, ೧೯೩೭ ರ ಶಾಸನವು ರಾಜ್ಯಾಂಗದ ೨೬ ಮತ್ತು ೨೭ ನೇ ವಿಧಿಗಳಿಗೆ ವ್ಯತಿರೇಕವಾಗಿರುವುದರಿಂದ ಅದನ್ನು ಬದಲಾಯಿಸ ಲಾಗುವುದೆಂದೂ ಗೊತ್ತಾಗಿದೆ.

ಆಯುರ್ವೇದ ಮತ್ತು ಯುನಾನಿಗಳ ಅಭಿವೃದ್ಧಿಗೆ ಸರ್ಕಾರದ ನೆರವು

ಗೃಹಮಂತ್ರಿ ಶ್ರೀ ಸಿದ್ಧವೀರಪ್ಪನವರು ಜೋಗಳೂರಿನ ಜಯಚಾಮರಾಜೇಂದ್ರ ಆಯುರ್ವೇದ ಮತ್ತು ಯುನಾನಿ ವೈದ್ಯಶಾಲಾ ಸಂಸ್ಥೆಯ ಆರೂಢೋತ್ಸವವನ್ನು ನೆರವೇರಿಸುತ್ತಾ ಭಾಷಣಮಾಡಿ, ಆಯುರ್ವೇದ ಮತ್ತು ಯುನಾನಿ ಪದ್ಧತಿಗಳ ಅಭಿವೃದ್ಧಿಗಾಗಿ ಸರ್ಕಾರದವರು ಸಾಧ್ಯವಾದ ಸಹಾಯವೆಲ್ಲವನ್ನೂ ಮಾಡುವುದಾಗಿ ತಿಳಿಸಿರುತ್ತಾರೆ ಆದಕ್ಕಾಗಿಯೇ ೧೫॥ ಲಕ್ಷ ರೂ. ಗಳನ್ನು ಸರ್ಕಾರದವರು ತೆಗೆದಿಟ್ಟಿರುವರೆಂದು ಅವರು ಹೇಳಿದರು

ಸ್ವೀಕಾರ

ರಾಯಚೂರ ಡಾ॥ ಕೊಪ್ಪಳ ತಾಲೂಕ ಭಾಗ್ಯನಗರ ಹಿರೇಮಠದ ವೇ॥ ಶಿವಯ್ಯನವರು ಕೈ॥ ಪಂ॥ ಕಾಶೀ ನಾಥಶಾಸ್ತ್ರಿಗಳವರ ಗದ್ದುಗೆಯಲ್ಲಿ ಕಾರ್ತಿಕ ದೀಪೋತ್ಸವ ಕ್ಕಾಗಿ 5 ರೂ ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಧಾರವಾಡ ಡಾ॥ ಗರಗ ಗ್ರಾಮದಲ್ಲಿರುವ ಶ್ರೀ ವೀರಭದ್ರಪ್ಪ ವೀರಭದ್ರಪ್ಪಾ ಬಳೆಗಾರ ಇವರು ಈಚೆಲ ಅಶ್ವಿಯುಜ ಬಹು ೩೦ ದೀಪಾವಳಿ ಅಮಾವಾಸ್ಯೆಯ ದಿವಸ ಪಶ್ಚಿಮ ಯಂತೆ ತಮ್ಮ ಗುರುಗಳಾದ ಶ್ರೀ ಜೆವಯ್ಯಸ್ವಾಮಿ ಗುಡ್ಡದ ಹಿರೇಮಠ ಇವರ ನೇತೃತ್ವದಲ್ಲಿ ಧವಲಕ್ಷೇತ್ರ ಪೂಜೆಯಾಗ್ಗೂ ಕಾರ್ತಿಕ ಶು॥ ೧ ಮಂಗಳವಾರ ದಿವಸ ಸರಸ್ವತೀ ಪೂಜೆಯನ್ನೂ ವೈಭವದಿಂದ ನೆರವೇರಿಸಿ ಹೊಸ ವರ್ಷದ ಲೆಕ್ಕವನ್ನು ಪ್ರಾರಂಭಿಸಿದ ಸಮಯದಲ್ಲಿ ಪ್ರಭಾವೇಸಚಿಗಾಗಿ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೈಗಯತೆಂದು ಪ್ರಾರ್ಥಿಸುತ್ತೇವೆ.

ಸಿದ್ಧಾಂತಶಿಖಾಮಣಿ
(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆದಾರಭೂತವಾಗಿ ಕೈವಲ್ಯ ಕಲ್ಪತರುವಿನೆಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಹಿಂದ ಲ್ಲಿದ್ದ ಶ್ರೀ ಶಿವಯೋಗಿಶಿವಾಚಾರ್ಯರೆಂಬ ಆಚಾರ್ಯ ರಿಂದ ರಚಿಸಲ್ಪಟ್ಟದ್ದು. ಶೇವಣನಗರಭೂಪತಿಯಲ್ಲಿದ್ದಿತು ಅದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಗೂಢಾರ್ಥಗರ್ಭಿತವಾದ ಆ ಶ್ಲೋಕ ಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಕೈ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ ಮೂರುನೂರು ಪುಟಗಳ ವೆ ಲ್ಪಟ್ಟಿ ರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವವಾದ ಮನೋಹರ ಛಾಯಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದಯ ವು ವರ್ಣನಾತೀತವಾಗಿದೆ ಸದರಿ ಗ್ರಂಥದ ಎರಡನೇ ಮುದ್ರಣವು ಸಂಡಿತರ ಸಹೋದರರಾದ ನೇ॥ ಬ್ಳಿ ಮಹಾದೇವಯ್ಯನವರಿಂದ ವಿದ್ಯಾಪ್ರಕಾಶಕವಾಗಿ ಈ ತಮೂಲ್ಯ ಗ್ರಂಥವನ್ನು ಸರ್ವರೂ ತರಿಸಿ ಓದಿ ಧನ್ಯರಾಗಬೇಕು ಬೆಲೆ ರೂ 2 8 0

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು

ಮನೋಹರವಾದ ಫೋಟೋಗಳು.

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ ೦—೪—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೯೪ ೦—೩—೦
" ಚಿಕ್ಕ ಸೈಜು ಬೆಲೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋ ಟೋ ೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬
ಶ್ರೀರೇಣುಕಾಚಾರ್ಯರು ವಿಭೂತಿಜನನ ಬ್ಯಾಧ್ಯಾಸನೆಯಂತೆ ೪ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬
ಶ್ರೀ ೧೦೮ ಶ್ರೀ ಜಗದ್ಗುರು ವೀರಭದ್ರಶಿವಾತ್ಯ ರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) ೦—೪—೦
ಶ್ರೀ ೧೦೮ ಶ್ರೀಜಗದ್ಗುರುಗಳಿಗೆ ಶ್ರೀರಂಭಾ ಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ ೦—೧—೬
ಸದ್ಯಃ ಪೀಠಾರೋಹಣಮಾಡಿರುವ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ ೦—೪—೦
ಶ್ರೀಮಾಮುಜ್ಜಯಾನ ಸಿಂಹಾಸನ ಧೀಶ್ವರ ಶ್ರೀ ಜಗನ್ನ ರು ಪ್ರತಿಲಿಂಗಶಿವಾಚಾರ್ಯರ ಫೋಟೋ ೦—೧—೬
೨ ಮಾದ್ರಂಕಾಶ್ವರೀ ಕೀರ್ತಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೬
ಶ್ರೀಮಮುಜ್ಜಯಾನ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಪಕಾಲೋಪನಿಷತ್ತು ಓದುತ್ತಿರುವ ಫೋಟೋ ೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಬೆಲೆ ೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಬೆಲೆ ೦—೪—೦
೨ ಕರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ನ್ಯಾಯಾಚಾರ್ಯರವರು ವಿದ್ವತ್ಸಭೆಯನ್ನುತ್ತಿರುವ ಫೋಟೋ ೦—೧—೬
ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ೦—೨—೦

ಮ್ಯಾನೇಜರ್— ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಸೋತ್ರಸೂತ್ರಪಠ (೬ನೆಯ ಆವೃತ್ತಿ) — ೧ ಆಣೆ
ಸತ್ಯಾಸತ್ಯಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) — ೧ ಆಣೆ
ಪಂಚವಿಂಶತಿ ಪ್ರಶ್ನ ಪ್ರಶ್ನಾ (೫ನೆಯ ಆವೃತ್ತಿ) — ೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೇರ್ತನ — ೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ) — ೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) — ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ — ೨ ಆಣೆ
ಶಿವಶಕ್ತಿವಿಲಾಪ — ೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ — ೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ) — ೩ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ) — ೩ ಆಣೆ
ಜಿನವಾದಿನಿಜಿತತ್ವದರ್ಪಣ (೫ನೆಯ ಆವೃತ್ತಿ) — ೩ ಆಣೆ
ಪಂಚಾಚಾರ್ಯಪ್ರಕಾಶ — ೩ ಆಣೆ
ಪಂಚಾಚಾರ ಪ್ರಕಾಶಿಕಾ — ೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ) — ೩ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ — ೪ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) — ೪ ಆಣೆ
ಲಿಂಗಧಾರಣವಿಧಿ — ೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) — ೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ — ೪ ಆಣೆ
ವೀರಶೈವ ಅಂತ್ಯೇಷ್ಟಿ ಶ್ರಾದ್ಧವಿಧಿ — ೪ ಆಣೆ
ವೈದಿಕವಾಙ್ಮಯರಹಸ್ಯ — ೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಮಾವಳಿ (೩ನೆಯ ಆವೃತ್ತಿ) — ೪ ಆಣೆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ — ೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ) — ೬ ಆಣೆ
ಸತ್ಯಾಸತ್ಯಶಾಸ್ತ್ರವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) — ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) — ೮ ಆಣೆ
ಶಿವಾದ್ವೈತಕರಭಾಷ್ಯ (ಸಂಸ್ಕೃತ) — ೮ ಆಣೆ
ವೀರಶೈವಮಹಾತ್ಮರು — ೮ ಆಣೆ
ಜಿನವಧ್ಯಾಂತವಿವಾಕರ (೨ನೆಯ ಆವೃತ್ತಿ) — ೮ ಆಣೆ

ಆಗಮಪರಿಜ್ಞಾನ — ೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) — ೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ — ೮ ಆಣೆ
ಶ್ರೀಜಗದ್ಗುರು ವಿಶ್ವಕರ್ಮವಿಜಯ ನೃತ್ಯಕೈಮಾಲಿಕಾ — ೮ ಆಣೆ
ಕನ್ನಡ ನ್ಯಾಯ ಶಕರಮ್ — ೮ ಆಣೆ
ಸಿದ್ಧಾಂತಸಾರಾವಳಿ (ಶ್ರೀವೀಚನಶಿವಾಚಾರ್ಯಕೃತ) — ೧೨ ಆಣೆ
ಶಿಷಾಸೂತ್ರಸಿದ್ಧಾಂತದರ್ಪಣ — ೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ — ೧ ರೂ
ಮೋಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) — ೧ ರೂ
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ) — ೧ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ — ೧ ರೂ
ವೀರಮಾಹೇಶ್ವರಚಂದ್ರಿಕೆ — ೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ತ್ರಯಂಬ್ಯಕವಾದುದು ೩ನೆಯ ಆವೃತ್ತಿ) — ೧॥ ರೂ.
ಶ್ರೀಕರಭಾಷ್ಯಂ (೨ ನೆಯ ಆವೃತ್ತಿ) — ೧॥ ರೂ
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್ — ೧॥ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮತ್ತು ಕುಟಿಲಾಗಮ ಸೂಕ್ಷ್ಮಾಗಮಗಳಿಂದ ಉಗಿರುತ್ತಾದುದು) — ೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) — ೨ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು) — ೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) — ೨॥ ರೂ
A brief life sketch of Pandit Sri Kashinatha Shastr (English) 4 As
The Philosophical Aspect of Viraśaivism (English) 8 As
Speeches by Pandit Shri Kashinatha Shastriji (English) 12 As
ಲಿಂಗಧಾರಣವಿಧಿ (ಸಂಸ್ಕೃತ) ೩ ಕ
ವೀರಶೈವರತ್ನ (ಮರಾಠಿ) ೩ ಕ ೧-೮-೦
ಮಹಾನಾರಾಯಣೋಪನಿಷತ್ (ಶೈವಶಾಖಾ-ಸಂಸ್ಕೃತ) ೧ ಕ.
ಸಚಿತ್ರಿಕಾಪ್ರಕಾರಿಕಾ (ಸಂಸ್ಕೃತ) ೨ ಆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Brahanmathadhyakaha Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M 2166 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2166

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಶೀಶಾದಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಜೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪ ದೀಲೋಕಮಂ ॥

ಸಂಸ್ಥಾಪಕರು— ನಾಗಸೂರು ಬೃಹನ್ಶಾಸ್ತ್ರಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು— ನಾಗಸೂರು ಬೃಹನ್ಶಾಸ್ತ್ರಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಪಿ ಖರ್ಚು ಸೇರಿ ೩ ರೂ ೮ ಆ

ಸಂಪುಟ ೨೯] ಸೋಮವಾರ ತಾ॥ ೨೩ ನೇ ಡಿಸೆಂಬರ್ ೧೯೫೫ [ಸಂಚಿಕೆ ೩೫

ಸತ್ಪುತ್ರವ್ಯವಹಾರ

[ಬಾತ್ಮೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಸಿದ್ಧಾಂತಶಿಖಾಮಣಿಯು ಪಾಠಾಯಣಕ್ಕೆ ಸರ್ವೋತ್ತಮವಾಗಿರುವುದು

ಶ್ರೀಜಗದ್ಗುರು ರೇಣುಕಾಚಾರ್ಯರ ದಿವ್ಯಗೀತೆಯು "ಸಿದ್ಧಾಂತಶಿಖಾಮಣಿ" ಎಂಬ ಸುಪ್ರಸಿದ್ಧ ನಾಮಾಂಕಿತದಿಂದ ಸಂಸ್ಕೃತ ಹಾಗೂ ಕರ್ನಾಟಸಾಹಿತ್ಯದಲ್ಲಿ ಪ್ರಕಾಶಿಸತೊಡಗಿದೆ ಕೇವಲ ಸಂಸ್ಕೃತ ಭಾಷೆಯಲ್ಲಿ ಪ್ರಾದುರ್ಭವಿಸಿದ ಸಿದ್ಧಾಂತಶಿಖಾಮಣಿ ಗ್ರಂಥಕ್ಕೆ ಕರ್ನಾಟಕ ಭಾಷೆಯಲ್ಲಿ ವ್ಯಾಖ್ಯಾನವನ್ನು ಕೈ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ಒದಗಿ ಮುದ್ರಣಗೊಳಿಸಿ ಪ್ರಸಿದ್ಧಮಾಡಿರುವದಷ್ಟೆ ಈ ಮಹಾಗ್ರಂಥದ ಪ್ರಾದುರ್ಭಾವದಿಂದ ಪ್ರತಿಯೊಬ್ಬ ವೀರಶೈವನಿಗೂ ಪರಮ ಸಂತೋಷವಾಗಿದೆ ಸಿದ್ಧಾಂತಶಿಖಾಮಣಿ (ರೇಣುಕ ಗೀತೆ) ಯ ನಾವದು ಅಖಿಲಮಾನವಸ್ತೋಮಕ್ಕೆಲ್ಲ ಕೇಳುವಂತೆ ಸಮಸ್ತಭಾಷೆಯಲ್ಲೂ ಇದು ಪರಿವರ್ತಿಸಲ್ಪಡ ಬೇಕಾದುದು ಅವಶ್ಯ ಈ ರೇಣುಕಗೀತೆಯು ಕೇವಲ ವೀರಶೈವ ಮತಪ್ರಚಾರಕಾಗಿದ್ದರೂ ಇದರೊಳಗೆ ಅತಿಶಯವಾದ ವಿಚಾರಗಳು ಪ್ರಸಂಗಕ್ಕೆ ಕಲ್ಯಾಣಕರವಾಗಿರುವವು ಈ ಗೀತೆಯಲ್ಲಿ ಜ್ಞಾನಪ್ರಧಾನವಾದ ಕರ್ಮಯೋಗವು, ಸೆಗಣಾ ಪ್ರತಿಪಾದಿಸಲ್ಪಟ್ಟಿದ್ದು ಮೋಕ್ಷ ಮಾರ್ಗದ ಸರಳತೆಯನ್ನು ವಿಶ್ಲದಿಸುವ, ಅವೈಭವಿವಾದ ತಾತ್ಪರ್ಯವಿಚಾರಗಳು ಅಡಕವಾಗಿರುತ್ತವೆ ಮಲಾದ್ವೈತ ಹಾದ ಜೀವನು ಶಿವೇಜನ್ಸಿವಿಂದ ಯುಕ್ತನಾಗಿ ಶಿವತಾ ಪಾತ್ಮಕ ಸಾಧನಪ್ರಯೋಗಗಳು ಈ ರೇಣುಕಗೀತೆಯು ಬಹು ಸುಲಭವಾಗಿ ಬೋಧಿಸುತ್ತದೆ ಇದನ್ನು ಸಮಸ್ತ ಆಸ್ತಿಕಮತಾತ್ಮಯಾಯಿಗಳೂ ಅತ್ಯಗತ್ಯವಾಗಿ ಅಧ್ಯಯನಮಾಡಬೇಕಾಗಿದೆ ಶ್ರೀರೇಣುಕರದಿವ್ಯೋಪದೇಶವಿ ಲೌಕಿಕಸಾಗರಕ್ಕೆ ಬಂಧುರವಾದ ಸೇತುವೆಯಂತಿದ್ದು, ವಾರಮಾರ್ಥಿಗೆ ಸಾಮಾನ್ಯಲಾಭದನ್ನು ಅಂತಮಾಡಿಕೊಡುವುದು ಈ ಗೀತೆಯಲ್ಲಿ ನೈತಿಕಮುಕ್ತಾಫಲಗಳೂ, ಧಾರ್ಮಿಕವಿಚಾರ ರತ್ನಗಳೂ ತತ್ವಾನುಭವವೂ ಪ್ರಕಾಶಿಸುತ್ತಿವೆ, ಇಂಥ ಮಹತ್ತರವಾದ ಬೋಧಕ ಗ್ರಂಥಗಳು ಪ್ರಪಂಚದಲ್ಲಿ ಅತ್ಯಂತ ವಿರಳವೆಂದೇ ಹೇಳಬೇಕಾಗಿದೆ

ಸಮಸ್ತ ಭಾರತೀಯರಿಗೆ ಈ ಧರ್ಮಗ್ರಂಥವು ಪರಮ ಪವಿತ್ರವಾದುದಾಗಿದೆ ಶೈವ ವೀರಶೈವರಿಗಂತೂ ಈ ಮಾನವು ಪ್ರೀತಿಕರವಾದದ್ದು ಇಂಥ ಶುಭಮಾಸದಲ್ಲಿ ಪ್ರತಿಯೊಬ್ಬನೂ ಜ್ಞಾನೈಶ್ವರ್ಯಾಪ್ತಿಗಾಗಿ ಶಿವಪ್ರತ್ಯ ಪಾಠಾಯಣಾದಿಗಳನ್ನಿಟ್ಟುಕೊಳ್ಳುವದು ಸಂಪ್ರದಾಯ ವಾಗಿದೆಯಷ್ಟೆ ವೀರಶೈವರ ಭಾಗ್ಯೋದಯವೇ ಪ್ರಾದು ರ್ಭವಿಸಿದಂತೆ ಈ ಮಾಸದ ಪಾಠಾಯಣಕ್ಕೆ ಸಿದ್ಧಾಂತ ಶಿಖಾಮಣಿಯು ಸಿದ್ಧವಾಗಿದೆ ಇದರ ಪಾಠಾಯಣದಿಂದ ವೀರಶೈವಸಿದ್ಧಾಂತಜ್ಞಾನವು ಸುಲಲಿತವಾಗುವದು ಅದು ಪರಿಂದ ಧನತಾರಕವಾದ ಈ ರೇಣುಕಗೀತೆಯ ಪಾಠಾ ಯಣ ಶ್ರವಣಾದಿಗಳು ಪ್ರತಿಯೊಬ್ಬ ವೀರಶೈವರ ಮನೆ ಯಲ್ಲಿ ಸಾಗಬೇಕು ಮುಂದೆ ಬರುವ ಶ್ರಾವಣಮಾಸ ದಲ್ಲಿ ರೇಣುಕಗೀತೆಯ ಪಾಠಾಯಣದಿಂದಲೂ ರೇಣುಕ ಗೀತೆಯ ಮಹಾಪುರಾಣ ಶ್ರವಣದಿಂದಲೂ ಕೂಡಿ ಗುರುಭಕ್ತಿ ಪ್ರಕಾಶವನ್ನು ಪ್ರಜ್ವಲಿಸಬೇಕಾಗಿ ಪ್ರಾರ್ಥಕೆ

ಶ್ರೀ ಶಿವಲಿಂಗಶರ್ಮ ಆರಾಧ್ಯಮಠ

ಶ್ರೀಶಿವಲಿಂಗಸೂರ್ಯೋದಯನಾಟಕ ಕಥಾಸಾರಾಂಶ

ಸಂಗ್ರಾಹಕರು—ಶ್ರೀ ಪ ಬ್ರ। ಶಿವಪ್ರಕಾಶಸ್ವಾಮಿಗಳು ಉಜ್ಜಯನಿಪೀಠ

ಬೆಂಗಳೂರಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ರ್ಮಾ ಜೆ ರುದ್ರಪ್ಪನವರು ಧಾರ್ಮಿಕ ತತ್ತ್ವಜಿಜ್ಞಾಸಿಗಳು ಇವರು ಕಾಶ್ಮೀರದ ಶಿವಾದ್ವೈತ ತತ್ತ್ವಪ್ರತಿಪಾದಕವಾದ ' ಪ್ರತ್ಯಭಿಜ್ಞಾಹೃದಯ ' ವೆಂಬ ಗ್ರಂಥವನ್ನು ಪಂಡಿತರ ಸಹಾಯದಿಂದ ಕನ್ನಡಿಸಿದ್ದಾರೆ ಮತ್ತು ವೇಲ್ಯಂತ ಶಿವಲಿಂಗಸೂರ್ಯೋದಯವೆಂಬ ಸಂಸ್ಕೃತ ನಾಟಕ ವನ್ನು ಸಹ ಈಗ ಅಚ್ಚುಮಾಡಿಸುತ್ತಿದ್ದಾರೆ ವೀರಶೈವ ತತ್ತ್ವಪ್ರತಿಪಾದನೆಮಾಡುವ ನಾಟಕವೆಂದರೆ ಇದೇ ನೊದ ಲನೆಯದೆಂದು ಹೇಳಬಹುದು ಈ ನಾಟಕವನ್ನು ಈಸಾರಿ ಸಂಸ್ಕೃತ ಕಾಲೇಜಿನ ಗಣಿತ ಮಹೋತ್ಸವದ ಸಮಯದಲ್ಲಿ ವಿದ್ಯಾರ್ಥಿಗಳು ಅಭಿನಯಿಸಿದರು

ನಾಟಕದ ಸಾರಾಂಶ

ಗಹನವಾದ ತತ್ತ್ವವಿಚಾರಗಳನ್ನು ಜನಸಾಮಾನ್ಯಕ್ಕೆ ಕಲೆಗಳ ಮೂಲಕ ತಿಳಿಯಪಡಿಸುವುದು ನವ್ಯ ಹಿರಿ ಯರ ಸಂಪ್ರದಾಯ ನವ್ಯ ಸಂಸ್ಕೃತಿಯಲ್ಲಿ ಕಾವ್ಯ ನಾಟಕ ಮಾತ್ರವಲ್ಲದೆ ವಚನ, ಪದ ಲಾವಣಿ, ಕೃತಿ, ಕಥೆ ಪುರಾಣಾದಿಗಳೇ ಮೊದಲಾದ ಸಂಗ ಮಾರ್ಗ ದಿಂದಲೂ ತತ್ತ್ವವನ್ನು ಬೋಧಿಸುವುದು ವಾಡಿಕೆಯಾಗಿದೆ ಮೇಲಿತ್ತ ಮಟ್ಟಿದ ತತ್ತ್ವವಿಜಾರಗಳನ್ನು ಯಾವ ಭಾಷೆ ಯಲ್ಲಿಯೇ ಆಗಲಿ ಸುಲಭವಾಗಿ ತಿಳಿಯಪಡಿಸುವುದು ಕತ್ತ ಇದಕ್ಕೊಳ್ಳಬೇಕೆಂಬ ಈ ಬಗೆಯ ಸಾಹಿತ್ಯ ಪರಂಪರೆ ಗಳನ್ನೂ ರೂಪಕಗಳನ್ನೂ ಹೆಚ್ಚಾಗಿ ಬಳಸಿರುತ್ತಾರೆ ಈ ವಿಧವಾದ ರಚನೆಯುಳ್ಳ ಅಧ್ಯಾತ್ಮ ವಿಷಯಗಳನ್ನು ತಿಳಿಸುವ ನಾಟಕಗಳು ಸಂಸ್ಕೃತ ವಾಙ್ಮಯದಲ್ಲಿ ಇಪ್ಪತ್ತು ಮುವ್ವತ್ತು ಈಗಲೂ ದೊರೆಯುತ್ತವೆ ಹಿಂದಿನ ರಾಜರು ಮಂಡಲೇಶ್ವರರು ಅನೇಕರೀತಿಯಿಂದ ಸಂಸ್ಕೃತಿ ಯನ್ನು ರಕ್ಷಿಸಿರುತ್ತಾರೆ ಮತ್ತು ಸಾಮಾನ್ಯ ಜನರಲ್ಲಿ ಪ್ರಚಾರ ಮಾಡಿರುವ ಇರುತ್ತಾರೆ

ರಂಗಭೂಮಿಯಲ್ಲಿ ಪ್ರದರ್ಶಿಸಲು ಈ ನಾಟಕವನ್ನು ಅರು ದೃಶ್ಯಗಳಾಗಿ ಮಾಡಿದೆ

ದೃಶ್ಯ ೧- ಸೂತ್ರಧಾರ—ಸಂಪ್ರದಾಯದಂತೆ ಸೂತ್ರ ಧಾರನು ರಂಗಭೂಮಿಗೆ ಪ್ರವೇಶಿಸಿ ತ್ರಿವಿಧಲಿಂಗೋಪಾಸ ನಕ್ರಮವನ್ನು ಪಡೆಸಿದಿದ ಗುರುವಾದ ವೀರೇಶವನ್ನು " ಶಿವಲಿಂಗಸೂರ್ಯೋದಯ" ವೆಂಬ ನಾಟಕವನ್ನು ಸಂಸ್ಕೃತದಲ್ಲಿ ರಚಿಸಿದ ಮಲ್ಲಣಾರ್ಯನೆಂಬ ಕವಿಯನ್ನೂ ಆ ಕವಿಗೆ ಆಶ್ರಯಕೊಟ್ಟ ಕಂದುಕೂರಿ ಬಸವೇಶ್ವರನೆಂಬ ಮಂಡಲೇಶ್ವರರನ್ನೂ ಪರಿಚಯಮಾಡಿ ಸುತ್ತಾನೆ

ದೃಶ್ಯ ೨-ಕಾಮರತಿಯರ ಪ್ರವೇಶ—ಕಾಮನು ತನ್ನ ಪ್ರಭಾವವನ್ನು ವರ್ಣಿಸುತ್ತಾ ಎಂಥ ಯೋಗಿಯೂ ಕಾಮ ಕ್ರೋಧ ಲೋಭಗಳನ್ನು ಆತಕ್ರಮಿಸಲು ಸಾಧ್ಯವಿಲ್ಲ ನೆಂದೂ ಇದರ ಫಲವಾಗಿ ಇಹಲೋಕ ಸುಖಗಳಲ್ಲಿಯೇ ಆಸಕ್ತನಾಗಿರುವನಿಗೆ ಶಿವಸಾಕ್ಷಾತ್ಕಾರವಾಗುವುದಿಲ್ಲ ವೆಂದು ಹೇಳುತ್ತಾನೆ ರತಿಯು ಇವನ ಅಭಿಪ್ರಾಯ ವನ್ನು ಪುಷ್ಟೀಕರಿಸದೆ ಸರ್ವಜ್ಞಾನಪ್ರಭಾವದಿಂದ ಕಾಮ ಕ್ರೋಧಗಳನ್ನು ಜಯಿಸಬಹುದು ಶಿವಸಾಕ್ಷಾತ್ಕಾರ ಪಡೆಯಬಹುದೆಂದು ಶಂಕಿಸುತ್ತಾಳೆ ರತಿಯ ಪ್ರಶ್ನೆಗೆ ಕಾಮನು ಉತ್ತರವಾಗಿ ಶಿವನಿಂದ ಹುಟ್ಟಿದ ಕ್ರಿಯಾ ಶಕ್ತಿ ಸಂಕಲ್ಪಗಳು ಎರಡು ಬಗೆಯಾಗಿವೆ ಜ್ಞಾನಸಂಕತಿ ಯಲ್ಲಿ ಯಮನಿಯಮವಾದಿಗಳು ಅಧ್ಯಾತ್ಮಿಕ ವಿಕಾಸಕ್ಕೆ ಉಪಕರಿಸುವ ಸಾಧನಗಳಾಗಿವೆ ಇವುಗಳಿಗೆ ಸುಜ್ಞಾ ನವು ಒಡೆಯು ಈ ಎರಡು ಪಕ್ಷಗಳಿಗೂ ಆನಾದಿಯಾಗಿ ಭೇದವಿಹ ಇದ್ದೇ ಇದೆ ತನ್ನ ವೌರ ತದಿಂದ ಸುಜ್ಞಾನ ಪಕ್ಷವನ್ನು ನಾವು ಗೆಲ್ಲ ಶ್ರೀವೆ ಎಂದು ಹೇಳಿ ವಿಜೃಂಭಿ ಸುವನು

ದೃಶ್ಯ ೩ ಸಜ್ಞಾನ ಪ್ರಜ್ಞಾ ಇವರ ಪ್ರವೇಶ—ಸುಜ್ಞಾನವು ತನ್ನ ಹಂಡತಿಯಾದ ಪ್ರಜ್ಞೆಯನ್ನು ಕುರಿತು ಹೀಗೆ ಹೇಳುತ್ತಾನೆ ಈ ವಿಶ್ವದ ವೈಚಿತ್ರ್ಯ ನೆಲ್ಲಾ ಕ್ರಿಯಾಶಕ್ತಿ ಅಥವಾ ಮಾಯಾವಿಲಾಸ ಒದ್ದ ದೆತೆಯಲ್ಲಿ ಜೀವಾತ್ಮನು ಕ್ರಿಯಾಶಕ್ತಿ ಅಥವಾ ಮಾಯೆ ಯಿಂದ ಅನೇಕತ್ವವನ್ನು ಪಡೆದ. ಒಗೆ ಬಗೆಯ ತೊಂದರೆಗಳನ್ನನುಭವಿಸುತ್ತಿರುತ್ತಾನೆ ಈ ಮಾಯೆಯು ಪ್ರಭಾವದಿಂದಲೇ ಜೀವಾತ್ಮನು ಅಣವಾದಿ ಮಲಗಳಿಂದ ಸ್ವರೂಪ ಸಂಕೋಚವನ್ನು ಪಡೆದು ಅನ್ನ ಮಯಾದಿ ಕೋಶದಿಂದ ಅವೃತನಾಗಿ ಒಂಭತ್ತುಭಾಗಿ ಲುಳ್ಳ ಶರೀರದಲ್ಲಿ ಬಂಧಿತನಾಗಿದ್ದಾನೆ ಈ ಬಂಧನದಿಂದ ಬಿಡುಗಡೆಯಾಗಬೇಕಾದರೆ ಜ್ಞಾನಪ್ರಸಂತತಿಯಾದ ಯಮ ನಿಯಮಾದಿಗಳಿಂದ ಬಾಹ್ಯ ಮತ್ತು ಅಂತರಂಗ ಶುದ್ಧಿ ಯನ್ನು ಪಡೆದು ಧಾರಣಾಧ್ಯಾನಗಳ ಮೂಲಕ ಷಟ್ ಸ್ಥಲ ವಿಮರ್ಶೆಯಿಂದಿನೆ ಸಾಕ್ಷಾತ್ಕಾರವನ್ನು ಪಡೆಯ ಬೇಕು ಈ ಗುರಿಯನ್ನು ಸ್ಪಷ್ಟೀಯಾಗಿ ಏಳ್ಬೆ ಸೋಪು ದಿಂದ ಸಾಧಿಸುತ್ತಾನೆ ಎಲ್ಲದರ ಒಳಹಾಯಸುವೆನು ಇದ ರಿಂದ ಶಿವಭಕ್ತಿಯುಕ್ತಕ್ರಿಯಾಗುವದು ಈ ಭಕ್ತಿಯ ಪ್ರಭಾವದಿಂದ ಪಿಂಡಾದಿ ಶೂನ್ಯಶ್ಯಕಪರೆಗಿಯವರೆಗೂ ನೊರೊಂದು ಶ್ರೇಣಿಗಳನ್ನು ಕ್ರಮ ಕ್ರಮವಾಗಿ ಪರಿಶಾಕ ದಿಂದ ಸಾಕ್ಷಾತ್ಕರಿಸುವುದರ ಮೂಲಕ ಜೀವಾತ್ಮನಿಗೆ ಬಂಧವಿಮೋಚನೆಯಾಗುವುದು

(೩ ನೇ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ

೧೯೫೫ ನೆಯ ಡಿಸೆಂಬರ್ ತಾ|| ೩೭ ನೆಯ ಸೋಮವಾರ

ಕನ್ನಡ ಸಾಹಿತ್ಯ ಸಮ್ಮೇಳನ

೩೮ ನೇ ಕನ್ನಡ ಸಾಹಿತ್ಯ ಸಮ್ಮೇಳನವು ಹೈದಾಬಾದ ಸಂಸ್ಥಾನದಲ್ಲಿರುವ ರಾಯಚೂರು ನಗರದಲ್ಲಿ ಶ್ರೀಮಾನ್ ಆದ್ಯ ರಂಗಾಚಾರ್ಯ (ಶ್ರೀರಂಗ) ದವರ ಅಧ್ಯಕ್ಷತೆಯಿಟ್ಟು ಜಿಲ್ಲೆಯ ಮುಖ್ಯಮಂತ್ರಿಗಳಾದ ಶ್ರೀ ಬಿ ರಾಮಕೃಷ್ಣರಾಯರ ಪ್ರಾರಂಭೋತ್ಸವದೊಡನೆ ಇದೇ ೧೯೫೫ ನೇ ಇಸ್ವಿ ಡಿಸೆಂಬರ್ ತಾ|| ೨೫, ೨೬, ೨೭ ಈ ಮೂರುದಿನಗಳ್ಳಲ್ಲಿ ನಡೆಯುತ್ತಿರುವುದು ಕನ್ನಡಿಗರೆಲ್ಲರ್ಲ ಆನಂದವನ್ನು ಉಂಟುಮಾಡುತ್ತಿದೆ

ಇದೇ ವರ್ಷದ ಜೂನ್ ತಿಂಗಳಲ್ಲಿ ಮೈಸೂರಿನಲ್ಲಿ ನಡೆದ ೩೭ ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ನಾಡಿನ ಏಕ್ಯತೆಯನ್ನೇ ಸ್ಪರ್ಧಾನಗುರಿಯಾಗಿಟ್ಟುಕೊಂಡು ನಡೆಸಿದ್ದರಿಂದ ಫಲವಾಗಿ ಇಂದು ಎಲ್ಲಾ ಕನ್ನಡಿಗರೂ ಒಂದುಗೂಡಿದ್ದೆವು ಸುಯೋಗವು ಪ್ರಾಪ್ತವಾಗಿರುತ್ತದೆ ಆ ಅವಂದಿರೂಪಚನೆಗಾಗಿ ರಾಯಚೂರಿನ ಕನ್ನಡಿಗರು ಎಲ್ಲ ಕನ್ನಡ ಬಂಧುಗಳನ್ನು ಪರಿಚಯಮಾಡಿಕೊಳ್ಳುವ ಆಶಯದಿಂದ ಇಪ್ಪತ್ತು ಆತುರದಿಪ್ಪತ್ತು ಅಂದರೆ ಅರೇ ತಿಂಗಳಲ್ಲಿ ಪುನಃ ಸಮ್ಮೇಳನ ವಿಷಯಕ್ಕಿಟ್ಟಿದ್ದು ಸಂತೋಷದ ಪರಮಾವಧಿಯನ್ನು ತೋರ್ಪಡಿಸಿದರೆಂಬುದು ಹೈದ್ರಾಬಾದ ಸಂಸ್ಥಾನದ ಮಹಾರಾಷ್ಟ್ರ, ಆಂಧ್ರ, ಕನ್ನಡ ಜನತೆಯನ್ನು ಆಯಾ ಭಾಷಾವಾರ ಪ್ರಾಂತ್ಯಗಳಿಗೆ ಸೇರಿಸಿದ ಶ್ರೀ ಬಿ ರಾಮಕೃಷ್ಣರಾಯರು ಶಾಶ್ವತ ಕೀರ್ತಿಗೆ ಕಾರಣರಾಗಿದ್ದಾರೆ ಈ ಸಮ್ಮೇಳನಕ್ಕೆ ಮೂಲಆಧಾರವಾದ ಇವರ ಉಪಕಾರವನ್ನು ಸ್ವರ್ಣಾಕ್ಷರಗಳಿಂದ ಒರೆದಿಡತಕ್ಕದ್ದಾಗಿರುವುದು ಪ್ರಸ್ತುತ ಪ್ರಸಂಗದಲ್ಲಿ ಅಮರಜ ಕರ್ನಾಟಕ ಪ್ರಾಂತರಚನೆಗೆ ಅಧಾರಭೂತರಾಗಿ ವಿಶ್ವ ಪ್ರಯತ್ನ ಮಾಡಿದ ವೈ||ಸಾರಿ ನುಡಿಮುಯಂತ್ರಿ ಶ್ರೀ ಕೆ ಹನುಮಂತಯ್ಯನವರು ಎ ಪಿ ಸಿ ಸಿ ಅಧ್ಯಕ್ಷ ಶ್ರೀ ಎಸ್ ನಿಜಲಿಂಗಯ್ಯನವರು, ಡಾ|| ಆರ್ ನಾಗೇಶ ಗೌಡರು, ಶ್ರೀ ಸಿದ್ಧವೀರಪ್ಪನವರು, ಶ್ರೀ ನಿಜಲಿಂಗಪ್ಪನವರು ಶ್ರೀ ಹೆಚ್ ಚಿನ್ನಪ್ಪನವರು ಶ್ರೀ ತಿರಂಗಾ. ಕಾರಂತರು, ಶ್ರೀ ಶಿವಮೂರ್ತಿಸ್ವಾಮಿ ಮೊದಲಾದ ಅನೇಂತಾನಂತ ಕನ್ನಡಾಭಿಮಾನಿಗಳನ್ನು ಸೃಷ್ಟಿಸಿ ಆವರಿಗೆ ವಂದನೆಗಳನ್ನು ಏರ್ಪಿಸುವುದು, ಶುಭವನ್ನು ಕೋರುವುದು, ಸಮ್ಮೇಳನದ ಅಧ್ಯಕ್ಷರ್ಯವ್ಯಪಾಗಿರುತ್ತದೆ

ಹಿಂದಿನ ಸಾಹಿತ್ಯ

ಪುರಾತನಕಾಲದಿಂದ ಸಾಹಿತ್ಯವು ರಾಜರನ್ನು ಅವಲಂಬಿಸಿಕೊಂಡು ಬಂದಿತ್ತು ಆ ಪ್ರಕಾರ ರಾಜಾಶ್ರಯದಿಂದ ಬೆಳೆದ ಪಂಪ, ಪೊನ್ನ, ರನ್ನ, ಲಕ್ಷ್ಮೀಶ, ರತ್ನಾಕರ, ಹರಿಹರ, ರಾಘವಾಂಕ, ಚಾಮರಸ, ಭೀಮ, ವಿರೂಪಾಕ್ಷ, ಕುಮಾರ ವ್ಯಾಸ, ಕುಮಾರ ವಾಲ್ಮೀಕಿ, ಶಂಕ ಮೊದಲಾದ ಉದ್ದಾಮ ಕವಿಗಳ ಕನ್ನಡ ಸಾಹಿತ್ಯವು ಮನರಂಜನೆಯೊಡನೆ ಅಧ್ಯಾತ್ಮಜ್ಞಾನಪ್ರಧಾನವಾದ ಪ್ರಗತಿಯನ್ನು ಹೊಂದಿತ್ತೆಂಬುದು ಅವರ ಗ್ರಂಥಗಳಿಂದ ವ್ಯಕ್ತವಾಗುತ್ತದೆ ಇವರ ಪಾಪ್ಯಾಯಕ್ಕೆ ಮೆರಗು ಕೊಟ್ಟು ವಿಶಾಸಗೊಳಿಸಿದ ಜಾಮುಂಡರಾಯ, ನಾಗವರ್ಮ, ಜನ್ನ, ನಯ್ಯಸೇನಾರ್ಯ, ಷಡಕ್ಷರಿ, ರುದ್ರಭಟ್ಟ ಮೊದಲಾದ ಕವಿಗಳಂದಲೂ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ ದೊರೆಯಿತು ಹಾಗೇ ಮುಂದೆ ಮುಂದೆ ಬಂದಂತೆ ಎಷ್ಟೋ ಕನ್ನಡ ಸಾಹಿತಿಗಳು ಕನ್ನಡ ಲಿಪಿಯಲ್ಲಿಯೂ ಭಾಷೆಯಲ್ಲಿಯೂ ಎಷ್ಟೋ ಕಿಬ್ಬುದಿಗಳನ್ನು ಮಾಡಿ ಶ್ರೇಯಸ್ಸಿಗೆ ಕಾರಣರಾದರು. ಮೋಕ್ಷ ಪ್ರದವಾದ ಶಿವಗೀತೆ, ಭಗವದ್ಗೀತೆ, ರೇಣುಕಗೀತೆಗಳು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಲ್ಪಟ್ಟವು ವಚನಾಪಿಕ ಚರಿತ್ರೆಗಳೂ, ಕಾದಂಬರಿಗಳೂ ರಚಿಸಲ್ಪಟ್ಟವು. ಹಾಗೇ ಇತ್ತೀಚೆಗೆ ಮೈಸೂರಿನ ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಕೃಪೆಯಿಂದ ಗಂಸ್ಕೃತದಲ್ಲಿದ್ದ ವೇದ, ಪುರಾಣಾದಿಗಳ ಸ್ತೋತ್ರಗಳೂ ಕನ್ನಡಕ್ಕೆ, ಪರಿವರ್ತನೆಯಾಗಿ ಇಡೀ ಭಾರತದಲ್ಲಿಯ ಎಲ್ಲ ಕನ್ನಡಿಗರಿಗೆ ಓದಲು ಸಹಾಯವಾಗಿರುತ್ತವೆ. ಇವರು ಮಾಡಿದ ಭಾಷಾಸೇವೆಯು ಅಪರಿಮಿತವಾದುದಾಗಿದೆ ಹೀಗೆ ಕಾಲಾನುಕಾಲಕ್ಕೆ ಕನ್ನಡಸಾಹಿತ್ಯವು ಬೆಳೆಯುತ್ತ ಬಂದು ಭಾರತದಲ್ಲಿ ಒಂದು ಪ್ರಾಮುಖ್ಯವಾದ ಯೋಗ್ಯತೆಯನ್ನು ಪಡೆದಿರುತ್ತದೆ

ಸದ್ಯಃ ನೈಜೂರುಕನ್ನಡ, ಮಂಗಳೂರುಕನ್ನಡ, ಧಾರವಾಡಕನ್ನಡ, ಹೈದ್ರಾಬಾದಕನ್ನಡ ಎಂದು ನಾನಾ ವಿಧ ಪ್ರಭೇದಗಳನ್ನೊಳಗೊಂಡ ಕನ್ನಡವು ಇಂದು ಸಮ್ಮಿಲಿತವಾಗಿದೆ ಎಲ್ಲಪ್ಪೂ ಕೂಡಿ ಒಂದು ರೂಪದಲ್ಲಿ ಬೆಳೆಸುವುದಕಾಗಿದೆ ಅದನ್ನು ಸಾಧಿಸಲಿಕ್ಕಾಗಿಯೇ ಹುಟ್ಟಿದ ಈ ರಾಯಚೂರ ಕನ್ನಡ ಸಾಹಿತ್ಯಸಮ್ಮೇಳನವು ೩೮ ನೆಯದಾಗಿದ್ದರೂ ಕರ್ನಾಟಕ ವ್ಯಾಪ್ತರಚನೆಯಾಲ್ಲಿ, ಮೊದಲನೆಯದೆ ದು ಹೇಳಿಬಹುದು ಈ ಸಮ್ಮೇಳನದಿಂದ ಆಗಬೇಕಾದ ಕಾರ್ಯಗಳು ವಿವಿಧವಾಗಿರುವುದು ಅವನ್ನೆಲ್ಲ ಸಾಧಿಸಲು, ಈ ಸಭೆಯು ಸಹಾಯಾಪಾದಿಕೆಂದು ಆಶಿಸಲಾಗಿದೆ

ಇಂದಿನ ಸಾಹಿತ್ಯ

ಕನ್ನಡನಾಡಿನಲ್ಲಿ ಕನ್ನಡವು ಪ್ರಾಧಮಿಕವಾಗಿ ಇಂಗ್ಲೀಸು ಮಾಧ್ಯಮಿಕ ಹಾಗು ಪ್ರೌಢ ಮತ್ತು ರಾಜಕೀಯವಾಗಿದ್ದಾಗಲೇ ತನ್ನ ಸ್ವಾತಂತ್ರವನ್ನು ಎಷ್ಟೋ ಭದ್ರವಾಗಿ ಕಾಯ್ದುಕೊಂಡು ಬಂದಿತ್ತು. ಈಗ ಪ್ರಾಥಮಿಕ, ಮಾಧ್ಯಮಿಕ, ರಾಜಕೀಯ ಸ್ಥಾನಗಳನ್ನು ತಾವೇ ಪಡೆದ ಕನ್ನಡಿಕ್ಕ ಮುಂದುವರಿಯಲು ಯಾವ ಆತಂಕವೂ ಇಲ್ಲವೆ ಬುವದು ವಿದಿತವಾಗಿರುವುದು ಅದು ದರಿಂದ ಜಗತ್ತಿನಲ್ಲಿ ವ್ಯಾಪಿಸಿರುವ ವಿಜ್ಞಾನದ ವ್ಯಾಮೋಹವನ್ನು ಹೊಡೆದೋಡಿಸಲು ಅವಶ್ಯಕವಾದ ಆಧ್ಯಾತ್ಮಿಕ ಗ್ರಂಥಗಳನ್ನು ಸರಳವಾಗಿ ತಿಳಿಯುವಂತಿಕೆ ಕನ್ನಡದಲ್ಲಿ ರಚಿಸುವದು ಮತ್ತು ಇಂಗ್ಲೀಷಿನಲ್ಲಿದ್ದ ಅಧುನಿಕ ವಿಜ್ಞಾನ-ಭೌತಿಕಶಾಸ್ತ್ರಗ್ರಂಥಗಳನ್ನು ಕನ್ನಡ ಶಬ್ದಗಳಿಂದಲೇ ರೂಪಿಸುವದು, ವ್ಯಾಕರಣದ ವ್ಯಾಮು ಖ್ಯತೆಯನ್ನು ಹಚ್ಚಿಸುವದು, ವ್ಯಾಪಾರಿಕಶಾಲೆಯಲ್ಲಿ ಬಾಲಕರ ಅಕ್ಷರಕಲೆಗಳಿಗೆ ಹೆಚ್ಚು ಗಮನಕೊಡುವದು, ಆಯುರ್ವೇದ, ಪ್ರಾಣಿಶಾಸ್ತ್ರಗಳನ್ನು, ಜ್ಯೋತಿಷ ತರಗತಿಯಲ್ಲಿ ಅಭ್ಯಾಸಮಾಡಲಿಕ್ಕೆ ಅವುಕೂಲ ಕಲ್ಪಿಸುವದು, ಅದಷ್ಟ ಚಿಕ್ಕದಾದ ಮತ್ತು ಮುದ್ದಾದ ಪ್ರಿಂಟಿಂಗ್ ಅಕ್ಷರಗಳಿಗೆ ಅವಕಾಶಕೊಡುವದು, ಟೆಲಿಗ್ರಾಫ್ ಮತ್ತು ಟೈಪ್‌ರೈಟರ್‌ಕಲಿಗಳನ್ನು ಕನ್ನಡದಲ್ಲಿಕಯಾರಿಸಿ ಪ್ರಚಾರಮಾಡುವದು. ಇವೇ ಮೊದಲಾದ ನೂತನ ಪಲಕರಣಗಳನ್ನು ಏವಗಿಸುವ ಬಗ್ಗೆ ಗಮನಕೊಡುವದು ಈ ಪೇ ಸಾಹಿತ್ಯಪರಿಷತ್ತಿನಲ್ಲಿದ್ದ ಸಾಸಾದ ಕರಾವುಗಳಾಲ್ಲ ಕಾರ್ಯಗತ ಮಾಡುವುದು ಮುಂದೆ ಜಗಬೇಕಾದ ಕಾರ್ಯಗಳಬಗೆಗೆ ಯೋಜನೆಯೊಂದನ್ನು ರಚಿಸುವದು ಪ್ರಾರಂಭಿಸಿದ ಕಾರ್ಯಗಳು ಶೀಘ್ರವಾಗಿ ನಡೆದು ಸಫಲವಾಗುವಂತೆ ನಾನಾಮೂಲಕ ಸಹಾಯ ಕೋರುವದು ಇವೇ ಪ್ರಾಮುಖ್ಯವಾಗಿರುವವು ಹೀಗೆ ಬಗೆಬಗೆಯು ಹೊಸ ರಚನಾತ್ಮಕ ದುಡಿಮೆಯು ಕನ್ನಡ ಅಭಿಮಾನಿಗಳಲ್ಲಿ ಬರದಿರೋದರಿ ಧನ್ಯಭಾರತದಲ್ಲಿ ಕನ್ನಡದ ಸ್ಥಾನವನ್ನು ಉಳಿಸಿಕೊಳ್ಳುವದು ಕಷ್ಟವೇ ಸರಿ ಭಾರತದ ಹಿರಿಯರು ಭಾಷಾವಾರ ಪ್ರಾಂತಗಳನ್ನೇರ್ಪಡಿಸಿ ಎಲ್ಲರ ಶ್ರೇಯಸ್ಸನ್ನು ನೋಡಲು ತವಕಿಸುತ್ತಿದ್ದಾರೆ ಆದ ಕಾರಣ ಎಲ್ಲ ಕನ್ನಡಿಗರು ಕನ್ನಡನಾಡನ್ನು ಕನ್ನಡೇ ಆದ ಒಂದು ಮನೆ ಎಂದು ತಿಳಿದು ಆದರ ಏಳಿಗೆಯನ್ನೂ ಏರುಬರಿಗೆಯನ್ನೂ ಸಾಧಿಸುತ್ತ ಹೋಗುವುದರ ಕಡೆಗೆ ಈಗಿನ ಸಮ್ಮೇಳನವು ಗಮನಕೊಟ್ಟು ಪೂರ್ಣಶಕ್ತಿಯನ್ನು ಕೇಂದ್ರೀಕರಿಸಿ ಅಖಂಡಕರ್ನಾಟಕದ ಅಡಿಗಲ್ಲಾಗಿ ಮುಂದುವರಿಯುವಂತೆ ಕನ್ನಡದೇವಿಯು ಅನುಗ್ರಹಿಸಲೆಂದು ಬೇಡುತ್ತೇನೆ.

ಇಂದಿನ ಪುಸಂಚಿ

ವೈದಿಕ ವೇದಾಗಮಪುರಾಣಗಳೇ ಪ್ರಧಾನವಾಗಿ ಮಾತಾಪಿತೃ ಗುರುಹಿರಿಯರಿಗೆ ಅಧೀನವಾದ ಈ ಪ್ರಸಂಚವು ಇಂದು ಕಾಂಗ್ರೇಸ, ಕಮ್ಯುನಿಸ್ಟ್, ಸೋಷಲಿಸ್ಟ್ ಮೊದಲಾದ ರಾಜಕೀಯ ಸಂಸ್ಥೆಗಳ ಮೂಲಕ ಸ್ವಾತಂತ್ರ್ಯದಲ್ಲಿ ಲೋಲಾಡುತ್ತಿದೆ. ಆದರೆ ಈ ಸ್ವಾತಂತ್ರ್ಯ ನೆಂಬುದು ದೇಶದ ಹಿತಕ್ಕಾಗಿ ಹುಟ್ಟುತೇ ಏಪಿ ಮಕ್ಕಿಯಾ ಹಿತಕ್ಕಾಗಿ ಅಲ್ಲ ಅನ್ಯಾಕ್ರಾಂತವಾಗಿದ್ದ ಭಾರತವನ್ನು ಸ್ವತಂತ್ರಗೊಳಿಸಲು ಮಹಾತ್ಮರು ಬಲವಾದ ಕಾಂಗ್ರೆಸ ಸಂಸ್ಥೆಯನ್ನು ಕಟ್ಟಿ ತನ್ಮೂಲಕ ಜಯ ಪಡೆದ ನಂತರ ಇದನ್ನು ವಿಸರ್ಜಸಬೇಕೆನ್ನುವಷ್ಟರಲ್ಲಿ ಅವರು ಪರಲೋಕವಾಸಿಗಳಾದ್ದರಿಂದ ಹಾಗೇ ಉಳಿಯಿತು. ಪ್ರಜಾಸತ್ತಾತ್ಮಕವಾದ ರಾಜ್ಯದಲ್ಲಿ ಪ್ರಬಲವಾದ ಒಂದು ಸಂಸ್ಥೆಯು ಅಧಿಕಾರಹಿಸಿರುವುದು ಪ್ರಜೆಯಲ್ಲಿ ಅಧೈರ್ಯವನ್ನುಂಟುಮಾಡುವುದು ಎಂದು ಒಳ್ಳೆದಲ್ಲವೆಂದು ಮಹಾತ್ಮರು ಆಗಾಗ್ಗೆ ತಮ್ಮ ಕಾಂಗ್ರೆಸ ಅನುಯಾಯಿಗಳಿಗೆ ಬೋಧಿಸುತ್ತಿದ್ದರು ಸತ್ಯ, ಶಾಂತಿ, ಅಹಿಂಸೆ, ಸಿತ್ಯಗಳಲ್ಲಿ ಮಿಂಚಿತ ವಾಕ್ಯಧಾರ್ಢ್ಯರು ಯಾವ ಕಾಂಗ್ರೆಸ್ಸಿನವ್ವಲ್ಲದ್ದನ್ನು ಸ್ವಾತಂತ್ರ್ಯಗಳಿಸಿದೊಂ ಡಂಥ ಕಾಂಗ್ರೆಸ್ಸಿನವ್ವಲ್ಲಿ ವೇತಪಧಾರಿಗಳೂ ಸ್ವಾರ್ಥಿಗಳೂ ಸೇರಿಕೊಂಡು ಬಂದುದರಿಂದ ಸಂಸ್ಥೆಗೇ ಕಲಂಕವರ ಹತ್ತಿದೆ ಅನೇಕ ಗಣ್ಯಾಂತರಗಳೂ ಬಿಳ್ಳುಟ್ಟುಗಳೂ ಮುಂದೆ ಬಂದು ನಿಂತಿನೆ ಕುಂಬಾರನು ಒಂದೇ ಆತಾರದ ನುಡಿಕೆಗಳನ್ನು ಮಾಡಿ ಭದ್ರತೆಗಾಗಿ ಬೆಂಕಿಯಲ್ಲಿ ಸುಟ್ಟರೂ ನಡುವೆ ಕೆಲವು ಸುಡದೆ ಮಾರೇ ಉಳಿಯು ತ್ತವೆ ಇಂಥವುಗಳಂದ ಯಾವ ಪ್ರಯೋಜನವೂ ಇಲ್ಲ. ಆದರೆ ಮಹಾತ್ಮರ ಸತ್ಯಾಗ್ರಹ ಯಜ್ಞದಲ್ಲಿ ಸಿಕ್ಕು ಪರಿಶುದ್ಧರಾದವರೂ ಉಂಟು, ಸಿಗದೆ ಕಲ್ಮಷಿಗಳಾದವರೂ ಉಂಟು ಇವರೆಲ್ಲರು ಒಂದೇ ಗುಂಪಿನಲ್ಲಿ ಬೆರೆದು ಬಂದುದರಿಂದ ಪರಿಶುದ್ಧರು ಕಲ್ಮಷಿಗಳನ್ನು ಬಿಡುವಂತಿಲ್ಲ, ಎತ್ತಿ ಹಿಡಿಯುವಂತಿಲ್ಲ; ಹೀಗಾಗಿ ವೇಶಾಚಾರ್ಯರ ಕಾರ್ಯದಲ್ಲಿ ಅನೇಕ ಅಡಚಣೆಗಳು ಬರಹತ್ತಿವೆಯೆಂಬುದು ಈಗ ನಡೆದ ಪ್ರಾಂತ ವಿಭಜನೆಯಲ್ಲಿ ಎಲ್ಲಿಂಗೂ ಮನದಟ್ಟಾಗಿರುತ್ತದೆ.

ಶಾಂತಿಯುತವಾದ ಕಾಂಗ್ರೆಸ್ಸು, ದರ್ಪಯುತವಾದ ಕಮ್ಯುನಿಸ್ಟ್, ಸಮಾನತೆಯುಳ್ಳ ಸೋಷಾಲಿಜಿಸ್ಟ್ ಇವೆಲ್ಲ ರಾಜಕೀಯ ಸಂಸ್ಥೆಗಳ ಧ್ಯೇಯವು ಸ್ವಾತಂತ್ರ್ಯದಿಕ ಕಡೆಗಿದ್ದರೂ ಕಾರ್ಯಸಾಧನೆವಿಧಾನಗಳು ಬೇರೆ ಬೇರೆಯಾಗಿರುತ್ತವೆ ಪ್ರಪಂಚದಲ್ಲಿ ಇನ್ನೂ ಎಷ್ಟೋ ರಾಜಕೀಯ ಸಂಸ್ಥೆಗಳು ಕೆಲಸಮಾಡುತ್ತಿರುವವು ದೇಶ ಸ್ವಾತಂತ್ರ್ಯ ಕ್ಕಾಗಿ ಮಹಾತ್ಮರಿಂದ ಕಟ್ಟಲ್ಪಟ್ಟಿದ್ದ ಕಾಂಗ್ರೆಸ್ ಸಂಸ್ಥೆ ಯಂತೆಯೇ ಅಮೇರಿಕಾದಲ್ಲಿ ಹುಟ್ಟಿದ ಕಾಂಗ್ರೆಸ್ ಸಂಸ್ಥೆಯು ದೇಶದ ಉನ್ನತಿಗಾಗಿ ಕೆಲಸ ಮಾಡುತ್ತಿದ್ದರೂ ಅಲ್ಲಿ ಹಣದ ಉಬ್ಬರ, ಶಪ್ಪುಪ್ರಸ್ತಗಳ ಬಲ ಹೆಚ್ಚಿರುವ ಮೂಲಕ ಕಾಂಗ್ರೆಸ್ಸಿನ ಮೂಲತತ್ವವನ್ನೇ ಮರೆಸುವ ಮಾಯಾವಿಗಳ ತತ್ವವನ್ನು ರೂಪಿಸಹತ್ತಿದೆ ಸತ್ಯ, ಶಾಂತಿಯುತವಾದ ಕಾಂಗ್ರೆಸ್ಸಿನಲ್ಲಿಯೇ ಇಂಥ ಗುಣವಿರುವಾಗ ಉಳಿದ ಸಂಸ್ಥೆಗಳ ಕಾರ್ಯಾಚರಣೆಯಲ್ಲಿ ಜ್ಞಾಪಿಸುವ ಕಾರಣವೇ ಇಲ್ಲ ಯಾವ ಸಂಸ್ಥೆಗಳಲ್ಲಿಯೂ ನ್ಯಾಯನೀತಿಯ ಸಾಧಿಯೇ ಇಲ್ಲವೆ, ತಮ್ಮದೇ ಮೇಲೆಂದು ಹೇಳುವುದರಲ್ಲಿವೆ ಪ್ರಪಂಚದಲ್ಲಿ ತಲೆಯೆತ್ತಿ ಬೆಳೆದ ಅಮೇರಿಕಾ ರಷಿಯಾ ರಾಷ್ಟ್ರಗಳು ಉಳಿದ ಜಗತ್ತಿಗೆ ಭೂತಗಳಂತೆ ಕಾಣುತ್ತಿವೆ. ಯಾವ ಫಲಿಗೆಯಲ್ಲಿ ಜಗತ್ತನ್ನು ನುಂಗುವೆನೋ ಎನ್ನುವಷ್ಟು ಭೀಕರ ಪರಿಸ್ಥಿತಿ ಪ್ರಪಂಚದಲ್ಲಿ ಒಡಮೂಡಿಬಿಟ್ಟಿದೆ ಇವರಲ್ಲಿನ ಪ್ರೀತಿಸಿದರೂ ಕಸ್ಸ ಪ್ರೀತಿಸದೆ ಇರುವುದೂ ಕಷ್ಟ ಹೀಗಾಗಿ ಜಗತ್ತು ಕಷ್ಟದಲ್ಲಿದೆ ಜಗತ್ತನ್ನೇ ಸುಟ್ಟು ಬಿಡುವ ಆಸುರೀ ಶಕ್ತಿಯೂ ಇವರಲ್ಲಿದೆ ಇವರು ಅಲ್ಲಲ್ಲಿ ತಮ್ಮ ಪೈಪೋಟಿಯನ್ನು ಬಿರುಸಿನಿಂದ ನಡೆಸುತ್ತಿದ್ದಾರೆ. ಇಡೀ ಪ್ರಪಂಚವನ್ನೇ ತಮ್ಮ ಅಂಕಿತಕ್ಕೊಳಪಡಿಸಿಕೊಳ್ಳಬೇಕೆಂಬ ಹುಚ್ಚು ಇವರ ತಲೆಯಲ್ಲಿದೆ. ಉಳಿದ ಎಲ್ಲಾ ರಾಷ್ಟ್ರಗಳೂ ಸದ್ಯಃ ಇವರ ಸಂಬಂಧದಿಂದ ದೂರ ವಿರಬೇಕೆಂದು ಪ್ರಯತ್ನಿಸುತ್ತಿದ್ದರೂ ಜನತೆಗೆ ಎಳ್ಳಷ್ಟೂ ಸುಖವಿಲ್ಲ. ಕ್ಷತ, ಕ್ಷೇತ, ದ್ಯಾಪರ, ಕಲಿಯುಗಗಳಲ್ಲಿ ಬಂದ ರಾಕ್ಷಸರ ಪೀಡೆಗಿಂತಲೂ ಈಗಿನ ಪೀಡೆಯು ಪ್ರಪಂಚಕ್ಕೆ ಮಾರಕವಾಗಿದೆ. ಇದರಿಂದ ಪ್ರಪಂಚ ವೆಲ್ಲಾ ಭೀತಿ ಮತ್ತು ದುಃಖದಲ್ಲಿ ಮುಳುಗಿದೆ. ಬಿರುಗಾಳಿ ಕಾವಳಿ, ಪ್ರವಾಹದ ಪಾವಳಿ, ಬರಗಾಲದ ಹಾವಳಿಗಳಿಂದ ಪ್ರಾಣಿಹಾನಿವೆ ನಡೆಯುತ್ತಲಿದೆ. ಹೀಗಾದರೂ ಪ್ರಪಂಚದಲ್ಲಿ ಧರ್ಮದ ಆರಿವೇ ಇಲ್ಲ. ಪರಮಾತ್ಮನು ಜೀಗನ್ನೆ ಅವತರಿಸಿ ಬೆಳೆಯುತ್ತಿರುವ ಈ ರಾಕ್ಷಸೀ ವೈಕ್ರಿಯಮ್ಮ ಕೊಸೆನಾಡಿಸಿ-ಅಭೌಗತಿಗಳಿಯುತ್ತಿರುವ ಪ್ರಪಂಚವನ್ನು ರಕ್ಷಿಸಿ ಧರ್ಮದಿಂದ ಮುಂದುವರಿಯು ವಂತೆ ಕಾಪಾಡಲೆಂದು ಬೇಡುತ್ತೇನೆ.

ಗ್ರಾಮಾಂತರಗಳಲ್ಲಿ ಕೈಕಸಬಿನ ಶಿಕ್ಷಣ ಅಗತ್ಯ

ಗ್ರಾಮಾಂತರಗಳಲ್ಲಿ ಕೈಕಸಬಿನಿಂದ ಜೀವಿಸುವ ಬಡಿಗ, ಕಮ್ಮಾರ್, ನೇಕಾರ, ಕುಂಬಾರ, ಚಿತ್ರಗಾರ, ಅಗಸ, ಸಿಂಬಿಗ, ಬಣಜಾರ, ನಾವಲಿಗ, ಮಾಡಿಗ ಮೊದಲಾದ ಜಕಾತಿ ಕಸುಬು ವಿಶೇಷವನ್ನು ಪ್ರತಿಯೊಂದು ಕೆಲಸವನ್ನೇ ಪ್ರಧಾನವಾಗಿಟ್ಟುಕೊಂಡು ಸುಸ್ಥಳ, ಸೊಮ್ಮಸ್ಥಳವಿಯಾಗಿ ಕಲಿಸುತ್ತ ಬಂದಿರುವಾಗ್ಗೆ ದೇಶ ದಲ್ಲಿ ಬಡತನಕ್ಕೆ ಅವಕಾಶವೇ ಇರಲಿಲ್ಲ. ಈಗ ಎಲ್ಲೆಲ್ಲಿಯೂ ಇಂಗ್ಲೀಶ ಓದದೇ ಹುಚ್ಚು ಜನತೆಯಲ್ಲಿ ಮಿತಿಮೀರಾ ಬೆಳೆದದ್ದರಿಂದಲೂ ಆ ಮೂಲಕ ವಿದೇಶೀ ಯಂತ್ರಗಳಿಗೆ ಅವಕಾಶ ದೊರೆತದ್ದರಿಂದಲೂ ಕೈಕಸಬು ಗಳಿಗೆ ಬಿಡಿಯಿಲ್ಲದಂತಾಗಿ ದೇಶವೆಲ್ಲಾ ನಿರುದ್ಯೋಗದಲ್ಲಿ ಬಳಲುತ್ತ ಬಡತನವನ್ನು ಅನುಭೋಗಿಸಬೇಕಾಯಿತು. ಇದನ್ನರಿತ ಮಹಾತ್ಮಾ ಗಾಂಧಿಯವರು ೧೯೩೭ ನೇ ವಾರ್ಧಾ ಶಿಕ್ಷಣ ಸಮ್ಮೇಳನದಲ್ಲಿ ಈಗ ಮಕ್ಕಳಿಗೆ ಕೊಡು ತ್ತಿರುವ ಪ್ರಾಥಮಿಕ ಶಿಕ್ಷಣದಿಂದ ತಂದೆ-ತಾಯಿಗಳಿಗೆ ಯಾವ ಪ್ರಯೋಜನವೂ ಇಲ್ಲವೆಂದೂ ಇದರಿಂದ ಮಕ್ಕಳು ದುರ್ಗುಣಗಳಿಗೆ ಅಧೀನರಾಗಿ ನಿಕೃಜೀವನೋ ಪಾಯದಿಂದ ದೂರಾಗುವರೆಂದೂ ಜೊಡಿಸಿ ಕೈಕಸಬಿನಿಂದ ಕೂಡಿದ ಶಿಕ್ಷಣಕ್ರಮವೇ ಯೋಗ್ಯವೆಂದು ಹೇಳಿದರು.

" ಕಸುಬು ಕಲಿಯ ನೂಲಕ ಕಲಿಯಿರಿ "ಎಂಬುದೇ ಗಾಂಧೀಜಿ ಶಿಕ್ಷಣಕ್ರಮದ ಇವೇ ವಾರ್ಧಾ ಶಿಕ್ಷಣ ಆಧಾರ ಮೂಲ ಶಿಕ್ಷಣ ಇದನ್ನು ಕಲಿಯಲಿಕ್ಕೆ ಯಾರೂ ವಾರ್ಧಾಕ್ಕೆ ಹೋಗಬೇಕಾಗಿಲ್ಲವಾದ್ದರಿಂದ ಮುಂದಿನ ದ್ವಿತೀಯ ಯೋಜನೆಯಲ್ಲಿ ಕೈಕಸಬಿನಿಂದ ಕೂಡಿದ ರಾಷ್ಟ್ರೀಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇ ಕೆಂದೂ ಅದಕ್ಕಾಗಿ ೧೫೦ ಕೋಟಿ ರೂಪಾಯಿ ಖರ್ಚು ಮಾಡಲಾಗುವದೆಂದೂ ಸಂಕಲ್ಪಿಸಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಶ್ರೀ ವಾಲಿಯವರು ಆಕಾಶವಾಣಿ ಯಲ್ಲಿ ಸಾರಿದ್ದಾರೆ ಆ ಪ್ರಕಾರ ಪ್ರತಿಯೊಂದು ಪ್ರಾಂತ ದಲ್ಲಿ ಪ್ರಾಥಮಿಕ ತರಗತಿಯಲ್ಲಿಯೇ ಕೈಕಸಬುಗಳು ಪ್ರಾರಂಭವಾಗುವದೆಂದು ಅನಿಸುತ್ತದೆ

ಗ್ರಾಮಾಂತರಗಳಲ್ಲಿ ಬಹುಕಾಲದಿಂದ ಹಕ್ಕಿ ಜರಿಯು ವದು, ಹಂಜಿ ಹಾಕುವದು, ನೂಲುವದು, ಕೊಡಿ ಹಾಕುವದು ಚಾಪೆಹೆಣೆಯುವದು ಇವೇ ಮೊದಲಾದ ಕೆಲಸಗಳು ಸುಮಾರಾಗಿ ಹೆಂಗಸರಿಂದಲೇ ನಡೆಯುತ್ತಿ ದ್ದವು ಈಗ ಈ ಎಲ್ಲ ಕೆಲಸಗಳನ್ನು ಯಂತ್ರವೇ ಮಾಡು ತ್ತಿರುವುದಲ್ಲದೆ ಕುಟ್ಟಿಣಿ, ಹಾಗು ಬೀಸುವ ಕೆಲಸಗಳನ್ನೂ ಸಹ ನಡೆಸುತ್ತಿರುವುದರಿಂದ ಹೆಂಗಸರು ನಿರುದ್ಯೋಗಿ ಗಳಾಗಿ ನಿಕೃಜೀವೂ ಆಗಿ ನಾನಾರೋಗಗಳಿಗೆ ತುತ್ತಾಗು ತ್ತಿದ್ದಾರೆ. ಹೆಂಗಸರ ಈ ಎಲ್ಲ ಕೆಲಸಗಳಲ್ಲಿ ಶ್ರಮಕಾಯ ಕೆಲಸವು ಶ್ರೀಸ್ತ್ರಿಯರಿಗಾಗಿರುವುದು ಉಡುಪೊಡುವ ವಜ್ರೂಷಣಕಾರರೇ ಈ ಕಲೆಯ ಧ್ಯೇಯವಾಗಿದ್ದು ಇದು ಭಾರತದಲ್ಲಿ ಎಂದಿನಿಂದಲೂ ಗೌರವದಿಂದ ನಡೆಯುತ್ತ ಬಂದಿರುತ್ತದೆ. ಉಣ್ಣೆ, ರೇಶಿಮೆ, ನೂಲು, ಜರಗಳಿಂದ ಒಟ್ಟಿಗಳಲ್ಲಿ ನಾನಾತರದ ನಕ್ಷೆಗಳನ್ನೂ ಹೂವುಗಳನ್ನೂ, ತೆಗೆಯುವುದರಲ್ಲಿ ಕಾತ್ರೀರವು ಬಹಳ ಪ್ರಸಿದ್ಧವಾಗಿದೆ ಈ ಕಸುಬಿನಲ್ಲಿ ಮಧುಮತ್ತನು ತನ್ನ ಬುದ್ಧಿಯನ್ನು ಎಷ್ಟು ಬೇಕಾದರೂಉಪಯೋಗಿಸಬಹುದು. ಎಷ್ಟುಬೇಕಾದರೂ ಸಂಪಾದಿಸಬಹುದು ಅವನ ದುಡಿಮೆಗೆ ಸೀಮೆಯೇ ಇಲ್ಲ. ಇಂಥ ಸರ್ವೋತ್ಕೃಷ್ಟವಾದ ಕಸುಬಿಯ ಕೆಲಸವು ಈಗ ಕಡಿಮೆ ಪ್ರಮಾಣದಲ್ಲಿ ನಡೆಯುತ್ತಿದ್ದರೂ ಶಾಸ್ತ್ರೀರ ಅಸ್ಸಾಮು, ಒರಿಸಾ, ಕರ್ನಾಟಕಗಳಲ್ಲಿ ಇನ್ನೆಷ್ಟು ವೈಭವ ವನ್ನು ಇಂದೂ ನೋಡಬಹುದು. ಮೈಸೂರಿನ ಎಷ್ಟೋ ಕೈಕೆಲಸಗಳು ಆಮೆರಿಕಾ, ಇಂಗ್ಲಂಡ, ಜಪಾನಗಳಲ್ಲಿ ದಂಗುಗೊಳಿಸುತ್ತಿವೆ

ಭಾರತದಲ್ಲಿ ಯಾವಾಗಲೂ ಕೈಕಸಬುಗಳಿಗೆ ಉತ್ತೇ ಜನವಿದ್ದಂತೆ ಈಗಲೂ ಸಹಾಯ ದೊರೆತಲ್ಲಿ ಯಂತ್ರ ಗಳಿಗಿಂತಲೂ ಮಿಗಿಲಾದ ಕೆಲಸವನ್ನು ಮಾಡಿ ತೋರಿಸ ಬಹುದು. ನೋಡಿ ಅನಿಂದಿಸಬಹುದು. ಹೀಗೆ ಕಲಾಭಿ ವೃದ್ಧಿ ದೃಷ್ಟಿಯಿಂದಲೂ ಆರೋಗ್ಯ ಮತ್ತು ನಿರುದ್ಯೋಗ ನಿವಾರಣಾ ದೃಷ್ಟಿಯಿಂದಲೂ ಕೈಗಾರಿಕೆಗಳ ಯಂತ್ರೀ ಕರಣವನ್ನು ಕಡಿಮೆಮಾಡಿ ಕೈಕಸಬನ್ನು ಹೆಚ್ಚಿಸುವದ ರಿಂದ ಭಾರತದಲ್ಲಿ ಮೊದಲಿನಂತೆ ಸುಭಿಕ್ಷವು ಸಾಧ್ಯತೆ ಯಾಗಿ ಅಭಿವೃದ್ಧಿರಲ್ಲಿ ಸಂದೇಹವಿಲ್ಲ. ಇದಕ್ಕಾಗಿ ಪ್ರಭುತ್ವ ಸಹಾಯವು ಭಾರತೀಯರಿಗೆ ಯಾವಾಗಲೂ ಸಿದ್ಧವಾಗಿರುತ್ತದೆ. ಆದರೆ ಭಾರತೀಯರು ಅಲ್ಪತುಷ್ಟಕ್ಕೆ ಆಕಸಿಟ್ಟು ವಿದ್ಯಾವಕ್ಕೆ ಗಮನಕೊಡುವವರೆಲ್ಲ ನಿಕೃ ಸುಖದಾಯಕವಾದ ಸಜ್ಜಾನಸಂಪಾದನೆಗಾಗಿ ಶರೀರ ವನ್ನು ದಂಡಿಸುತ್ತ ಕಾರ್ಯಾ-ವಾಚಾ-ಮನಸಾ ಶ್ರಮಿಸು ವರು. ಇದೇ ಮಾನವ ಜೀವಪದ ಗುರಿ ಪ್ರಪಂಚದ ಮೂಲೆ ಮೂಲೆಗಳಲ್ಲಿ ಹೆಸರುವಾಸಿಯಾಗಿ ಜಿರಂತ್ಯರ್ಹ ರಾದ ಮಹಾಪುರುಷರೆಲ್ಲರೂ ಇದೇ ಗುರಿಯಿಂದ ತಡೆ ದನವಾಗಿದ್ದಾರೆ ಅದಕ್ಕಾಗಿ ಅವರನ್ನು ಎಲ್ಲರೂ ಸ್ಮರಿಸು ತ್ತಿದ್ದಾರೆ. ಭಾರತೀಯರೆಲ್ಲರೂ ಅವರಂತೆ ಅದರ್ಶಪುರುಷ ರಾಗಿ ಮಾನವೀಯತೆಯನ್ನು ಗೆದ್ದು ದೇವತ್ವವನ್ನೊ ಈಕತ್ವವನ್ನೂ ಹೊಂದುವ ಮಹಾಗುರಿಯೊಂದಿಗೆ ಪ್ರಪಂಚ ವ್ಯವಹಾರಗಳನ್ನು ಸಾಗಿಸುವ ಕೈಕಸಬಿನ ಶಿಕ್ಷಣವನ್ನು ಪಡೆದು ಬಡತನ ಭೂತವನ್ನು ಹೊಡೆ ದೋಡಿಸಿ ಇಹ-ಪರ ಸುಖಿಗಳಾಗಲೆಂದು ಆಶಿ.

—ಸಂ.

ಭಾರತಕ್ಕೆಲ್ಲ ಐದು ಪ್ರಾದೇಶಿಕ ವಿಭಾಗಗಳಿರಲಿ

ಭಾರತದ ಪುನರ್ವಿಚಿತ ಪ್ರಾಂತ್ಯಗಳನ್ನು ನಾಲ್ಕು ಇಲ್ಲವೆ ಐದು ಪ್ರಾದೇಶಿಕ ವಿಭಾಗಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ಪ್ರಾದೇಶಿಕ ವಿಭಾಗಕ್ಕೂ ಸಲಹಾ ಸಮಿತಿ ಯೊಂದನ್ನು ನೇಮಿಸಬೇಕೆಂದು ಪ್ರಧಾನಿ ನೆಹರೂ ರವರು ಲೋಕಸಭೆಯಲ್ಲಿ ಅನಿರೀಕ್ಷಿತವಾಗಿ ಸಲಹೆ ಯೊಂದನ್ನು ಮಂಡಿಸಿದರು

ಪ್ರಧಾನಿಯ ಈ ಸಲಹೆಯನ್ನು ಸದಸ್ಯರು ಹರ್ಷ ಧ್ವನಿಗಳಿಂದ ಸ್ವಾಗತಿಸಿದರು.

ನೆಹರೂರವರು ಪುನರ್ವಿಂಗಡನಾ ಸಮಿತಿ ನರದಿಯ ಬಗ್ಗೆ ಮಾತನಾಡುತ್ತಾ, ತಾವು ಪ್ರಧಾನಿಯ ರೀತಿಯಲ್ಲಿ ಸಭೆಯನ್ನು ದೈತೀಯ ನಾಮಕರಣ ಮಾಡಿಲ್ಲವೆಂದೂ ಕೇವಲ ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಸಭೆಯಲ್ಲಿ ಮಂಡಿಸುವುದಕ್ಕಾಗಿಯೂ ಮಂಡಿಸಿದರು

ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಮತ್ತು ಕೇಂದ್ರ ಗಳೆಂದು ಐದು ವಿಭಾಗಗಳನ್ನಾಗಿ ವಿಂಗಡಿಸಿ ಪ್ರತಿ ಯೊಂದು ವಿಭಾಗಕ್ಕೂ ಪ್ರಾದೇಶಿಕ ಸಮಿತಿಯೊಂದನ್ನು ನೇಮಿಸಬೇಕೆಂದು ನೆಹರೂರವರು ತಮ್ಮ ಸಲಹೆಯಲ್ಲಿ ಸೂಚಿಸಿದ್ದಾರೆ.

" ಪ್ರಾದೇಶಿಕವಾಗಿ ಈ ಪ್ರಾದೇಶಿಕ ಸಮಿತಿಗಳು ಸಲಹಾ ಸಮಿತಿಗಳ ರೂಪದಲ್ಲಿ ಕಾರ್ಯನಿರ್ವಹಣೆ ಮಾಡಲಿ ಗಡಿ ಸಮಸ್ಯೆಗಳೂ, ಆರ್ಥಿಕ ಸಮಸ್ಯೆಗಳೂ ಮತ್ತಿತರ ನಾನಾ ವಿಧದ ಎಲ್ಲ ಸಮಸ್ಯೆಗಳನ್ನೂ ಎದುರಿಸಲು ಕೂಲಿಸುವಂತೆ ಕೇಂದ್ರ ಸರ್ಕಾರವೂ ಸಹ ಈ ಸಮಿತಿ ಗಳಲ್ಲಿ ಭಾಗವಹಿಸಲಿ" ಎಂದು ನೆಹರುರವರು ತಿಳಿಸಿದರು.

ಸೂಚಿತ ಪ್ರಾದೇಶಿಕ ವಿಭಾಗಗಳಲ್ಲಿ, ಪ್ರತಿಯೊಂದು ವಿಭಾಗಕ್ಕೂ ಒಂದೇ ಹೈಕೋರ್ಟ್ ಇರಲೆಂದು ಶ್ರೀ ಹೆಚ್. ವಿ ಕಾಮತ್ ಸಲಹೆ ನೀಡಿದರು.

" ಕೆಲವು ಪ್ರದೇಶಗಳಲ್ಲಿ ಒಂದೇ ಹೈಕೋರ್ಟ್ ಮತ್ತು ಒಬ್ಬರೇ ಗವರ್ನರ್ ಇರಬಹುದು. ಆದು ಮುಖ್ಯ ವಲ್ಲ ಆದರೆ ಒಂದೇ ರೀತಿಯ ಆರ್ಥಿಕ ಪರಿಸ್ಥಿತಿ ಇರಬೇಕಾದುದು ಅತ್ಯಗತ್ಯ.

ನದೀಕಣಿವೆ ಮುಂತಾವ ಭಾರೀ ಯೋಜನೆಗಳನ್ನು ನಾವು ಕೈಗೊಂಡಿರುವುದರಿಂದ ಇದು ಬಹು ಮುಖ್ಯ" ಎಂದು ನೆಹರು ಪುಡಿದರು.

ಮುಂದುವರಿಯುತ್ತಾ " ಒಟ್ಟಿನಲ್ಲಿ ಈ ಪ್ರಾದೇಶಿಕ ಸಮಿತಿಗಳು ಸಹಕಾರ ಮನೋಭಾವನೆಯನ್ನು ವೃದ್ಧಿ ಗೊಳಿಸಿ ಪ್ರತ್ಯೇಕತೆಯನ್ನು ತೊಡೆದುಹಾಕಬೇಕೆಂಬುದೇ ಪಕ್ಷ ಮುಖ್ಯೋದ್ದೇಶ. ಸ್ವಲ್ಪ ಕಾಲಾವಕಾಶದ ಈ ಸಮಿತಿಗಳು ಇನ್ನೂ ಮಹತ್ವಸ್ಥಾನ ಕೈಗೊಳ್ಳಬಹುದು" ಎಂದೂ ಪ್ರಧಾನಿ ತಿಳಿಸಿದರು.

ಪ್ರಾಂತ್ಯಗಳ ರೂಪರೇಷೆಗೆ ಭಕ್ಕೆ ಬರುತ್ತದೆಂಬ ಶಂಕೆಗೆ ಎಡೆಕೊಡದ ರೀತಿಯಲ್ಲಿ ಎಚ್ಚರದಿಂದ ಹಾಗೂ ತಾಳ್ಮೆಯಿಂದ ತಮ್ಮ ಸಲಹೆಯನ್ನು ಪರಿಶೀಲಿಸ ಬೇಕೆಂದೂ ನೆಹರು ತಿಳಿಸಿದರು.

ಹಿಂದೂಗಳೂ ಮತ್ತು ಸಿಕ್ಖರು ಒಟ್ಟಿಗೆ ಬಾಳುವುದ ನ್ನೆರಿತರೆ ಮಾತ್ರ ಹಂಜಾಬಿನ ಅಳ್ಳುರಿಯು ಸಾಧ್ಯವೆಂದು ತಿಳಿಸಿ ' ಇಲ್ಲದಿದ್ದರೆ ಬೇರೆ ಉಪಾಯವೇ ಇಲ್ಲ ' ಎಂದೂ ಅವರು ನುಡಿದರು.

(೧ ನೇ ಪುಟದಿಂದ ಮುಂದುವರೆದುದು)

ದೃಶ್ಯ ೪-ದಂಭನ ಪ್ರವೇಶ-ಮಹಾಮೋಹರಾಜನ ಅಪ್ಪಣೆಯಂತೆ ಸುಜ್ಞಾನ ಪ್ರಭುವಿನ ಪ್ರಧಾನವನ್ನು ನಾಶಮಾಡಿದ್ದೇನೆ ಈ ಲೋಕದಲ್ಲಿ ಶ್ರೀಶೈಲ ಕ್ಷೇತ್ರವೆ ಪವಿತ್ರವಾದದ್ದು ಆ ಕ್ಷೇತ್ರವಾಸಿಗಳನ್ನೆಲ್ಲ ದುರಾಚಾರಿ ಗಳನ್ನಾಗಿ ಮಾಡಿದ್ದೇನೆ ಎಂದು ವಿಜೃಂಭಿಸುವನು.

ಅಹಂಕಾರ ಪುನೇಶಿ-ಈಗ ಪ್ರಕಂಡದಲ್ಲಿ ಸರಿ ಯಾದ ಶಾಸ್ತ್ರಜ್ಞಾನವೂ ಇಲ್ಲದೆ ಲೋಕಜ್ಞಾನವೂ ಇಲ್ಲದೆ ಜನಗಳು ಕೆಡುತ್ತಲಿದ್ದಾರೆ ಪ್ರತಿಯೊಬ್ಬರೂ ತಮ್ಮಂತೇ ಹೆಚ್ಚೆಂದು ಹೊಗಳಿಕೊಳ್ಳುತ್ತಿದ್ದಾರೆ ಎಂದು ಹೇಳುವನು

ದೃಶ್ಯ ೫-ಮಹಾಮೋಹ-ಜ್ಞಾನಾಕರ ಪ್ರವೇಶ-ಲೋಕದಲ್ಲಿ ಪುಣ್ಯ ಪಾಪ ಧರ್ಮ ಕರ್ಮ ಎಂದೆಲಾ ಮುಗುಳೆಲ್ಲಾ ಶಬ್ದ ಮೋಸಗಾರರು ಯುಕ್ತಿ ಮತ್ತು ಕಲ್ಪನೆಗಳು ಎಂದು ಜ್ಞಾನಾಕರನನ್ನು ಕುರಿತು ಮಹಾ ಮೋಹನು ಸಂಭಾಷಿಸುವನು. ಅಷ್ಟರಲ್ಲಿ ಲೋಭ ಮತ್ತು ತೃಷ್ಣಾ ಇವರು ಪ್ರವೇಶಿಸುವರು ಇವರಿಬ್ಬರೂ ತಮ್ಮ ಪ್ರಭಾವದಿಂದ ಲೋಕವೆಲ್ಲಾ ವೈಮನಸ್ಯದಿಂದ ಕೂಡಿದೆ ಎಂದು ಹೊಗಳಿಕೊಳ್ಳುವರು. ಮಹಾಮೋಹನು ಇವರನ್ನೆಲ್ಲಾ ಕುರಿತು ಈ ನಮ್ಮ ಶಕ್ತಿಗಳಾದ ಸುಜ್ಞಾನ ವಿದ್ಯಾ ಶಾಂತಿ ಭಕ್ತಿ ಇವುಗಳನ್ನು ನಿರ್ನಾಮ ಮಾಡಿದೆವೆಂದು ಗರ್ಜಿಸುವನು ಮತ್ತು ತೃಷ್ಣಾ ಲೋಭ ಮೊದಲಾದವ ರನ್ನು ಈ ಕಾರ್ಯಕ್ಕೆ ಯೋಜಿಸುವನು.

ದೃಶ್ಯ ೬-ವಿದ್ಯಾ ತನ್ನ ಸಖಿಯಾದ ಶಾಂತಿಯೊಡನೆ ಪ್ರವೇಶ ವಿದ್ಯೆಯು ತನ್ನ ಮಗಳಾದ ಭಕ್ತಿಯು ಉತ್ಕೃರ್ ಯಾಗಿರುವಳೆಂದು ಹುಡುಕಿಕೊಂಡು ಪವಿತ್ರವಾದ ಶ್ರೀಶೈಲಕ್ಷೇತ್ರವನ್ನು ಸೇರುತ್ತಾಳೆ. ಅಲ್ಲಿ ವಿದ್ಯಾ ಮತ್ತು ಭಕ್ತಿ ಇವರುಗಳ ಸಂಮೇಳನವಾಗುತ್ತದೆ ಭಕ್ತಿಯೇ ಪರಮೇಶ್ವರಿ ಎನಿಸುವಳು ಸುಜ್ಞಾನಪ್ರಭುವು ಅಲ್ಲಿಗೆ ಬಂದು ವಿದ್ಯಾ ಶಾಂತಿ ಭಕ್ತಿಗಳ ಸಮವಾಯದಿಂದ ಸಂತೋಷಪಟ್ಟು ಗುರುವಿಗೆ ಇವರ ಪರಿಚಯಮಾಡಿಸು ವನು. ಗುರುವು ಕರಸ್ಪರ್ಶದಿಂದ ಶಿಷ್ಯನಿಗೆ ದೀಕ್ಷೆಯನ್ನು ಕೊಟ್ಟು ಪಡಕ್ಷರ ಮಂತ್ರವನ್ನು ಪಠಿಸಿಸಿ ಪರಿವಿತತ್ವ ಪಡೆಯಲು ಆರ್ಹನನ್ನಾಗಿ ಮಾಡುವನು. ಈ ದೀಕ್ಷಾ ಪ್ರಭಾವದಿಂದ ತಿಲಲಿಂಗ ಸೂರ್ಯೋದಯ (ತಿಮಸಾಕ್ಷಾ ತ್ಕಾರ) ವಾಗುತ್ತದೆ.

ಕೃತ್ತಿಕೋತ್ಸವಾಹ್ವಾನಪತ್ರಿಕಾ

ಜೆಯ್ಯನಾಯಕನಹಳ್ಳಿ ತಾಲೂಕಿನ ಶ್ರೀ ಕುಪ್ಪೂರು ಕ್ಷೇತ್ರದಲ್ಲಿ ಶ್ರೀಮದ್ಗುರುಸಿದ್ಧೇಶ್ವರರ ಗದ್ದಿಗೆಯು ಇದ್ದು ಪದ್ಧತಿಯಂತೆ ಪ್ರತಿವರ್ಷ ಮಾರ್ಗಶಿರ ಶುದ್ಧ ಪೂರ್ಣಿ ಮೆಯಲ್ಲಿ ನಡೆಯುತ್ತಿರುವ ರಥೋತ್ಸವವನ್ನು ಈ ವರ್ಷ ಶ್ರೀಮದ್ಗಂಭಾಪುರೀ ಜಗದ್ಗುರು ಪ್ರಸನ್ನ ರೇಣುಕ ವೀರ ಗಂಗಾಧರ ರಾಜೇಂದ್ರ ಭಗವತ್ಪಾದ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ನೆರವೇರು ವಂತೆ ನಿರ್ಧರಿಸಲಾಗಿದೆ.

ಕಾರ್ಯಕ್ರಮಗಳು

ತಾ॥ ೩೭-೧೨-೧೯೫೫ ನೇ ಮಂಗಳವಾರ ಮಹಾ ಸನ್ನಿಧಾನದವರ ಸ್ವಾಗತ.

ತಾ॥ ೩೮-೧೨-೧೯೫೫ ನೇ ಬುಧವಾರ ಬೆಳಿಗ್ಗೆ ೬ ರಿಂದ ೧೦ ಘಂಟೆಯವರೆಗೆ ಶ್ರೀಜಗದ್ಗುರುಗಳವರ ಸನ್ನಿಧಾನದಲ್ಲಿ ಸಹಸ್ರಕುಂಭಾಭಿಷೇಕವು, ಸಾಯಂಕಾಲ ೬ ಘಂಟೆಯಿಂದ ಕೇತಕೀಸಭಾಷಣಗಳು.

ತಾ॥ ೩೯-೧೨-೧೯೫೫ ನೇ ಗುರುವಾರ ಬೆಳಿಗ್ಗೆ ೧೦ ರಿಂದ ೩ ಘಂಟೆಯವರಿಗೆ ವೈಭವೋತ್ಸವವು, ಸಾಯಂಕಾಲ ೬ ಘಂಟೆಗೆ ಮಹಾದಾಸೋಹೋತ್ಸವವು, ೭ ಘಂಟೆಯಿಂದ ರಾತ್ರಿ ೧೦ ಘಂಟೆವರೆಗೆ ಭಾಷಣ, ಕೀರ್ತನ ಮತ್ತು ಶ್ರೀಜಗದ್ಗುರುಗಳವರ ಶುಭಸಂದೇಶ ಅನಂತರ ಶ್ರೀಕ್ಷೇತ್ರನಾಥ ಶ್ರೀಮರುಳಸಿದ್ಧೇಶ್ವರ ಸ್ವಾಮಿಯವರ ರಥೋತ್ಸವವು ನಡೆಯುವುದು.

ಈ ಮಹೋತ್ಸವಕ್ಕೆ ಸರ್ವರೂ ಆಗಮಿಸಿ ಶ್ರೀಕ್ಷೇತ್ರ ನಾಥ ಹಾಗೂ ಶ್ರೀಜಗದ್ಗುರುಗಳವರ ಕಂದರ್ಶನ ಶುಭಾ ಶೀರ್ವಾದವನ್ನು ಹೊಂದಿ ಧನ್ಯರಾಗಬೇಕೆಂದು ಅಪೇಕ್ಷೆ ಸುತ್ತೇನೆ.

ಶ್ರೀಷಂದ್ರಶೇಖರಸ್ವಾಮಿಗಳು, ಗದ್ದಿಗೆಮಠ

ಸಿದ್ಧಾಂತಶಿಖಾಮಣಿ
(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಕೈವಲ್ಯ ಕಲ್ಪತರುವಿನಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು. ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀ ರಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದ್ದು ದೇವನಾಗರಭಾಷೆಯಲ್ಲಿದ್ದಿತು ಅದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಗೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಕೈ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಋತಜ್ಞತೆಗೆ ಪಾತ್ರರಾಗಿದ್ದಾರೆ ಮೂರುಸೂರು ಪುಟಗಳ ಮೇಲ್ಪಟ್ಟು ಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಮೋಹಕವಾದ ಮನೋಹರ ಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಸದರ ಗ್ರಂಥದ ಎರಡನೇ ಮುದ್ರಣವು ಪಂಡಿತರ ಸಹೋದರರಾದ ವೇ॥ ಬ್ಯೆ॥ ಮಹಾದೇವಯ್ಯನವರಿಂದ ಮುದ್ರಿಸಿ ಪ್ರಕಾಶಿತವಾಗಿದೆ ಈ ಅಮೂಲ್ಯ ಗ್ರಂಥವನ್ನು ಸರ್ವರೂ ತಪ್ಪಿಸಿ ಓದಿ ಧನ್ಯರಾಗಬೇಕು ಬೆಲೆ ರೂ. 2-8-0

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪ × ೧೦ ಬೆಲೆ ೦—೪—೦
ಶ್ರೀರಾಜಗದ್ಗುರು ಪಂಚಾಚಾರ್ಯರು ಪಂಚಪೀಠಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೪ ೦—೩—೦
" " " ಚಿಕ್ಕ ಸೈಜು ಬೆಲೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಸಾಮಾನು ಫೋಟೋ ೦—೧—೬
ಶ್ರೀರೇಣುಕಾಚಾರ್ಯರು ಶ್ರೀಷಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ನ್ಯಾರ್ಥನೆಯಂತೆ ೪ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) ೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕೀರ್ತಿಧಾರಣನಾಮವನ್ನು ಪ್ರದಾನ ಮಾಡುವ ಫೋಟೋ ೦—೧—೬
ಸದ್ಯಃ ಪೀಠಾರೋಹಣಮಾಡಿರುವ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ ೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗು ೧೦ ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೬
೧೫ ಪ್ರಮಥಗಣಾಧಿಪರ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸದ್ಯ ಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧೪ ೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧೪ ೦—೪—೦
ಶ್ರೀರಂಭಾಪುರೀ ಜಗದ್ಗುರುಗಳವರ ಸದ್ಯ ಧಿಯಲ್ಲಿ ಶ್ರೀಮನ್ಮಹಂಪಾಜರವರು ವೀರಾಜಿಸುತ್ತಿರುವ ಫೋಟೋ ೦—೧—೬
ಶ್ರೀಜಗದ್ಗುರುರಂಭಾಪುರೀ ವೀರರಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ೦—೩—೦

ಮ್ಯಾನೇಜರ್—ಶ್ರೀ ಪಂಚಾಚಾರ್ಯಾ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಟೀ (೩ನೆಯ ಆವೃತ್ತಿ) ... ೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) ... ೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ) ... ೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯಕೀರ್ತನ ... ೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ) ... ೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ... ೨ ಆಣೆ
ಶಿವಶಕ್ತಿವಿಲಾಸ ... ೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ ೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ) ... ೩ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೧ನೆಯ ಆವೃತ್ತಿ) ೩ ಆಣೆ
ಋಷಿವಾದಿಗಿಲಿಷತ್ಕದರ್ಪಣ (೫ನೆಯ ಆವೃತ್ತಿ) ... ೩ ಆಣೆ
ಪಂಚಾಚಾರ್ಯಪ್ರಕಾಶ ೩ ಆಣೆ
ಪಂಚಾಚಾರ ಪ್ರಕಾಶಿಕಾ ೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ) ... ೩ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ ... ೪ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) ... ೪ ಆಣೆ
ಲಿಂಗಧಾರಣವಿಧಿ ೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) ... ೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ... ೪ ಆಣೆ
ವೀರಶೈವ ಅಂತ್ಯೇಷ್ಟಿ ಶ್ರಾದ್ಧವಿಧಿ ೪ ಆಣೆ
ವೈದಿಕಮಾಜ್ಯಯಜ್ಞಸ್ಯ ... ೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) ... ೪ ಆಣೆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ ೪ ಆಣೆ
ವೈವೋಪಸಿಹತ್ಯಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ) ... ೬ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ... ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) ... ೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) ... ೮ ಆಣೆ
ವೀರಶೈವಮತಾತ್ಪರ್ಯ ... ೮ ಆಣೆ
ಋಷಧ್ಯಾಂತದಿವಾಸರ (೨ನೆಯ ಆವೃತ್ತಿ) ... ೮ ಆಣೆ

ಆಗಮಪರಿಜ್ಞಾನ ... ೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಧಾಮಣಮು (ತೆಲುಗು) ೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ ೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣ ವಿಜಯ ನಕ್ಷತ್ರಮಾಲಿಕಾ ೮ ಆಣೆ
ಕನ್ನಡ ನ್ಯಾಯಶತಕರ್ಮ ೮ ಆಣೆ
ಸಿದ್ಧಾಂತಸಾರಾವಳಿ (ಶ್ರೀವೀಚನಶಿವವಾಚಾರ್ಯಕೃತ) ೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ ೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ ೧ ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) ... ೧ ರೂ.
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ) ... ೧ ರೂ.
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ... ೧ ರೂ.
ವೀರಮಾಹೇಶ್ವರಚಂದ್ರಿಕೆ ... ೧ ರೂ.
ವೈದಿಕಶಿವಪೂಜಾವಿಧಿ (೨ನೆಯ ಆವೃತ್ತಿ) ೧॥ ರೂ.
ಶ್ರೀಕರಭಾಷ್ಯಂ (೨ ನೆಯ ಆವೃತ್ತಿ) ... ೧॥ ರೂ.
ಶಿಷ್ಯರ ಮನೆಗೆ ರಿಜಸ್ಟರ್ ಬುಕ್ ೧॥ ರೂ.
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ ಮಕುಟಾಗಮಗಳು ಸೂಕ್ಷ್ಮಾಗಮಗಳಿಂದ ಕೂಡಿರುವುದು) ೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರವಷ್ಟೆ) ... ೨ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು ೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ... ೩॥ ರೂ.
A brief life-sketch of Pandit Sri Kashinatha Shastr (English) 4 As
The Philosophical Aspect of Virasaivism (English) 8 As
Speeches by Pandit Shri Kashinatha Shastriya (English) 12 As
ಶಿವಾಚಾರಲಕ್ಷದೀಪಿಕಾ (ಅಕ್ಕಕ) ೩ ಕ.
ವೀರಶೈವರತ್ನ (ಮರಾಠಿ) ೫ ೧-೮-೦
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯಾ-ಅಕ್ಕಕ) ೧ ಕ.
ನಂದಿಕೇಶ್ವರಕಾರಿಕಾ (ಅಕ್ಕಕ) ೨ ಆಣೆ.

ಮ್ಯಾನೇಜರ್—ಶ್ರೀ ಪಂಚಾಚಾರ್ಯಾ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Bruhanmathadhyakasha Sri Mahadevaiah at Sri Panchacharya Electric Press, Sayaji Rao Road, Mysore